ISO 9001

ISO 14001

FROM THE HOUSE OF MYSORE SANDAL SOAP

# 43ನೇ 43rd

# ವಾರ್ಷಿಕ ವರದಿ

# ANNUAL REPORT

## 2022 - 2023

ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

**KARNATAKA SOAPS & DETERGENTS LIMITED**

## ಆಡಳಿತ ಮಂಡಳಿ ನಿರ್ದೇಶಕರು

| ಹೆಸರು | ಪದನಾಮ | ನೇಮಕದ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|
| ಶ್ರೀ ಮಲ್ಲನಗೌಡ ಬಸನಗೌಡ ಪಾಟೀಲ್ | ಅಧ್ಯಕ್ಷರು | 13/06/2023 | ಈ ದಿನದವರೆಗೆ |
| ಡಾ. ಪುರದಕಟ್ಟೆ ಮನೆಮಠದ ಪ್ರಶಾಂತ್, ಐಎಫ್ಎಸ್ | ವ್ಯವಸ್ಥಾಪಕ ನಿರ್ದೇಶಕರು | 08/08/2023 | ಈ ದಿನದವರೆಗೆ |
| ಶ್ರೀ ಮನೋಜ್ ಕುಮಾರ್, ಐಎಫ್ಎಸ್ | ನಾಮನಿರ್ದೇಶಿತ ನಿರ್ದೇಶಕರು | 08/08/2023 | ಈ ದಿನದವರೆಗೆ |
| ಶ್ರೀ. ರಾಮಚಂದ್ರಪ್ಪ ರಮೇಶ್, ಐಎಫ್ಎಸ್ | ನಾಮನಿರ್ದೇಶಿತ ನಿರ್ದೇಶಕರು | 08/08/2023 | ಈ ದಿನದವರೆಗೆ |
| ಶ್ರೀ. ನಿತೀಶ್ ಕೆ. ಐಎಎಸ್ | ನಿರ್ದೇಶಕರು | 31/05/2022 | ಈ ದಿನದವರೆಗೆ |
| ಶ್ರೀ. ಕೆ.ಮಾಡಾಳ್ ವಿರೂಪಾಕ್ಷಪ್ಪ | ಅಧ್ಯಕ್ಷರು | 27/07/2020 | 07/03/2023 |
| ಡಾ. ಮಹೇಶ್ ಮಹದೇವಯ್ಯ, ಐಎಎಸ್ | ವ್ಯವಸ್ಥಾಪಕ ನಿರ್ದೇಶಕರು | 23/05/2022 | 08/08/2023 |
| ಶ್ರೀ. ವಿಕಾಶ್ ಕುಮಾರ್ ವಿಕಾಶ್, ಐಪಿಎಸ್ | ಸ್ವತಂತ್ರ ನಿರ್ದೇಶಕರು | 22/06/2021 | 08/08/2023 |
| ಶ್ರೀ. ಸಿದ್ಧಿಕ್ ಪಾಷಾ | ಸ್ವತಂತ್ರ ನಿರ್ದೇಶಕರು | 22/06/2021 | 31/03/2023 |
| ಶ್ರೀ. ಮಲ್ಲಿಕಾರ್ಜುನ ವೀರಭದ್ರಪ್ಪ ಸಾವಕಾರ್ | ನಾಮನಿರ್ದೇಶಿತ ನಿರ್ದೇಶಕರು | 29/12/2020 | 22/05/2023 |
| ಶ್ರೀಮತಿ. ಕೆ.ನಿವೇದಿತಾ ರಾಜು | ನಾಮನಿರ್ದೇಶಿತ ನಿರ್ದೇಶಕರು | 29/12/2020 | 22/05/2023 |
| ಶ್ರೀ. ಶಿವಕುಮಾರ್ | ನಾಮನಿರ್ದೇಶಿತ ನಿರ್ದೇಶಕರು | 29/12/2020 | 22/05/2023 |
| ಶ್ರೀ. ಕೇಶವಮೂರ್ತಿ ಕೆ.ಎಸ್. | ನಾಮನಿರ್ದೇಶಿತ ನಿರ್ದೇಶಕರು | 03/02/2023 | 22/05/2023 |
| ಶ್ರೀ. ಕಿರಣ್ ಅವರಾದಿ | ನಾಮನಿರ್ದೇಶಿತ ನಿರ್ದೇಶಕರು | 14/02/2023 | 22/05/2023 |
| ಶ್ರೀ. ಗಾಳೆಪ್ಪ ದೊಡ್ಡಪೂಜಾರಾಪ್ಪ | ನಾಮನಿರ್ದೇಶಿತ ನಿರ್ದೇಶಕರು | 07/03/2023 | 22/05/2023 |
| ಶ್ರೀ. ಜಯಣ್ಣ ಪುಟ್ಟಪ್ಪ ಮಲ್ಲಿಗಾರ | ನಾಮನಿರ್ದೇಶಿತ ನಿರ್ದೇಶಕರು | 02/03/2023 | 22/05/2023 |
| ಶ್ರೀ. ಮಹೇಶ್ ಬಿ. ಶಿರೂರ್, ಐಎಫ್ಎಸ್ | ವ್ಯವಸ್ಥಾಪಕ ನಿರ್ದೇಶಕರು | 06/03/2021 | 23/05/2022 |
| ಶ್ರೀ. ಚಂದ್ರಶೇಖರ್ ನಾಯಕ ಎಲ್. ಐಎಎಸ್ | ಸ್ವತಂತ್ರ ನಿರ್ದೇಶಕರು | 06/07/2020 | 18/04/2022 |

## ವಿಭಾಗಗಳ ಮುಖ್ಯಸ್ಥರು

| ಹೆಸರು | ಹುದ್ದೆ | ವಿಭಾಗ |
|---|---|---|
| ಶ್ರೀ. ಕೆ.ಆರ್. ಅವಿನಾಶ್, ಕೆಎ&ಎಎಸ್ | ಪ್ರಧಾನ ವ್ಯವಸ್ಥಾಪಕರು | ಹಣಕಾಸು |
| ಶ್ರೀ. ಅರ್ಜುನ ಎಸ್. ಒಡೆಯರ್, ಕೆ.ಎ.ಎಸ್. | ಪ್ರಧಾನ ವ್ಯವಸ್ಥಾಪಕರು | ಆಡಳಿತ |
| ಶ್ರೀ. ಉಮಾಶಂಕರ್ ಅಪಾಲಿ | ಪ್ರಧಾನ ವ್ಯವಸ್ಥಾಪಕರು | ಮಾರುಕಟ್ಟೆ |
| ಶ್ರೀ. ಸತೀಶ್ ಪಿಲಿಬಂಟರ್ | ಉಪ ಪ್ರಧಾನ ವ್ಯವಸ್ಥಾಪಕರು | ಉತ್ಪಾದನೆ |
| ಶ್ರೀ. ಕೆ.ಸಿ. ಸುಂದರಮೂರ್ತಿ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಸಾಮಗ್ರಿ / ಹಣಕಾಸು |

| | | |
|---|---|---|
| ಶ್ರೀಮತಿ ಶೀಲಾ ಅರವಿಂದ್ | : | ಕಂಪನಿ ಸಮಾಲೋಚನಾ ಕಾರ್ಯದರ್ಶಿ |
| ನೋಂದಾಯಿತ ಕಛೇರಿ | : | # 27, ಇಂಡಸ್ಟ್ರಿಯಲ್ ಸಬರ್ಬ್,<br>ಅಂಚೆ ಪಟ್ಟಿಗೆ ಸಂ. 5531,<br>ಬೆಂಗಳೂರು – ಪುಣೆ ಹೆದ್ದಾರಿ,<br>ಮಲ್ಲೇಶ್ವರಂ (ಪಶ್ಚಿಮ),<br>ಬೆಂಗಳೂರು–560055 |
| ಸಿ.ಐ.ಎನ್. | : | U85110KA1980SGC003871 |
| ಸ್ಥಾವರಗಳು | : | **ಬೆಂಗಳೂರಿನಲ್ಲಿ** ಸಾಬೂನು, ಮಾರ್ಜಕಗಳು ಮತ್ತು ಸೌಂದರ್ಯವರ್ಧಕಗಳು |
| | : | **ಮೈಸೂರಿನಲ್ಲಿ** ಶ್ರೀಗಂಧದೆಣ್ಣೆ ಮತ್ತು ಅಗರಬತ್ತಿಗಳು |
| | : | **ಶಿವಮೊಗ್ಗದಲ್ಲಿ** ಶ್ರೀಗಂಧದ ಸಸಿ ನರ್ಸರಿ |
| ಶಾಖೆಗಳು | : | ಬೆಂಗಳೂರು, ಚೆನ್ನೈ, ಹೈದರಾಬಾದ್,<br>ಕೋಲ್ಕತ್ತಾ, ಮುಂಬೈ ಮತ್ತು ನವದೆಹಲಿ. |
| ಲೆಕ್ಕಪರಿಶೋಧಕರು | : | ಪಿ. ಚಂದ್ರಶೇಖರ್ ಎಲ್ಎಲ್ಪಿ<br>ಲೆಕ್ಕಪರಿಶೋಧಕರು,<br>(ಎಫ್ಆರ್ಎನ್ ಸಂ:000580ಎಸ್/ಎಸ್200066)<br>ಎಸ್–512–514, ಮಣಿಪಾಲ್ ಸೆಂಟರ್,<br>ನಂ.47, ಡಿಕೆನ್ಸನ್ ರಸ್ತೆ,<br>ಬೆಂಗಳೂರು–560 042 |
| ಬ್ಯಾಂಕರುಗಳು | : | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ<br>ಕೆನರಾ ಬ್ಯಾಂಕ್ |

# ಪರಿವಿಡಿ


| ಕ್ರ.ಸಂ. | ವಿಷಯಗಳು | | ಪುಟ ಸಂಖ್ಯೆ |
|---|---|---|---|
| 1. | ನಮ್ಮ ಕುರಿತು | .......... | 01 |
| 2. | ಅಧ್ಯಕ್ಷರ ಭಾಷಣ | .......... | 04 |
| 3 | ವ್ಯವಸ್ಥಾಪಕ ನಿರ್ದೇಶಕರ ಭಾಷಣ | .......... | 06 |
| 4. | ಸೂಚನೆ | .......... | 08 |
| 5. | ಮಂಡಳಿಯ ವರದಿ | .......... | 10 |
| 6. | ಮಹಾಲೇಖಪಾಲರ ಶೂನ್ಯ ಟೀಕೆ ಟಿಪ್ಪಣಿ | .......... | 33 |
| 7. | ಲೆಕ್ಕ ಪರಿಶೋಧಕರ ವರದಿ | .......... | 34 |
| 8. | ಸ್ಥಿತಿ ವಿವರಣಾ ಪಟ್ಟಿ | .......... | 58 |
| 9. | ಲಾಭ ಮತ್ತು ನಷ್ಟದ ಪಟ್ಟಿ | .......... | 59 |
| 10. | ಹಣದ ಹರಿವಿನ ವಿವರಣಾ ಪಟ್ಟಿ | .......... | 60 |
| 11. | ಈಕ್ವಿಟಿಯಲ್ಲಿನ ಬದಲಾವಣೆಯ ವಿವರಗಳ ಪಟ್ಟಿ | .......... | 61 |
| 12. | ಮಹತ್ವವಾದ ಲೆಕ್ಕ ನಿರ್ವಹಣೆಯ ನೀತಿಗಳು | .......... | 63 |
| 13. | ಹಣಕಾಸು ಹೇಳಿಕೆಗಳ ಬಗ್ಗೆ ಟಿಪ್ಪಣಿಗಳು | .......... | 66 |

## ನಮ್ಮ ಕುರಿತು:

ಮೆ. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಕಂಪನಿಯು ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುವ ಒಂದು ಕಂಪನಿ. ಇದು 1916ರ ಇಸವಿಯಲ್ಲಿ ಸರ್ಕಾರದ ಶ್ರೀಗಂಧದೆಣ್ಣೆ ಕಾರ್ಖಾನೆಯಾಗಿ ತನ್ನ ಪಯಣ ಪ್ರಾರಂಭಿಸಿತು. 1918ರ ಅವಧಿಯಲ್ಲಿ ಸರ್ಕಾರಿ ಸೋಪ್ ಫ್ಯಾಕ್ಟರಿ (ಜಿಎಸ್ಎಫ್) ಸ್ಥಾಪನೆಯಾಯಿತು. ವಿಶ್ವ ಪ್ರಸಿದ್ಧ **"ಮೈಸೂರು ಸ್ಯಾಂಡಲ್ ಸೋಪ್"** ಉತ್ಪಾದನೆ ಆರಂಭಿಸಿ ನಿಧಾನವಾಗಿ ವಿವಿಧ ಸೋಪ್‌ಗಳು, ಮಾರ್ಜಕಗಳು, ಸೌಂದರ್ಯವರ್ಧಕಗಳು, ಅಗರಬತ್ತಿಗಳನ್ನು ಮೈಸೂರು ಸ್ಯಾಂಡಲ್ ಬ್ರಾಂಡ್ ಅಡಿಯಲ್ಲಿ ಉತ್ಪಾದನೆ ಮಾಡತೊಡಗಿತು. ನಂತರ, 1980ರಲ್ಲಿ ಜಿಎಸ್ಎಫ್ ಸಾರ್ವಜನಿಕ ವಲಯದ ಕಂಪನಿಯನ್ನಾಗಿ ಬೆಂಗಳೂರಿನಲ್ಲಿ ಅದರ ನೋಂದಾಯಿತ ಕಛೇರಿಯೊಂದಿಗೆ ಪರಿವರ್ತನೆ ಮಾಡಲಾಯಿತು.

ಕಂಪನಿಯ ಅಧಿಕೃತ ಷೇರು ಬಂಡವಾಳವು ಚಂದಾದಾರಿಕೆಯಾದ ಷೇರು ಬಂಡವಾಳ ರೂ.31.82 ಕೋಟಿಗೆದುರಾಗಿ ರೂ.35.00 ಕೋಟಿಗಳಾಗಿದೆ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಶೀಘ್ರಗತಿಯಲ್ಲಿ ಮಾರಾಟವಾಗುತ್ತಿರುವ ಗ್ರಾಹಕರ ಪದಾರ್ಥಗಳ ವಲಯದಲ್ಲಿನ ಆಧುನಿಕ ವೃತ್ತಿಪರ ಸಂಸ್ಥೆಯಾಗಿ ಸ್ವಯಂ ಪರಿವರ್ತನೆ ಹೊಂದುವ ಹಾಗೂ ತನ್ನ ಪರಿಮಳವನ್ನು ಎಫ್‌ಎಂಸಿಜಿ ಜಾಗತಿಕ ಮಾರುಕಟ್ಟೆಯಲ್ಲಿ ಪಸರಿಸಲು ಕಂಪನಿಯು ಸ್ಪಷ್ಟವಾದ ದೂರದೃಷ್ಟಿಯನ್ನು ಹೊಂದಿದೆ.

ಶ್ರೀಗಂಧದೆಣ್ಣೆಯ ಹೊರತಾಗಿ ಕಂಪನಿಯು ವಿವಿಧ ಉತ್ಪನ್ನಗಳನ್ನು ಸ್ನಾನದ ಸಾಬೂನುಗಳು, ಮಾರ್ಜಕಗಳು, ಸೌಂದರ್ಯವರ್ಧಕಗಳು, ಅಗರಬತ್ತಿಗಳು ಇತ್ಯಾದಿ ಉತ್ಪಾದಿಸುತ್ತಿದೆ. ಮೈಸೂರು ಸ್ಯಾಂಡಲ್ ಸೋಪ್, ಪ್ರಮುಖ (ಫ್ಲಾಗ್‌ಶಿಪ್) ಉತ್ಪನ್ನವಾಗಿದ್ದು, ಕಂಪನಿಯ ಆದಾಯದ ಬಹುಪಾಲು ಕೊಡುಗೆ ನೀಡುತ್ತಿದೆ. ನಿರಂತರ ಅನ್ವೇಷಣೆ ನೀತಿಯನ್ನು ಕಂಪನಿ ಅನುಸರಿಸುತ್ತಿದೆ ಮತ್ತು ಇದರ ಫಲಿತಾಂಶವಾಗಿ ಹೊಸ ಉತ್ಪನ್ನಗಳ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗುತ್ತಿದೆ ಮತ್ತು ಕಂಪನಿಯು ನಿರಂತರ ಹೊಸ ಉತ್ಪನ್ನಗಳನ್ನು ಪರಿಚಯಿಸುತ್ತಿದೆ. ಸಾಬೂನಿನ ಶ್ರೇಣಿಯಲ್ಲಿ ಕಂಪನಿಯು ಮೈಸೂರ್ ಸ್ಯಾಂಡಲ್ ಮಿಲೇನಿಯಂ ಸೂಪರ್ ಲಕ್ಸುರಿ ಪ್ರೀಮಿಯಂ ಸಾಬೂನನ್ನು 2012ರ ಅವಧಿಯಲ್ಲಿ ಯಶಸ್ವಿಯಾಗಿ ಪರಿಚಯಿಸಿತು ಮತ್ತು ಮೈಸೂರ್ ಸ್ಯಾಂಡಲ್ ಸೆಂಟೇನಿಯಲ್, ಮೈಸೂರ್ ಸ್ಯಾಂಡಲ್ ಕ್ಲಾಸಿಕ್, ಮೈಸೂರ್ ಸ್ಯಾಂಡಲ್ ರೋಸ್, ಮೈಸೂರ್ ಸ್ಯಾಂಡಲ್ ಜಾಸ್ಮಿನ್, ಮೈಸೂರ್ ಸ್ಯಾಂಡಲ್ ಲ್ಯಾವೆಂಡರ್, ಹರ್ಬಲ್ ಕೇರ್, ಕಾರ್ಬೋಲಿಕ್ ಸೋಪ್, ಬೇಬಿ ಸೋಪ್ ಇನ್ನಿತರ ಮತ್ತು ಹಲವಾರು ವರ್ಷಗಳಿಂದ ಗ್ರಾಹಕರ ಪ್ರೋತ್ಸಾಹದೊಂದಿಗೆ ಮನಗೆದ್ದಿದೆ.

ಕಂಪನಿಯು ಪ್ರಗತಿಯ ಮಾರ್ಗದಲ್ಲಿದೆ. ವರ್ಷದಿಂದ ವರ್ಷಕ್ಕೆ ನಿರಂತರ ಪ್ರಗತಿಯನ್ನು ಸಾಧಿಸುತ್ತಿದೆ.

### ಕಳೆದ 5 ವರ್ಷಗಳಲ್ಲಿ ಮಾಡಿರುವ ಉತ್ಪಾದನಾ ಸಾಧನೆ

(ಮೆಟ್ರಿಕ್ ಟನ್‌ಗಳಲ್ಲಿ)

| ವರ್ಷ | ಸಾಬೂನುಗಳು | | ಮಾರ್ಜಕಗಳು | | ಸೌಂದರ್ಯವರ್ಧಕಗಳು | |
|---|---|---|---|---|---|---|
| | ಹೊಂದಿದ್ದ ಗುರಿ | ಸಾಧಿಸಿರುವುದು | ಹೊಂದಿದ್ದ ಗುರಿ | ಸಾಧಿಸಿರುವುದು | ಹೊಂದಿದ್ದ ಗುರಿ | ಸಾಧಿಸಿರುವುದು |
| 2018-19 | 15662.00 | 16241.00 | 6410.00 | 3454.00 | 948.00 | 1111.00 |
| 2019-20 | 17441.00 | 17099.00 | 3184.00 | 3372.00 | 1200.00 | 1149.00 |
| 2020-21 | 17439.84 | 19862.79 | 3183.83 | 3574.29 | 1200.10 | 781.29 |
| 2021-22 | 21244.18 | 23289.15 | 4483.90 | 3820.78 | 1254.26 | 686.61 |
| 2022-23 | 25056.79 | 27087.11 | 4987.40 | 5832.23 | 1438.21 | 1043.02 |

ಇದೇ ರೀತಿಯಾಗಿ ಮಾರಾಟದಲ್ಲಿಯೂ ಕೂಡ ಕಂಪನಿಯು ಹಿಂದೆ ಉಳಿದಿಲ್ಲ. ಕಂಪನಿಯ ಮಾರಾಟದ ಪ್ರಮಾಣ ತೂಕ ಮತ್ತು ಮೌಲ್ಯ ಎರಡರಲ್ಲೂ ವರ್ಷದಿಂದ ವರ್ಷಕ್ಕೆ ತ್ವರಿತ ಏರುಗತಿಯಲ್ಲಿದೆ.

### ಕಳೆದ 5 ವರ್ಷಗಳಲ್ಲಿ ಸಾಧಿಸಿರುವ ಮಾರಾಟದ ಪ್ರಮಾಣ

(ಮೆಟ್ರಿಕ್ ಟನ್‌ಗಳಲ್ಲಿ)

| ವರ್ಷ | ಸಾಬೂನುಗಳು | ಮಾರ್ಜಕಗಳು | ಸೌಂದರ್ಯವರ್ಧಕಗಳು |
|---|---|---|---|
| 2018-19 | 15580.19 | 3150.84 | 1010.85 |
| 2019-20 | 16575.03 | 3611.35 | 967.63 |
| 2020-21 | 20754.03 | 3342.20 | 430.16 |
| 2021-22 | 23319.86 | 4025.23 | 570.37 |
| 2022-23 | 26646.51 | 5633.11 | 1318.07 |

**ಕಳೆದ 5 ವರ್ಷಗಳಲ್ಲಿ ಸಾಧಿಸಿರುವ ಒಟ್ಟಾರೆ ಮಾರಾಟ**

ಮೌಲ್ಯ ರೂ. ಕೋಟಿಗಳಲ್ಲಿ

| ವರ್ಷ | ಒಟ್ಟು ಮಾರಾಟ | | ನಿವ್ವಳ ಲಾಭ |
|---|---|---|---|
| | ಹೊಂದಿದ್ದ ಗುರಿ | ಸಾಧಿಸಿರುವುದು | |
| 2018-19 | 635.00 | 672.00 | 109.45 |
| 2019-20 | 725.00 | 731.76 | 109.66 |
| 2020-21 | 783.58 | 919.16 | 113.95 |
| 2021-22 | 962.34 | 1105.41 | 137.88 |
| 2022-23 | 1134.00 | 1375.00 | 182.49 |

## ಕೆಎಸ್&ಡಿಎಲ್‌ನ ದೂರದೃಷ್ಟಿ

**"ಮಣ್ಣಿನಿಂದ ಎಣ್ಣೆಗೆ"** (ಸಾಯಿಲ್ ಟು ಆಯಿಲ್) ಅತ್ಯುತ್ತಮ ಗುಣಮಟ್ಟದ ನೈಸರ್ಗಿಕ ಗಂಧದೆಣ್ಣೆಯನ್ನು ಉತ್ಪಾದಿಸುವುದು ಕಂಪನಿಯ ದೂರದೃಷ್ಟಿಯಾಗಿದೆ, ನೈಸರ್ಗಿಕ ಶ್ರೀಗಂಧವನ್ನು ಕಾನೂನಾತ್ಮಕ ಮತ್ತು ನೈತಿಕ ಮೂಲಗಳಿಂದ ಬದಲಿ (ಪ್ರತಿವಸ್ತು) ಆಧಾರದಲ್ಲಿ ವಾಣಿಜ್ಯ ಬೆಳೆಯಾಗಿ ಬೆಳೆಯುವುದು ಮತ್ತು ಸುಗಂಧದೆಣ್ಣೆ(ಪರಿಮಳಯುಕ್ತ ತೈಲ)ಗಳಲ್ಲಿ ಅತ್ಯಂತ ಗುಣಮಟ್ಟದ ನೈಸರ್ಗಿಕ ಸುಂಗಂಧದೆಣ್ಣೆ ಮೂಲದ ಸಾಬೂನುಗಳನ್ನು, ಸೌಂದರ್ಯವರ್ಧಕಗಳನ್ನು ಜಾಗತಿಕ ಗುಣಮಟ್ಟವನ್ನು ಪೂರೈಸುವಂತೆ ನಿರಂತರ ಅನ್ವೇಷಣೆ ಮತ್ತು ಉತ್ಕೃಷ್ಟತೆಯೊಂದಿಗೆ ಉತ್ಪಾದಿಸುವುದು.

## ಕೆಎಸ್&ಡಿಎಲ್‌ನ ಗುರಿ

ಕೆಎಸ್&ಡಿಎಲ್ ಸಂಶೋಧನಾ ಕೇಂದ್ರವು ಜಾಗತಿಕ ಮಾನದಂಡಗಳಾದ ಎಫ್‌ಡಿಎ, ರೀಚ್ ಮತ್ತು ಯೂರೋ ಮೊದಲಾದ ನಿಯಂತ್ರಕ ಕ್ರಮಗಳನ್ನು ಪೂರೈಸುವ ಹೊಸ ಉತ್ಪನ್ನಗಳನ್ನು ಸೇರಿದಂತೆ ಪ್ರಸ್ತುತ ಉತ್ಪನ್ನಗಳ ಗುಣಮಟ್ಟವನ್ನು ನಿರಂತರ ಅನ್ವೇಷಣೆ ಮತ್ತು ಅಭಿವೃದ್ಧಿಯ ಭಾಗವಾಗಿ ಮೇಲ್ದರ್ಜೆಗೇರಿಸಲು ಅವಿರತ ಶ್ರಮಿಸುವುದು.

## ವಾರ್ಷಿಕ ಅವಲೋಕನ

ಮೌಲ್ಯ ರೂ. ಲಕ್ಷಗಳಲ್ಲಿ

| ವಿವರಗಳು | 2022-23 | 2021-22 | ಬದಲಾವಣೆ % |
|---|---|---|---|
| | | | |
| ವಹಿವಾಟು | 1,12,719.37 | 92,961.93 | 21.25 |
| ಮೌಲ್ಯವರ್ಧಿತ | 46,444.85 | 42,142.57 | 10.21 |
| ಕಾರ್ಮಿಕ (ಸಂಖ್ಯೆ) | 234 | 254 | -7.87 |
| ತೆರಿಗೆ ಮುನ್ನ ಲಾಭ | 27,919.37 | 24,145.16 | 15.63 |
| ತೆರಿಗೆ ನಂತರ ಲಾಭ | 18,249.35 | 13,787.52 | 32.36 |
| ಪ್ರಸ್ತಾವಿತ ಲಾಭಾಂಶ | 5,474.80 | 4,136.25 | 32.36 |
| ಕಾಯ್ದಿಟ್ಟ ಗಳಿಕೆ | 12,774.55 | 9651.27 | 32.36 |
| ಒಟ್ಟು ಆಸ್ತಿಗಳು | 2,43,946.12 | 2,20,148.38 | 10.81 |
| ನಿವ್ವಳ ಮೊತ್ತ (ಮರುಮೌಲ್ಯಮಾಪನ ಮೀಸಲು ಸೇರಿದಂತೆ) | 1,94,435.93 | 180,323.65 | 7.83 |
| ಒಟ್ಟು ಸಾಲಗಳು | - | - | 0.00 |
| ಸಾಲಗಳು: ಈಕ್ವಿಟಿ | - | - | 0.00 |
| ಪ್ರತಿ ಷೇರಿನ ಮೇಲೆ ಗಳಿಕೆ (ರೂ.) | 5,680.75 | 4,332.69 | 31.11 |

* ಮೇಲಿನ ಮೌಲ್ಯಗಳು ಲಾಭಾಂಶ ಮತ್ತು ಅದರ ಮೇಲಿನ ತೆರಿಗೆಯ ನಂತರ Ind AS ಅನುಸಾರ ಸಿದ್ಧಪಡಿಸಿದ ಹಣಕಾಸಿನ ವಿವರಣೆಗಳ ಅನುಸಾರ ಇರುವುದು.

ಮೌಲ್ಯ ರೂ. ಲಕ್ಷಗಳಲ್ಲಿ

| ವರ್ಷ | ನಿವ್ವಳ ವಹಿವಾಟು | ತೆರಿಗೆಗೆ ಮುನ್ನ ಲಾಭ | ತೆರಿಗೆ ನಂತರ ಲಾಭ |
|---|---|---|---|
| 2018-19 | 56,824.81 | 16,396.13 | 10,902.05 |
| 2019-20 | 64,504.84 | 17,993.54 | 10,966.00 |
| 2020-21 | 78,374.43 | 17,086.25 | 11,393.19 |
| 2021-22 | 92,961.93 | 24,145.16 | 13,787.52 |
| 2022-23 | 112,719.37 | 27,919.37 | 18,249.35 |






# 43ನೆಯ ವಾರ್ಷಿಕ ಮಹಾಸಭೆಯಲ್ಲಿ ಸನ್ಮಾನ್ಯ ಅಧ್ಯಕ್ಷರ ಭಾಷಣ



## ಮಾನ್ಯ ಷೇರುದಾರರೇ,

ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್‌ನ 43ನೇ ವಾರ್ಷಿಕ ಮಹಾಸಭೆಗೆ ನಿಮ್ಮನ್ನು ಆದರದಿಂದ ಸ್ವಾಗತಿಸುತ್ತೇನೆ. ಉದ್ದೇಶಿತ ಮುನ್ನಡೆ ಮತ್ತು ಜವಾಬ್ದಾರಿಯುತ ಪ್ರಗತಿ ಸಾಧನೆಯ ಬದ್ಧತೆ ನಮ್ಮ ದೂರದೃಷ್ಟಿ. ನಮ್ಮ ಮುಂದಿರುವ ಅವಕಾಶಗಳು ನಮಗೆ ಅಪಾರ ಕುತೂಹಲ ಮೂಡಿಸಿವೆ. ನಮಗೆ ಎದುರಾಗುವ ಯಾವುದೇ ಸವಾಲನ್ನು ಎದುರಿಸುವ ನಮ್ಮ ಸಾಮರ್ಥ್ಯದ ಬಗ್ಗೆ ನಮಗೆ ದೃಢ ವಿಶ್ವಾಸವಿದೆ.

ಹಣಕಾಸಿನ ವರ್ಷ 2022–23ರ ಅವಧಿಯಲ್ಲಿನ ವಾರ್ಷಿಕ ಪ್ರಗತಿ ದರ ಹಾಗೂ ಕಳೆದ ಮೂರು ವರ್ಷಗಳ ಅವಧಿಯ ತೆರಿಗೆ ಪಾವತಿ ನಂತರದ ಲಾಭ ಈ ಎರಡೂ ಅಂಶಗಳು ನಮ್ಮ ಗಮನಾರ್ಹ ಸಾಧನೆಯ ಕೈಗನ್ನಡಿಯಾಗಿದೆ.

ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ಕಂಪನಿಯು ಕಳೆದ 80 ವರ್ಷಗಳ ಸುದೀರ್ಘ ಕಾಲದಿಂದ ನಮ್ಮ ರಾಜ್ಯ ಒಂದರಲ್ಲೆ ಅಲ್ಲದೆ, ದೇಶದ ವಿವಿಧ ಭಾಗಗಳಲ್ಲಿ ಮನೆ ಮಾತಾಗಿರುವುದು. ಈ ವರ್ಷದಲ್ಲಿ ನಮ್ಮ ಕಂಪನಿಯು ಇನ್ನೂ ಹೆಚ್ಚಿನ ಜನರನ್ನು ತಲುಪುವಲ್ಲಿ ಯಶಸ್ವಿಯಾಗಿದೆ. ಗ್ರಾಹಕರ ಮಾರುಕಟ್ಟೆಯಲ್ಲಿನ ತೀವ್ರ ಸ್ವರೂಪದ ಸ್ಪರ್ಧೆಯ ನಡುವೆಯೂ, ನಿಮ್ಮ ಕಂಪನಿಯು ಹಿಂದಿನ ವರ್ಷಕ್ಕಿಂತ ಈ ವರ್ಷ ತನ್ನ ಮಾರುಕಟ್ಟೆ ಸ್ಥಾನವನ್ನು ವಿಸ್ತರಣೆ ಮಾಡಿಕೊಂಡಿದೆ. ಇನ್ನು ಹೆಚ್ಚಿನ ಪ್ರಗತಿಗೆ ಅಮೋಘ ಅವಕಾಶವಿರುವುದನ್ನು ಕಂಪನಿ ಮನಗಂಡಿದೆ.

## ತಂತ್ರಜ್ಞಾನ ಅಳವಡಿಕೆ

ನಾವು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ, ಅತ್ಯುತ್ತಮ ತಂತ್ರಜ್ಞಾನ ಅಳವಡಿಸಿಕೊಂಡಿರುವ ವಿಚಾರವನ್ನು ಮತ್ತು ಮಾರುಕಟ್ಟೆಯಲ್ಲಿ ನಮ್ಮ ಉತ್ಪನ್ನಗಳಿಗೆ ಇರುವ ಬೇಡಿಕೆಯನ್ನು ಪೂರೈಸಲು ಇದರಿಂದ ಅನುಕೂಲವಾಗುವುದೆಂಬ ವಿಚಾರವನ್ನು ನಿಮ್ಮೊಡನೆ ಹಂಚಿಕೊಳ್ಳಲು ನನಗೆ ತುಂಬಾ ಸಂತೋಷವೆನಿಸುತ್ತದೆ.

ಈಗ ಹಣಕಾಸಿನ ವರ್ಷ 2022–23ರ ಅವಧಿಯಲ್ಲಿನ ಕಂಪನಿಯ ಕಾರ್ಯಕ್ಷಮತೆಯನ್ನು ಸಂಕ್ಷಿಪ್ತವಾಗಿ ತಿಳಿಸಬಯಸುತ್ತೇನೆ.

ಪ್ರಸ್ತುತ ಸಾಲಿನಲ್ಲಿ ದುರ್ಬಲ ಜಾಗತಿಕ ಬೆಳವಣಿಗೆ ನಡುವೆಯೂ, ಕಂಪನಿಯು 2021–22ನೇ ಸಾಲಿನ ರೂ.929.62 ಕೋಟಿಗಳಿಗೆದುರಾಗಿ ರೂ.1,127.19 ಕೋಟಿ ಆದಾಯದೊಂದಿಗೆ ದಾಖಲೆಯ ಸಾಧನೆ ಮಾಡಿದೆ.

ಈ ಸಭೆ ನಡೆಯುವ ಬಗ್ಗೆ ಸೂಚನೆ, ನಿರ್ದೇಶಕರ ವರದಿ, ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆ ಟಿಪ್ಪಣಿಗಳು ಮತ್ತು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಪರಿಶೋಧಿತ ಲೆಕ್ಕಪತ್ರಗಳು ತಮ್ಮ ಬಳಿ ಇದ್ದು, ಅವುಗಳನ್ನು ತಾವು ಓದಿರುವಿರೆಂದು ತಮ್ಮ ಅನುಮತಿಯ ಮೇರೆಗೆ ತಿಳಿದಿರುತ್ತೇನೆ.

## ಕಂಪನಿ ವ್ಯವಹಾರ ಮತ್ತು ಹಣಕಾಸಿನ ಕಾರ್ಯಕ್ಷಮತೆ

ಪರಾಮರ್ಶನೆಯ ವರ್ಷದಲ್ಲಿ, ಸ್ಥಳೀಯ ವಹಿವಾಟು 21.25%ಕ್ಕೂ ಹೆಚ್ಚಿನ ಬೆಳವಣಿಗೆ ಕಂಡಿದೆ. ಕಳೆದ ಸಾಲಿನಲ್ಲಿ ರೂ.929.62 ಕೋಟಿ ವಹಿವಾಟು ಸಾಧಿಸಿದ್ದರೆ, ನಿಮ್ಮ ಕಂಪನಿಯು ಈ ಸಾಲಿನಲ್ಲಿ ರೂ. 1,127.19 ಕೋಟಿ ವಹಿವಾಟು ನಡೆಸಿದೆ ಎಂಬುದನ್ನು ತಮಗೆ ತಿಳಿಸಲು ನಾನು ಸಂತಸಪಡುತ್ತೇನೆ. ಕಳೆದ ಸಾಲಿನ ತೆರಿಗೆಗಳ ನಂತರದ ಲಾಭ ರೂ. 137.88 ಕೋಟಿಯಾಗಿದ್ದರೆ, ಪ್ರಸಕ್ತ ಸಾಲಿನಲ್ಲಿ ತೆರಿಗೆಗಳ ನಂತರದ ನಿವ್ವಳ ಲಾಭ 182.49 ಕೋಟಿ ಆಗಿದೆ.

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ, ತೆರಿಗೆ ನಂತರದ ಲಾಭದ ಮೊತ್ತ ರೂ. 54,74,80,421/–ರ ಮೇಲೆ ತಲಾ ರೂ. 1,000/–ದ ಮುಖ ಬೆಲೆಯ ಈಕ್ವಿಟಿ ಷೇರು ಒಂದಕ್ಕೆ ಪಾವತಿಯಾದ ಬಂಡವಾಳದ 30% ನಂತೆ ರೂ.1,720.44ರ ಮೊತ್ತದ ಅಂತಿಮ ಲಾಭಾಂಶವನ್ನು ಷೇರುದಾರರ ಅನುಮೋದನೆಗೆ ಒಳಪಟ್ಟು ನಿಮ್ಮ ನಿರ್ದೇಶಕರು ಶಿಫಾರಸ್ಸು ಮಾಡಿದ್ದಾರೆ.

ಮಾರುಕಟ್ಟೆ ಪಾಲಿನಲ್ಲಿ ಹೆಚ್ಚಳ ಸಾಧಿಸಲು ನಿಮ್ಮ ಕಂಪನಿಯು ಉತ್ಪಾದನೆ ಮತ್ತು ಮಾರಾಟವನ್ನು ಹೆಚ್ಚಿಸಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ. ಕಂಪನಿಯು ವಿಸ್ತೃತ ಲಾಭದ ಮಾರ್ಗಗಳನ್ನು ಖಾತರಿಪಡಿಸಿಕೊಳ್ಳಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ತನ್ನ ಮಾರುಕಟ್ಟೆ ಪಾಲನ್ನು ಮತ್ತು ಎಫ್‌ಎಂಸಿಜಿ ವ್ಯಾಪ್ತಿಯಲ್ಲಿ ತನ್ನ ಸ್ಥಾನವನ್ನು ತಿಳಿದುಕೊಳ್ಳುವ ನಿಟ್ಟಿನಲ್ಲಿ ಕಂಪನಿಯು ಮಾರುಕಟ್ಟೆ ಸರ್ವೆ ಏಜೆನ್ಸಿಗಳ ಸಹಾಯವನ್ನು ಪಡೆದಿದೆ.

ನಿಮ್ಮ ಕಂಪನಿಯ ನಿರ್ದೇಶಕರ ಮಂಡಳಿಯು ಸಿಎಸ್‌ಆರ್‌ಗೆ ಸಮಿತಿಯನ್ನು ರಚಿಸಿದೆ ಮತ್ತು ಕಂಪನಿ ಸಿಎಸ್‌ಆರ್ ಟ್ರಸ್ಟ್‌ನ್ನು ಹೊಂದಿದೆ. ಸಿಎಸ್‌ಆರ್‌ನ ಎಲ್ಲಾ ಹಣವನ್ನು ಈ ಟ್ರಸ್ಟ್ ಮೂಲಕ ಖರ್ಚುಮಾಡಲಾಗಿದೆ ಮತ್ತು ಹಣಕಾಸು ವರ್ಷ 2022–23ಕ್ಕೆ ರೂ. 3,94,83,303.59/– ಮೊತ್ತವನ್ನು ನಿಗದಿ ಮಾಡಲಾಗಿದೆ.

ಒಟ್ಟಾರೆಯಾಗಿ, ಈ ವರ್ಷವು ವಿವಿಧ ವ್ಯವಹಾರಗಳಲ್ಲಿ ಗಮನಾರ್ಹ ಸಾಧನೆಗಳೊಂದಿಗೆ ಸುಸ್ಥಿರ ಸಾಧನೆಯ ವರ್ಷವಾಗಿದೆ. ವಿವಿಧ ಸ್ತರಗಳಲ್ಲಿನ ಕಾರ್ಯಪಡೆಯ ದೃಢವಾದ ಬದ್ಧತೆ, ಸಮರ್ಪಣೆ ಮತ್ತು ದೃಢ ನಿಶ್ಚಯದಿಂದ ಇದು ಸಾಧ್ಯವಾಗಿದೆ.

## ಭವಿಷ್ಯದ ನಿರೀಕ್ಷೆಗಳು

ನಿಮ್ಮ ಕಂಪನಿಯು 2023–24ರಂದು ಕೊನೆಗೊಳ್ಳುವ ವರ್ಷಕ್ಕೆ ರೂ.1500 ಕೋಟಿಗಳ ಮಹತ್ವಾಕಾಂಕ್ಷಿ ಮಾರಾಟ ಗುರಿಯನ್ನು ಹೊಂದಿದೆ ಮತ್ತು ಅತ್ಯಂತ ಸುಲಭವಾಗಿ ಈ ವಹಿವಾಟು ಗುರಿ ಸಾಧಿಸಲು ಸಜ್ಜಾಗಿದೆ. ನಿಮ್ಮ ಕಂಪನಿಯು ಒಟ್ಟಾರೆ ವೆಚ್ಚ ಮತ್ತು ಬೆಳವಣಿಗೆಯ ಸಾಧನಗಳ

ಮೇಲೆ ನಿರಂತರ ಗಮನಹರಿಸುವುದು ಮತ್ತು ಇದು ಒಟ್ಟಾರೆ ಹೆಚ್ಚಿನ ಕಾರ್ಯಾಚರಣೆ ಲಾಭವನ್ನು ಪಡೆಯಲು ಪರಿಣಾಮಕಾರಿಯಾದ ಮಿತವ್ಯಯ ಮತ್ತು ಕಾರ್ಯಾಚರಣೆ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯವನ್ನು ಒಳಗೊಂಡಿದೆ.

## ಕೈಗಾರಿಕಾ ಬಾಂಧವ್ಯ:

ನಿಮ್ಮ ಕಂಪನಿಯು 'ಸಮರ್ಪಿತ ಮಾನವ ಶಕ್ತಿಯು ಅತ್ಯಂತ ದೊಡ್ಡ ಆಸ್ತಿ' ಎಂದು ಸದಾ ನಂಬಿದೆ. ನಿಮ್ಮ ಕಂಪನಿಯ ವ್ಯವಹಾರ ಅಭಿವೃದ್ಧಿ ಹೊಂದಲು ಮಾನವ ಶಕ್ತಿಯ ಕಾರ್ಯಾದಕ್ಷತೆ ಮೂಲ ಕಾರಣವೆಂದು ನಾನು ನಂಬಿರುವೆ. ಬದ್ಧತೆ ಹಾಗೂ ಕಾರ್ಯಶೀಲತೆಯಿಂದ 2022–23ರ ಹಣಕಾಸು ವರ್ಷವನ್ನು ಮತ್ತೊಂದು ಯಶಸ್ವಿ ವರ್ಷವನ್ನಾಗಿ ರೂಪಿಸಿದ್ದಕ್ಕೆ ಕಂಪನಿಯ ಪ್ರತಿಯೊಬ್ಬ ಉದ್ಯೋಗಿಯನ್ನೂ ನಾನು ಅಭಿನಂದಿಸುತ್ತೇನೆ.

## ಸಮಾಪ್ತಿ

ನನ್ನ ಭಾಷಣವನ್ನು ಮುಕ್ತಾಯಗೊಳಿಸುವುದಕ್ಕೂ ಮುನ್ನ, ಅತಿ ಸವಾಲಿನ ಸಂದರ್ಭಗಳಲ್ಲೂ ಅದನ್ನು ನಿಭಾಯಿಸಲು ನಮಗೆ ಸಾಧ್ಯವಾಗಲು ಸಹಾಯಕವಾದ, ಸಂಕಷ್ಟ ಮತ್ತು ವಿಪತ್ತುಗಳ ಸಂದರ್ಭಗಳನ್ನೂ ಮೆಟ್ಟಿ ನಿಲ್ಲುವ ನಮ್ಮ ಸಮಗ್ರ ಕಾರ್ಯತಂಡದ ಸಾಮರ್ಥ್ಯ ಮತ್ತು ಬದ್ಧತೆಗೆ ನನ್ನ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ನಮ್ಮ ಕಂಪನಿಗೆ, ನಮ್ಮ ಜನರೇ ಪ್ರಮುಖ ಕೇಂದ್ರಬಿಂದು. ಒಳಗೊಳ್ಳುವ ಸಂಸ್ಕೃತಿ ಮತ್ತು ಅವರ ಕೌಶಲ್ಯಗಳನ್ನು ಪೋಷಿಸಲು ವಿಪುಲ ಅವಕಾಶಗಳಿಂದಾಗಿ ಕಂಪನಿಯು ಉತ್ಕೃಷ್ಟ ಪ್ರತಿಭೆಗಳನ್ನು ತನ್ನತ್ತ ಸೆಳೆಯುತ್ತಿದೆ.

ನಮ್ಮೆಲ್ಲ ಗ್ರಾಹಕರು, ಷೇರುದಾರರು, ಸರಬರಾಜುದಾರರು, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಸರ್ಕಾರ ಮತ್ತು ಇತರೆ ಪಾಲುದಾರರನ್ನು ಅವರ ನಿರಂತರ ಪ್ರೋತ್ಸಾಹ, ಪಾಲುದಾರಿಕೆ ಮತ್ತು ನಮ್ಮ ಕಾರ್ಯಾಚರಣೆಗಳನ್ನು ಸುಗಮಗೊಳಿಸಲು ಬೆಲೆ ಕಟ್ಟಲಾಗದ ಕೊಡುಗೆ ನೀಡಿದ್ದಕ್ಕಾಗಿ ನಾನು ಅಭಾರಿಯಾಗಿದ್ದೇನೆ.

ನಮ್ಮ ದೂರದೃಷ್ಟಿ ಮತ್ತು ಕಾರ್ಯತಂತ್ರದ ಮೇಲೆ ನಿರಂತರ ಹೂಡಿಕೆ ಮಾಡುತ್ತಿರುವ ನಮ್ಮ ಷೇರುದಾರರಿಗೂ ನನ್ನ ಕೃತಜ್ಞತೆ ಸಲ್ಲಿಸಬಯಸುತ್ತೇನೆ.

ನಮ್ಮ ಪಯಣದಲ್ಲಿ ನಿಮ್ಮ ವಿಶ್ವಾಸವು ನಮ್ಮ ಪ್ರಯತ್ನಗಳು ಮತ್ತು ಮಹತ್ವಾಕಾಂಕ್ಷೆಗಳಿಗೆ ಅಡಿಪಾಯವಾಗಿದೆ.

ಕೊನೆಯದಾಗಿ, ದೊಡ್ಡ ಗುರಿಗೆ ಬದ್ಧರಾಗಿ ನಿಂತ ಮತ್ತು ನಮ್ಮನ್ನು ನಾವಾಗುವಂತೆ ಮಾಡಿದ ಕಂಪನಿಯ ಆಡಳಿತ ತಂಡ ಮತ್ತು ಎಲ್ಲಾ ನೌಕರರ ಸಮರ್ಪಣೆ ಮತ್ತು ಬದ್ಧತೆಯನ್ನು ಸಮಗ್ರ ಮಂಡಳಿ ಮತ್ತು ಎಲ್ಲ ಷೇರುದಾರರ ಪರವಾಗಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ ಮತ್ತು ಪ್ರಶಂಸಿಸುತ್ತೇನೆ.

ಅವರ ಪ್ರಯತ್ನಗಳು, ಲಕ್ಷಾಂತರ ಜನರ ಜೀವನ ಮಟ್ಟದ ಸುಧಾರಣೆಗೆ ನೆರವಾಗಿದ್ದು ಅನೇಕ ಪ್ರಶಸ್ತಿಗಳ ಮೂಲಕ ವರ್ಷದಾದ್ಯಂತ ಗುರುತಿಸಲ್ಪಟ್ಟಿದೆ. ಹಲವಾರು ಅವಕಾಶಗಳೊಂದಿಗೆ ಇನ್ನಷ್ಟು ಪ್ರಜ್ವಲವಾದ ಮತ್ತು ಸುಸ್ಥಿರ ಭವಿಷ್ಯವನ್ನು ನಾವು ಆಶಿಸಬಹುದಾಗಿದೆ.

ಮಹಿಳೆಯರು, ಮತ್ತು ಮಹನೀಯರಿಗೆ ವಂದನೆಗಳು

**ಸಹಿ/–**
**(ಎಂ.ಬಿ. ಪಾಟೀಲ)**
ಅಧ್ಯಕ್ಷರು
ಡಿಐಎನ್: 02558869

ಸ್ಥಳ: ಬೆಂಗಳೂರು
ದಿನಾಂಕ: 28/11/2023

ಗಮನಿಸಿ: ಇದು ಕಂಪನಿಯ 43ನೆಯ ವಾರ್ಷಿಕ ಮಹಾಸಭೆಯ ನಡವಳಿಯ ವರದಿಯ ಇಂಗಿತವಾಗಿರುವುದಿಲ್ಲ.

# ವ್ಯವಸ್ಥಾಪಕ ನಿರ್ದೇಶಕರ ವೇದಿಕೆಯಿಂದ



**ಪ್ರೀತಿಯ ಷೇರುದಾರರೇ,**

ಮೆ॥ ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್‌ನ 43ನೇ ವಾರ್ಷಿಕ ಮಹಾಸಭೆಗೆ ನಿಮ್ಮೆಲ್ಲರನ್ನೂ ಸ್ವಾಗತಿಸುತ್ತೇನೆ.

ನಿಮ್ಮ ವಿಶಾಲ ಹೃದಯದ ಬೆಂಬಲಕ್ಕಾಗಿ ನಾವು ಅಭಾರಿಗಳಾಗಿದ್ದೇವೆ ಮತ್ತು ನಿಮ್ಮ ಬಿಡುವಿಲ್ಲದ ಕಾರ್ಯಗಳ ನಡುವೆಯೂ ನಮ್ಮೊಂದಿಗೆ ನಿಮ್ಮ ಅಮೂಲ್ಯವಾದ ಸಮಯ ನೀಡಿದ್ದಕ್ಕಾಗಿ ಕೆಎಸ್‌ಡಿಎಲ್‌ನ ಆಡಳಿತ ಮಂಡಳಿ ನಿರ್ದೇಶಕರ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ನಮ್ಮ ಕಂಪನಿ, ಮೆ॥ ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್‌ವು ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯದ ಕಂಪನಿಯಾಗಿದ್ದು 1916ರಲ್ಲಿ ಗಂಧದೆಣ್ಣೆಯ ಸರ್ಕಾರಿ ಕಾರ್ಖಾನೆಯಾಗಿ ಆರಂಭಗೊಂಡಿತು. ಬಳಿಕ ಸಾಬೂನುಗಳು, ಮಾರ್ಜಕಗಳು ಹಾಗೂ ಗಂಧದೆಣ್ಣೆಗಳ ಉತ್ಪಾದನೆ ವ್ಯವಹಾರಗಳಿಗಾಗಿ 1980ರ ಜುಲೈ 9ರಂದು ಬೆಂಗಳೂರಿನಲ್ಲಿ ನೋಂದಾಯಿತ ಕಚೇರಿಯೊಂದಿಗೆ ಸಾರ್ವಜನಿಕ ರಂಗದ ಕಂಪನಿಯಾಗಿ ರೂಪುಗೊಂಡಿತು. ಸಾಬೂನುಗಳು ಮತ್ತು ಗಂಧದೆಣ್ಣೆ ಹೊರತಾಗಿ ಕೆಎಸ್‌ಡಿಎಲ್ ಮಾರ್ಜಕಗಳು, ಸುಗಂಧಗಳು, ಟಾಲ್ಕಂ ಪೌಡರ್, ಕೈ ತೊಳೆಯುವ ದ್ರಾವಣಗಳು (ಹ್ಯಾಂಡ್ ವಾಷಸ್), ಮುಖ ತೊಳೆಯುವ ದ್ರಾವಣಗಳು (ಫೇಸ್ ವಾಷಸ್), ತೆಂಗಿನೆಣ್ಣೆ, ಅಗರಬತ್ತಿ ಮತ್ತು ಸ್ಯಾನಿಟೈಸರ್‌ಗಳನ್ನ ಉತ್ಪಾದಿಸುತ್ತಿದೆ. ಬೆಂಗಳೂರು, ಮೈಸೂರು ಹಾಗೂ ಶಿವಮೊಗ್ಗಗಳಲ್ಲಿ ಇದು ಉತ್ಪಾದನಾ ವ್ಯವಸ್ಥೆ ಹೊಂದಿದ್ದು 2023ರಂತೆ ಹಲವು ದೇಶಗಳಿಗೆ ತನ್ನ ಉತ್ಪನ್ನಗಳನ್ನು ರಫ್ತು ಮಾಡುತ್ತಿದೆ.

## ವರ್ಷ ಹೀಗಿತ್ತು

ಮೆ॥ ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್ ಈ ವರ್ಷದ ಅವಧಿಯಲ್ಲಿನ ಸಾಧನೆಗಳನ್ನು ಕುರಿತು ತಮಗೆ ಮಾಹಿತಿ ಒದಗಿಸಲು ನಾನು ಸಂತಸಪಡುತ್ತೇನೆ :

1. ಕಂಪನಿಯ ಬೆಳವಣಿಗೆಯು ಪ್ರತೀ ತ್ರೈಮಾಸಿಕಕ್ಕೆ ವೇಗವರ್ಧಿತಗೊಂಡಿದೆ, ಮತ್ತು ನಾವು 2022–23ರ ಆರ್ಥಿಕ ವರ್ಷವನ್ನು ಉನ್ನತ ದಾಖಲೆಯ ವಹಿವಾಟು ಮತ್ತು ಲಾಭದೊಂದಿಗೆ ಪೂರ್ಣಗೊಳಿಸಿದ್ದೇವೆ. ವರ್ಷದಿಂದ ವರ್ಷಕ್ಕೆ ಕಂಪನಿ ಉತ್ತುಂಗವನ್ನೇ ನೋಡುತ್ತಿದೆ.

2. ಒಟ್ಟು ಖರ್ಚು ನಿರ್ವಹಣಾ ಕಾರ್ಯಕ್ರಮ; ನಮ್ಮ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವುದು; ನಮ್ಮ ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) ಮತ್ತು ಮಾರುಕಟ್ಟೆಯನ್ನು ಬಲಪಡಿಸುವುದು, ಅತ್ಯಾಧುನಿಕ ಯಂತ್ರಗಳ ಅಳವಡಿಕೆ ಹಾಗೂ ಮಾರಾಟ ಮತ್ತು ವಿತರಣೆ ವ್ಯಾಪ್ತಿಯ ವಿಸ್ತರಣೆ–ಈ ಎಲ್ಲವೂ ಕಂಪನಿಯ ಪ್ರಗತಿಗೆ ಪೂರ್ಣ ಮತ್ತು ಉತ್ತಮ ಬೆಂಬಲ ಒದಗಿಸಿದವು ಮತ್ತು ಇದರ ಪರಿಣಾಮವಾಗಿ ನಿಮ್ಮ ಕಂಪನಿಯು ಉತ್ತಮ ಫಲಿತಾಂಶವನ್ನು ಪ್ರದರ್ಶಿಸಿತು.

3. ನಿಮ್ಮ ಕಂಪನಿಯು ಹಣದ ಹರಿವನ್ನು ಅಸಾಧಾರಣವಾಗಿ ನಿರ್ವಹಿಸುವುದನ್ನು ಮುಂದುವರೆಸಿದೆ ಮತ್ತು ಅದರ ಆರ್ಥಿಕ ವಿವರ ಪಟ್ಟಿ (ಬ್ಯಾಲನ್ಸ್ ಶೀಟ್)ಯನ್ನು ವರ್ಷದಿಂದ ವರ್ಷಕ್ಕೆ ಬಲಪಡಿಸಿದೆ.

## ಆರ್ಥಿಕ ವರ್ಷ 2022–23ರ ಹಣಕಾಸು ಫಲಿತಾಂಶಗಳು

ಸಮಸ್ತ ವಿಶ್ವವು ಸಾಂಕ್ರಾಮಿಕದ ಹಿಡುಗಿನಿಂದ ನಿಧಾನವಾಗಿ ಚೇತರಿಸಿಕೊಳ್ಳುತ್ತಿದೆ ಮತ್ತು ಆರ್ಥಿಕತೆಯು ನಿಧಾನಗತಿಯಲ್ಲಿ ಚೇತರಿಸಿಕೊಳ್ಳುತ್ತಿದ್ದದು ಪ್ರಗತಿಯಾಗುತ್ತಿದೆ. ಕೆಎಸ್‌ಡಿಎಲ್‌ನಲ್ಲಿ ಸವಾಲನ್ನು ಎದುರಿಸಲು ನಾವು ನಮ್ಮ ಸಂಯೋಜಿತ ಸಂಪನ್ಮೂಲ ಮತ್ತು ಸಾಮರ್ಥ್ಯಗಳನ್ನು ಒಟ್ಟು ಸೇರಿಸಿಕೊಂಡು ನಮ್ಮ ಗ್ರಾಹಕರು, ನಮ್ಮ ಉದ್ಯೋಗಿಗಳು ಮತ್ತು ನೀವು–ನಮ್ಮ ಷೇರುದಾರರು ನಮ್ಮಿಂದ ನಿರೀಕ್ಷಿಸಿದ್ದನ್ನು ಪುನರ್‌ಸ್ಥಾಪಿಸುವ ಮೂಲಕ ವ್ಯವಹಾರ ನಡೆಸಿದೆವು. ಈ ವಿಧಾನ, ಕೆಎಸ್‌ಡಿಎಲ್‌ನ ಸಂಯೋಜಿತ ಸಾಮರ್ಥ್ಯವು ನಮ್ಮ ಗ್ರಾಹಕರ ವ್ಯವಹಾರದ ವೇಗವರ್ಧನೆಗೆ, ದಶಕದಲ್ಲೇ ನಮ್ಮ ಅತ್ಯಧಿಕ ವಾರ್ಷಿಕ ಬೆಳವಣಿಗೆ ನೀಡಲು ನೆರವಾಯಿತು.

2022–23ರ ಆರ್ಥಿಕ ವರ್ಷದಲ್ಲಿ ಆರ್ಥಿಕತೆಯ ಸವಾಲಿನ ಹೊರತಾಗಿಯೂ ಕಂಪನಿಯು ಆರ್ಥಿಕ ವರ್ಷ 2021–22ರ ರೂ.929.62 ಕೋಟಿ ಆದಾಯಕ್ಕೆದುರಾಗಿ ರೂ.1127.19 ಕೋಟಿ ಆದಾಯದೊಂದಿಗೆ ಅಮೋಘ ಸಾಧನೆ ದಾಖಲಿಸಿತು.

ಆರ್ಥಿಕ ವರ್ಷ 2021–22ರ ರೂ.137.88 ಕೋಟಿಗೆ ಹೋಲಿಕೆ ಮಾಡಿದಲ್ಲಿ ಕಂಪನಿಯ ನಿವ್ವಳ ಲಾಭವು 182.49 ಕೋಟಿ ಆಗಿದೆ.

ಈ ಮೂಲಕ ನಾವು ಗಮನಾರ್ಹವಾದ ಪ್ರಗತಿ ಸಾಧಿಸುವ ಮತ್ತು ಸಾಬೂನು, ಮಾರ್ಜಕಗಳು ಹಾಗೂ ಗಂಧದ ಎಣ್ಣೆ ಉತ್ಪಾದಿಸುವವರಲ್ಲಿ ಅಗ್ರಗಣ್ಯರಾಗುವ ಆತ್ಮವಿಶ್ವಾಸ ಹೊಂದಿದ್ದೇವೆ.

## ತಂತ್ರಜ್ಞಾನದ ಅಳವಡಿಕೆ

ಮಾರುಕಟ್ಟೆಯ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಯಂತ್ರೋಪಕರಣಗಳನ್ನು ಅಳವಡಿಸುವ ಮೂಲಕ ಉತ್ಪಾದನೆಯ ಹುಟ್ಟುವಳಿಯನ್ನು ಸುಧಾರಿಸಲು ನಾವು ಅತ್ಯುತ್ತಮ ತಂತ್ರಜ್ಞಾನವನ್ನು ಅಳವಡಿಸಿದ್ದೇವೆ ಎಂಬುದನ್ನು ಹಂಚಿಕೊಳ್ಳಲು ಅತೀವ ಸಂತಸವೆನಿಸುತ್ತದೆ ಮತ್ತು ಈ ಮೂಲಕ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಬೇಡಿಕೆಯನ್ನು ಪೂರೈಸಲು ಇದು ನೆರವಾಗುತ್ತದೆ.

## ಭವಿಷ್ಯದ ನಿರೀಕ್ಷೆಗಳು

ನಿಮ್ಮ ಕಂಪನಿಯು 2023–24ಕ್ಕೆ ರೂ.2000 ಕೋಟಿ ಮಹತ್ವಾಕಾಂಕ್ಷಿ ಮಾರಾಟ ಗುರಿ ಹೊಂದಿದೆ ಮತ್ತು ಈ ವಹಿವಾಟನ್ನು ಅತ್ಯಂತ ಸುಲಭವಾಗಿ ಸಾದಿಸುವ ವಿಶ್ವಾಸ ಹೊಂದಿದೆ. ಉತ್ತಮ ಲಾಭಕ್ಕೆ ಚಾಲನೆ ನೀಡುವ ಇತರೇ ಹಲವು ಉತ್ಪನ್ನಗಳತ್ತ ವೈವಿಧ್ಯಗೊಳಿಸುವ ಯೋಜನೆಗಳನ್ನು ಪರಿಣಾಮಕಾರಿ ವೆಚ್ಚ ಮತ್ತು ಕಾರ್ಯಾನಿರ್ವಹಣಾ ಸಾಮರ್ಥ್ಯಗಳೊಂದಿಗೆ ಉತ್ತಮ ಲಾಭದಾಯಕ ಕಾರ್ಯಾಚರಣೆಗಳ ಮೂಲಕ ಬೆಳವಣಿಗೆ ಮತ್ತು ಅಭಿವೃದ್ಧಿ ಮೇಲೆ ನಿಮ್ಮ ಕಂಪನಿಯು ನಿರಂತರ ದೃಷ್ಟಿ ನೆಟ್ಟಿದೆ.

ಕಂಪನಿಯು ಸಂಬಂಧಿತ ಉತ್ಪನ್ನಗಳಾದ ಫೇಸ್ ವಾಷ್, ಪಾರದರ್ಶಕ ಸೋಪ್ ಹಾಗೂ ಘಮಘಮಿಸುವ ಕ್ಯಾಂಡಲ್ ಮೊದಲಾದ ವೈವಿಧ್ಯಗಳ ಉತ್ಪಾದನಾ ಉದ್ದೇಶವನ್ನು ಕಂಪನಿ ಹೊಂದಿದೆ.

ಕೆಎಸ್‌ಡಿಎಲ್ ಮುಂದಿನ ಹಂತದ ಬೆಳವಣಿಗೆಗೇರಿದಾಗ, ನಾವು ಕಂಪನಿಯ ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) ಮತ್ತು ನಾವಿನ್ಯತೆಯ ಸಾಮರ್ಥ್ಯವನ್ನು ಇನ್ನಷ್ಟು ಬಲಗೊಳಿಸುತ್ತೇವೆ.

ಉತ್ತಮ ಭವಿಷ್ಯಕ್ಕಾಗಿ ನಮ್ಮ ಉದ್ಯೋಗಿಗಳ ಸಮರ್ಪಿತ ಮನೋಭಾವ ನಮಗೆ ಹೆಮ್ಮೆಯನ್ನುಂಟುಮಾಡುತ್ತದೆ. ಇವರ ನಿರಂತರ ಪರಿಶ್ರಮದ ಹೊರತಾಗಿ ಈ ವರೆಗಿನ ನಮ್ಮ ಪ್ರಗತಿಯ ಪಯಣವು ಸಾಧ್ಯವಾಗುತ್ತಿರಲಿಲ್ಲ. ನಾವು ನಮ್ಮ ಗ್ರಾಹಕರು, ಸಹಸಂಸ್ಥಾಪಕರು, ನಾವು ಕಾರ್ಯನಿರ್ವಹಿಸುತ್ತಿರುವ ದೇಶಗಳ ಮತ್ತು ರಾಜ್ಯಗಳ ಸರ್ಕಾರಗಳಿಗೆ ನಾವು ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇವೆ. ಎಲ್ಲಕ್ಕಿಂತ ಮುಖ್ಯವಾಗಿ ಕಳೆದ 107 ವರ್ಷಗಳಿಂದ ನಮ್ಮನ್ನು ನಂಬಿರುವ ಗ್ರಾಹಕರಿಗೆ ಅಭಾರಿಗಳಾಗಿದ್ದೇವೆ. ನಮ್ಮ ಮೌಲ್ಯಯುತ ಷೇರುದಾರರಿಗೆ ನಾನು ವಿಧೇಯತೆಯಿಂದ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಮತ್ತು ಇದೇ ರೀತಿಯಲ್ಲಿ ನಿಮ್ಮ ನಿರಂತರ ಬೆಂಬಲ ಪ್ರೋತ್ಸಾಹವನ್ನು ಎದುರುನೋಡುತ್ತೇನೆ. ಸಾಂಕ್ರಾಮಿಕವು ಇನ್ನೂ ನಮ್ಮನ್ನು ಬಿಟ್ಟಿಲ್ಲದೇ ಇರುವುದರಿಂದ ನಾನು ಮತ್ತೊಮ್ಮೆ ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಸುರಕ್ಷಿತರಾಗಿ ಮತ್ತು ಜಾಗರೂಕರಾಗಿ ಇರುವಂತೆ ಮನವಿ ಮಾಡುತ್ತೇನೆ. ನಾನು ಪ್ರತಿಯೊಬ್ಬರಿಗೂ ನನ್ನ ಪ್ರಾಮಾಣಿಕ ಮೆಚ್ಚುಗೆಯನ್ನು ವ್ಯಕ್ತಮಾಡುತ್ತೇನೆ.

ಧನ್ಯವಾದಗಳು,

**ಸಹಿ/–**
**(ಡಾ. ಪಿ.ಕೆ.ಎಂ. ಪ್ರಶಾಂತ್)**
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 0009628072

ಸ್ಥಳ: ಬೆಂಗಳೂರು
ದಿನಾಂಕ: 28–11–2023

ಸೂಚನೆ: ಇದು ಕಂಪನಿಯ 43ನೇ ವಾರ್ಷಿಕ ಮಹಾಸಭೆಯ ನಡಾವಳಿಗಳ ಸಾರಾಂಶದ ವರದಿಯಾಗಿರುವುದಿಲ್ಲ.

# 43ನೇ ವಾರ್ಷಿಕ ಸಾಮಾನ್ಯ ಮಹಾಸಭೆಗೆ ಅಲ್ಪಕಾಲಿಕ ಸೂಚನಾ ಪತ್ರ

ಇವರಿಗೆ,

## ಎಲ್ಲಾ ಷೇರುದಾರರುಗಳಿಗೆ

ಈ ಮೂಲಕ ಸೂಚನಾ ಪತ್ರ ನೀಡಿರುವುದೇನೆಂದರೆ , ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್, ಕಂಪನಿಯ ಸದಸ್ಯರುಗಳ 43ನೇ ವಾರ್ಷಿಕ ಮಹಾಸಭೆಯನ್ನು ನವೆಂಬರ್ 2023ರ 28ನೇ ದಿನಾಂಕದ ಮಂಗಳವಾರದಂದು ಮಧ್ಯಾಹ್ನ 1.00 ಗಂಟೆಗೆ ಐಕೆಎಫ್ ಸಭಾಭವನ, 3ನೇ ಮಹಡಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001, ಕರ್ನಾಟಕ ಇಲ್ಲಿ ಈ ಕೆಳಗಿನ ಕಲಾಪಗಳನ್ನು ನಡೆಸಲು ಏರ್ಪಡಿಸಲಾಗಿದೆ.

## ಸಾಮಾನ್ಯ ಕಲಾಪಗಳು

**01. 31ನೇ ಮಾರ್ಚ್ 2023ರಂದು ಕೊನೆಗೊಂಡ ಆರ್ಥಿಕ ವರ್ಷದ ಲೆಕ್ಕ ಪರಿಶೋಧಿತ ಆರ್ಥಿಕ ವಿವರಣಾ ಪಟ್ಟಿ, ಹಣದ ಹರಿವಿನ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ವಿವರಣಾ ಪಟ್ಟಿಗಳನ್ನು ಕಾರ್ಯದರ್ಶೀಯ (ಸೆಕ್ರೆಟೇರಿಯಲ್) ಲೆಕ್ಕ ಪರಿಶೋಧನೆ ಹಾಗೂ ಲೆಕ್ಕಪರಿಶೋಧಕರ ವರದಿಯೊಂದಿಗೆ 31ನೇ ಮಾರ್ಚ್ 2023ರಂದು ಕೊನೆಗೊಂಡ ಆರ್ಥಿಕ ವರ್ಷದ ಬಗ್ಗೆ ಭಾರತದ ಮಹಾ ನಿಯಂತ್ರಕರು ಮತ್ತು ಲೆಕ್ಕಪರಿಶೋಧಕರ ಟೀಕೆ ಟಿಪ್ಪಣಿಗಳನ್ನು ಒಳಗೊಂಡಂತೆ ಮಂಡಳಿಯ ವರದಿಗಳನ್ನು ಸ್ವೀಕರಿಸಿ ಪರಿಗಣಿಸುವುದು ಮತ್ತು ಅಂಗೀಕರಿಸುವುದು.**

ಕೆಳಕಂಡ ನಿರ್ಣಯಗಳನ್ನು ಮಾರ್ಪಾಡುಗಳೊಡನೆ ಅಥವಾ ಮಾರ್ಪಾಡುಗಳಿಲ್ಲದೇ ಅಂಗೀಕರಿಸಲು ಸೂಕ್ತವೆಂದು ಕಂಡು ಬಂದರೆ ಸಾಮಾನ್ಯ ನಿರ್ಣಯವಾಗೆ ಅಂಗೀಕರಿಸುವುದು.

**"ನಿರ್ಣಯಿಸುವುದೇನೆಂದರೆ,** ಕಂಪನಿಗಳ ಕಾಯ್ದೆ, 2013ರ ಪ್ರಕರಣ 134ರ ಉಪಬಂಧಗಳ ಅನುಸಾರ 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ಲೆಕ್ಕ ಪರಿಶೋಧಿತ ಸ್ವತಂತ್ರ ಆರ್ಥಿಕ ವಿವರ ಪಟ್ಟಿ (ಬ್ಯಾಲನ್ಸ್ ಶೀಟ್) ಮತ್ತು ಲಾಭ ಮತ್ತು ನಷ್ಟದ ಲೆಕ್ಕ ಮತ್ತು ನಗದು ಹರಿವಿನ ಹೇಳಿಕೆ ಜೊತೆಗೆ ನಿರ್ದೇಶಕರ ವರದಿ, ಸೆಕ್ರೆಟೇರಿಯಲ್ ಲೆಕ್ಕ ಪರಿಶೋಧನೆ ವರದಿ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರ ವರದಿ ಹಾಗೂ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಕರ್ನಾಟಕ (ಸಿ & ಎಜಿ) ಇವರ ಶೂನ್ಯ ಟಿಪ್ಪಣಿಯನ್ನು ಷೇರುದಾರರುಗಳಿಗೆ ಹಂಚಿಕೆ ಮಾಡಿರುವಂತೆ ಮತ್ತು ಸಭೆಯ ಮುಂದೆ ಇಟ್ಟಿರುವಂತೆ ಅದನ್ನು ಸ್ವೀಕರಿಸುವುದು, ಅಂಗೀಕರಿಸುವುದು ಮತ್ತು ಅಳವಡಿಸಿಕೊಳ್ಳುವುದು".

**02. 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ರೂ. 54,74,80,421/– ರ ಮೊತ್ತದ ತೆರಿಗೆ ನಂತರದ ಲಾಭದ ಮೊತ್ತಕ್ಕೆ 30%ನಂತೆ ಲಾಭಾಂಶ ಘೋಷಿಸುವುದು:**

ಮಾರ್ಪಾಡುಗಳೊಂದಿಗೆ ಅಥವಾ ಮಾರ್ಪಾಡು(ಗಳು) ಇಲ್ಲದೇ ಅಂಗೀಕರಿಸಲು ಸೂಕ್ತವೆಂದು ಕಂಡು ಬಂದದ್ದೇ ಆದರೆ ಕೆಳಕಂಡ ನಿರ್ಣಯವನ್ನು ಸಾಮಾನ್ಯ ನಿರ್ಣಯವಾಗಿ ಅಂಗೀಕರಿಸುವುದು:

"ನಿರ್ಣಯಿಸುವುದೇನೆಂದರೆ, 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಕಂಪನಿಯ ನಿರ್ದೇಶಕರುಗಳ ಮಂಡಳಿ ಶಿಫಾರಸ್ಸು ಮಾಡಿದಂತೆ ರೂ. 54,74,80,421/– ರ ಮೊತ್ತದ ತೆರಿಗೆ ನಂತರದ ಲಾಭದ ಮೊತ್ತಕ್ಕೆ 30% ದರದಲ್ಲಿ ಅಂತಿಮ ಲಾಭಾಂಶವನ್ನು ಈ ಮೂಲಕ ಘೋಷಿಸುವುದು ಮತ್ತು ದಾಖಲಾತಿ ದಿನಾಂಕದಂದು ಇದ್ದಂತೆ ಸದಸ್ಯರುಗಳ ರಿಜಿಸ್ಟರ್‌ನಲ್ಲಿ ಹೆಸರಿರುವ ಕಂಪನಿಯ ಸದಸ್ಯರುಗಳಿಗೆ ಅದನ್ನು ಪಾವತಿ ಮಾಡುವುದು ".

**03. ಆರ್ಥಿಕ ವರ್ಷ 2023–24ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕ :**

ಆರ್ಥಿಕ ವರ್ಷ 2023–24ಕ್ಕೆ ಭಾರತದ ಮಹಾ ನಿಯಂತ್ರಕರು ಮತ್ತು ಲೆಕ್ಕಪರಿಶೋಧಕರು, ನವದೆಹಲಿ ಇವರು **ಮೆ॥ ಪಿ. ಚಂದ್ರಶೇಖರ್ ಎಲ್‌ಎಲ್‌ಪಿ ಲೆಕ್ಕಪರಿಶೋಧಕರು (ಸಂಸ್ಥೆ ಸಂಖ್ಯೆ 000580ಎಸ್/ಎಸ್200066), ಬೆಂಗಳೂರು** ಇವರನ್ನು ಕಂಪನಿಯ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವುದನ್ನು ಟಿಪ್ಪಣಿ ಮಾಡುವುದು ಮತ್ತು ಅವರಿಗೆ ಸಂಭಾವನೆ ನಿಗದಿಪಡಿಸುವುದಕ್ಕಾಗಿ ಆಡಳಿತ ಮಂಡಳಿ ನಿರ್ದೇಶಕರಿಗೆ ಅಧಿಕಾರ ನೀಡುವುದು ಮತ್ತು ಮಾರ್ಪಾಡುಗಳೊಡನೆ ಮತ್ತು ಮಾರ್ಪಾಡುಗಳಿಲ್ಲದೆ ಕೆಳಕಂಡ ನಿರ್ಣಯಗಳನ್ನು ಸಾಮಾನ್ಯ ನಿರ್ಣಯಗಳನ್ನಾಗಿ ಅಂಗೀಕರಿಸುವುದು:

**"ನಿರ್ಣಯಿಸುವುದೇನೆಂದರೆ,** ಕಂಪನಿಗಳ ಕಾಯ್ದೆ, 2013ರ ಯಾವುದೇ ನಿಯಮಗಳು ಇದ್ದಲ್ಲಿ ಅಂತಹ ಅನ್ವಯವಾಗುವ ನಿಯಮಗಳು, ಇತರೆ ಉಪಬಂಧಗಳು ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇದರ ಅಡಿಯಲ್ಲಿ ರೂಪಿಸಿರುವ ಸಂಬಂಧಪಟ್ಟ ನಿಯಮಗಳನ್ನು ಓದಿಕೊಂಡಂತೆ ಕಾಯ್ದೆ ಪ್ರಕರಣ 139ರ ಉಪಬಂಧಗಳ ಅನುಸಾರ, **ಮೆ॥ ಪಿ. ಚಂದ್ರಶೇಖರ್ ಎಲ್‌ಎಲ್‌ಪಿ ಲೆಕ್ಕಪರಿಶೋಧಕರು (ಸಂಸ್ಥೆ ಸಂಖ್ಯೆ 000580 ಎಸ್/ಎಸ್ 200066),** ಇವರನ್ನು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಭಾರತದ ಮಹಾ ನಿಯಂತ್ರಕರು ಮತ್ತು ಲೆಕ್ಕಪರಿಶೋಧಕರಿಂದ ಈ ಮೂಲಕ ನೇಮಕ ಮಾಡಿದ್ದು, ಇವರು ಸದರಿ ವಾರ್ಷಿಕ ಮಹಾಸಭೆ ಸಮಾಪ್ತಿಯಾದ ಸಮಯದಿಂದ 44ನೇ ವಾರ್ಷಿಕ ಮಹಾಸಭೆ ಸಮಾಪ್ತಿಯಾಗುವವರೆಗೆ ಅಧಿಕಾರದಲ್ಲಿರುವರು ಮತ್ತು ನಿರ್ದೇಶಕರ ಮಂಡಳಿ ಶಿಫಾರಸ್ಸು ಮಾಡಲಿರುವಂತೆ ಸಂಭಾವನೆ ಪಡೆಯುವರು".

ನಿರ್ದೇಶಕರ ಮಂಡಳಿಯ ಆದೇಶದ ಅನ್ವಯ

**ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ಪರವಾಗಿ**

**ಸಹಿ/–**

**(ಶೀಲಾ ಅರವಿಂದ್)**

**ಕಂಪನಿ ಕಾರ್ಯದರ್ಶಿ (ನೋಂ)**

ಸ್ಥಳ: ಬೆಂಗಳೂರು

ದಿನಾಂಕ :25/11/2023

**ಟಿಪ್ಪಣಿಗಳು:**

ಎ) ಸಭೆಗೆ ಹಾಜರಾಗಲು ಹಾಗೂ ಮತದಾನ ಮಾಡಲು ಅರ್ಹತೆಯುಳ್ಳ ಸದಸ್ಯರು ತಮ್ಮ ಪರವಾಗಿ ಹಾಜರಾಗಲು ಮತ್ತು ಮತದಾನ ಮಾಡಲು ಬೇರೊಬ್ಬರನ್ನು(ಪ್ರಾಕ್ಸಿ) ನೇಮಕ ಮಾಡಬಹುದು ಮತ್ತು ಹಾಗೆ ಪ್ರಾಕ್ಸಿಯಾಗಿ ನೇಮಕಗೊಂಡ ವ್ಯಕ್ತಿಯು ಕಂಪನಿಯ ಸದಸ್ಯರಾಗಿರಬೇಕಿಲ್ಲ. ಮತದಾನದಲ್ಲಿ ಮಾತ್ರ ಪ್ರಾಕ್ಸಿಯಾಗಿ ನೇಮಕಗೊಂಡವರು ಮತದಾನದಲ್ಲಿ ಕೇವಲ ಮತ ಚಲಾಯಿಸಲು ಅರ್ಹತೆ ಪಡೆದುಕೊಂಡಿರುತ್ತಾರೆ. ಆದರೆ, ಪ್ರಾಕ್ಸಿ ಚಾಲ್ತಿಗೆ ಬರಲು ಸಭೆಗೆ 48 ಗಂಟೆಗಳ ಮುನ್ನ ನಿಗಮದ ನೋಂದಾಯಿತ ಕಚೇರಿಯಲ್ಲಿ ಠೇವಣಿ ಮಾಡಬೇಕು. ಖಾಲಿ ಪ್ರಾಕ್ಸಿ ನಮೂನೆಯನ್ನು ಲಗತ್ತಿಸಲಾಗಿದೆ.

ಐವತ್ತನ್ನು ಮೀರದ ಸದಸ್ಯರ ಪರವಾಗಿ ಒಬ್ಬ ವ್ಯಕ್ತಿಯು ಪ್ರಾಕ್ಸಿ ಆಗಿ ಕಾರ್ಯನಿರ್ವಹಿಸಬಹುದು ಮತ್ತು ಮತದಾನದ ಹಕ್ಕನ್ನು ಹೊಂದಿರುವ ಕಂಪನಿಯ ಒಟ್ಟು ಷೇರು ಬಂಡವಾಳದ ಹತ್ತು ಶೇಕಡಾಕ್ಕಿಂತ ಹೆಚ್ಚು ಷೇರು ಹೊಂದಿರುವ ಸದಸ್ಯರು ಒಬ್ಬ ವ್ಯಕ್ತಿಯನ್ನು ಮಾತ್ರ ಪ್ರಾಕ್ಸಿಯಾಗಿ ನೇಮಕ ಮಾಡಬಹುದು ಮತ್ತು ಅಂತಹ ವ್ಯಕ್ತಿಯು ಮತ್ತೊಬ್ಬ ಯಾವುದೇ ವ್ಯಕ್ತಿಗೆ ಅಥವಾ ಷೇರುದಾರರಿಗೆ ಪ್ರಾಕ್ಸಿ ಆಗಿ ಕಾರ್ಯನಿರ್ವಹಿಸಕೂಡದು.

ಬಿ) ಸಭೆಗೆ ಹಾಜರಾಗಲು ಸದಸ್ಯರು/ಪ್ರಾಕ್ಸಿಗಳು ಹಾಜರಾತಿ ಚೀಟಿಯನ್ನು ತುಂಬಿಸಿ ಸಹಿ ಮಾಡಬೇಕು ಮತ್ತು ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಗೆ ವಾರ್ಷಿಕ ವರದಿಯ ಪ್ರತಿಯನ್ನ ತಮ್ಮ ಹಾಜರಾತಿ ಚೀಟಿಯೊಂದಿಗೆ ತರಬೇಕು.

ಸಿ) ಸಭೆಗೆ ಹಾಜರಾಗಲು ತಮ್ಮ ಅಧಿಕೃತ ಪ್ರತಿನಿಧಿಗಳನ್ನು ಕಳುಹಿಸಲು ಬಯಸುವ ಕಾರ್ಪೋರೇಟ್ ಸದಸ್ಯರು ಕಂಪನಿಗೆ ತಮ್ಮ ಪ್ರತಿನಿಧಿಯನ್ನು ಸಭೆಗೆ ಹಾಜರಾಗಲು ಮತ್ತು ಸಭೆಯಲ್ಲಿ ಅವರ ಪರವಾಗಿ ಮತದಾನ ಮಾಡಲು ಅಧಿಕಾರ ನೀಡಿ ಮಂಡಳಿಯ ನಿರ್ಣಯದ ಪ್ರಮಾಣೀಕರಿಸಿದ ಪ್ರತಿಯನ್ನು ಕಳುಹಿಸಲು ಕೋರಲಾಗಿದೆ.

ಡಿ) ಕಂಪನಿ ಕಾಯ್ದೆ 2013ರ ಅಡಿಯಲ್ಲಿ ರಿಜಿಸ್ಟರ್‌ಗಳು ನೋದಾಯಿತ ಕಚೇರಿಯಲ್ಲಿ ರಜಾದಿನಗಳ ಹೊರತಾಗಿ ವ್ಯವಹಾರದ ಅವಧಿಯಲ್ಲಿ ತಪಾಸಣೆಗೆ ಲಭ್ಯವಿದೆ. ಹೇಳಲಾಗಿರುವ ಈ ರಿಜಿಸ್ಟರ್‌ಗಳು ಸದಸ್ಯರಿಂದ ತಪಾಸಣೆಗೆ 43ನೇ ವಾರ್ಷಿಕ ಮಹಾಸಭೆಯಲ್ಲೂ ಸದಸ್ಯರಿಂದ ತಪಾಸಣೆಗೆ ಲಭ್ಯವಿರಲಿದೆ.

ಇ) ಕಂಪನಿಯು ಸರ್ಕಾರಿ ಕಂಪನಿ ಆಗಿರುವುದರಿಂದ, ಭಾರತದ ಮಹಾ ನಿಯಂತ್ರಕರು ಮತ್ತು ಲೆಕ್ಕಪರಿಶೋಧಕರು ಕಂಪನಿ ಕಾಯ್ದೆ 2013,ರ ಸೆಕ್ಷನ್ 139ರ ಉಪಬಂಧ (5)ರಡಿಯಲ್ಲಿ ಮೆ॥ ಪಿ. ಚಂದ್ರಶೇಖರ್ ಎಲ್‌ಎಲ್‌ಪಿ (ಸಂಸ್ಥೆ ಸಂಖ್ಯೆ 000580S/S200066), ಲೆಕ್ಕಪರಿಶೋಧಕರು ಇವರನ್ನು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ 2023–24ರ ಹಣಕಾಸು ವರ್ಷದ ಅವಧಿಗೆ ಪತ್ರ ಸಂ. ಸಿ.ಎ.ವಿ/ಸಿಒವೈ/ ಕರ್ನಾಟಕ, ಕೆಎನ್‌ಎಸ್‌ಒಎಪಿ(1) 1669 ದಿನಾಂಕ 22/09/2023ರ ಮೂಲಕ ನೇಮಕ ಮಾಡಿದೆ.

ಎಫ್) ಹಣಕಾಸಿನ ವಿವರಣಾ ಪಟ್ಟಿ, ಲೆಕ್ಕಪರಿಶೋಧಕರ ವರದಿ, ಆಡಳಿತ ಮಂಡಳಿ ವರದಿಗಳನ್ನು ಸಂಬಂಧಿಸಿದ ಅನುಬಂಧಗಳೊಂದಿಗೆ ಇಲ್ಲಿ ಲಗತ್ತಿಸಲಾಗಿದೆ.

ಜಿ) ಕಂಪನಿಯ ಷೇರುದಾರರಿಂದ ಅಗತ್ಯ ಸಮ್ಮತಿಯನ್ನು ಪಡೆದ ಬಳಿಕ ಅಲ್ಪಾವಧಿ ಸೂಚನಾ ಪತ್ರದೊಂದಿಗೆ ಕಂಪನಿಯ 43ನೇ ವಾರ್ಷಿಕ ಮಹಾಸಭೆಯನ್ನು ಆಯೋಜಿಸಲಾಗಿದೆ.

# ಮಂಡಳಿಯ ವರದಿ

ಇವರಿಗೆ

ಸದಸ್ಯರು

ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್,
ಬೆಂಗಳೂರು

ಮಾರ್ಚ್ 31, 2023ರ ಹಣಕಾಸು ವರ್ಷಕ್ಕೆ ನಿಮ್ಮ ಕಂಪನಿಯ 43ನೇ ವಾರ್ಷಿಕ ವರದಿಯನ್ನು ಲೆಕ್ಕ ಪರಿಶೋಧನೆ ಮಾಡಲಾದ ಹಣಕಾಸು ವಿವರಣಾ ಪಟ್ಟಿಗಳೊಂದಿಗೆ ಪ್ರಸ್ತುತಪಡಿಸಲು ನಿಮ್ಮ ನಿರ್ದೇಶಕರು ಅತೀವ ಸಂತಸ ಹೊಂದಿದ್ದಾರೆ.

## 1. ನಮ್ಮ ಕಾರ್ಯಕ್ಷಮತೆಯ ಹಣಕಾಸು ಫಲಿತಾಂಶಗಳು

ಪರಾಮರ್ಶನೆಯಲ್ಲಿರುವ ಆರ್ಥಿಕ ವರ್ಷದಲ್ಲಿ ನಿಮ್ಮ ಕಂಪನಿಯ ಹಣಕಾಸಿನ ಕಾರ್ಯಾಚರಣೆಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

(ಮೊತ್ತ ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31, 2023 | ಮಾರ್ಚ್ 31, 2022 |
|---|---|---|
| ಕಾರ್ಯನಿರ್ವಹಣೆಯಿಂದ ಬಂದ ಒಟ್ಟು ಆದಾಯ | 1,127.19 | 929.62 |
| ಇತರೆ ಆದಾಯ | 51.45 | 26.83 |
| ಒಟ್ಟು ಆದಾಯ | **1,178.64** | **956.45** |
| ಸವಕಳಿ ಮತ್ತು ಹಣಕಾಸಿನ ವೆಚ್ಚ ಸೇರಿದಂತೆ ಒಟ್ಟು ಖರ್ಚುಗಳು | 899.45 | 715.00 |
| ಅಸಾಧಾರಣ ಅಂಶಗಳ ಮುನ್ನ ಲಾಭ/ನಷ್ಟ | 279.19 | 241.45 |
| ಅಸಾಧಾರಣ ಅಂಶಗಳು | - | - |
| ತೆರಿಗೆಗೆ ಮುನ್ನ ಲಾಭ/ನಷ್ಟ | 279.19 | 241.45 |
| ತೆರಿಗೆ ಖರ್ಚುಗಳು | 98.42 | 103.25 |
| ಈ ವರ್ಷಕ್ಕೆ ಲಾಭ/(ನಷ್ಟ) | **180.77** | **138.20** |
| ಇತರೆ ಸಮಗ್ರ ಆದಾಯ | 1.72 | (0.33) |
| ಈ ಅವಧಿಗೆ ಒಟ್ಟು ಸಮಗ್ರ ಆದಾಯ | **182.49** | **137.88** |

## 2. ಮೀಸಲು ನಿಧಿಗೆ ವರ್ಗಾಯಿಸಿರುವ ಮೊತ್ತಗಳು:

ಪರಾಮರ್ಶೆಯ ವರ್ಷದ ಅವಧಿಯಲ್ಲಿ ಮೀಸಲು ನಿಧಿಗೆ ಯಾವುದೇ ಮೊತ್ತವನ್ನು ವರ್ಗಾಯಿಸಿರುವುದಿಲ್ಲ

## 3. ಲಾಭಾಂಶ:

ನಿಮ್ಮ ಕಂಪನಿಯ ನಿರ್ದೇಶಕರ ಮಂಡಳಿಯು ಸದಸ್ಯರ ನೋಂದಣಿಯಂತೆ ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಾದ ತೆರಿಗೆ ನಂತರದ ಲಾಭಾಂಶ 30% ಮೊತ್ತವಾದ ರೂ. 54,74,80,421 ನ್ನು ಶಿಫಾರಸ್ಸು ಮಾಡಲು ನಿಮ್ಮ ಕಂಪನಿಯ ಆಡಳಿತ ಮಂಡಳಿ ನಿರ್ದೇಶಕರು ಹರ್ಷಿಸುವರು.

## 4. ಕಂಪನಿಯ ಕಾರ್ಯಕ್ಷಮತೆ:

**ಎ) ಮಾರಾಟ :** ಮಾರಾಟದ ವಿಭಾಗವಾರು ಸ್ಥಿತಿ :

| ಕ್ರ. ಸಂ. | ಸರಕುಗಳ ವರ್ಗ | 2022-23 | | 2021-22 | |
|---|---|---|---|---|---|
| | | ಪ್ರಮಾಣ ಮೆಟ್ರಿಕ್ ಟನ್‌ಗಳಲ್ಲಿ | ಮೌಲ್ಯ (ಲಕ್ಷ ರೂ.ಗಳಲ್ಲಿ | ಪ್ರಮಾಣ ಮೆಟ್ರಿಕ್ ಟನ್‌ಗಳಲಿ | ಮೌಲ್ಯ (ಲಕ್ಷ ರೂ.ಗಳಲ್ಲಿ |
| 1. | ಸಾಬೂನುಗಳು | 27,229.487 | 1,04,722.61 | 23,319.86 | 85,725.46 |
| 2. | ಮಾರ್ಜಕಗಳು | 5,633.111 | 2,285.51 | 4,025.23 | 2,419.54 |
| 3. | ಶ್ರೀಗಂಧದೆಣ್ಣೆ | 0.009 | 49.07 | 0.02 | 77.62 |
| 4. | ಅಗರಬತ್ತಿಗಳು | 799.087 | 1,105.55 | 765.83 | 2,080.55 |
| 5. | ಟಾಲ್ಕಂ ಪೌಡರ್/ ಪ್ರಸಾದನಗಳು (ಕಾಸ್ಮೆಟಿಕ್ಸ್) | 359.290 | 1,599.09 | 315.80 | 1,309.24 |
| 6. | ತೆಂಗಿನ ಎಣ್ಣೆ | 514.820 | 1,917.00 | 254.55 | 833.69 |
| 7. | ಇತರೆ | 267.480 | 1,040.55 | 212.23 | 515.84 |
| | ಒಟ್ಟು | **34,803.284** | **1,12,719.38** | **28,893.52** | **92,961.94** |

**ಬಿ) ಕಾರ್ಯಾಚರಣೆ ಕಾರ್ಯಕ್ಷಮತೆ :**

**i) ವಿಭಾಗವಾರು ಉತ್ಪಾದನೆ:**

ಸದರಿ ವರ್ಷದ ಅವಧಿಯಲ್ಲಿ ಕಂಪನಿಯ ವಿವಿಧ ಉತ್ಪನ್ನಗಳ ಉತ್ಪಾದನೆಯ ಒಟ್ಟು ಮೌಲ್ಯ ಹಿಂದಿನ ವರ್ಷದ ಮೌಲ್ಯ ರೂ.28,468.16 ಲಕ್ಷಗಳಿಗೆ ಪ್ರತಿಯಾಗಿ ಈ ವರ್ಷ ರೂ.34,626.29 ಲಕ್ಷಗಳು. ಉತ್ಪನ್ನವಾರು ವಾಸ್ತವಿಕ ಉತ್ಪಾದನೆಯ ಪ್ರಮಾಣವು ಈ ಕೆಳಕಂಡಂತಿದೆ:

| ಕ್ರ. ಸಂ. | ಸರಕುಗಳ ವರ್ಗ | ವಾಸ್ತವಿಕ ಉತ್ಪಾದನೆ ಮೆಟ್ರಿಕ್ ಟನ್‌ಗಳಲ್ಲಿ | |
|---|---|---|---|
| | | 2022-23 | 2021-22 |
| 1. | ಸಾಬೂನುಗಳು | 27,087.110 | 23,289.15 |
| 2. | ಮಾರ್ಜಕಗಳು | 5,832.233 | 3,820.78 |
| 3. | ಶ್ರೀಗಂಧದೆಣ್ಣೆ (ಶ್ರೀಗಂಧದೆಣ್ಣೆ ಹಿಂಡಿ ತೆಗೆದ ಪದಾರ್ಥಗಳು) | 2.167 | 3.15 |
| 4. | ಅಗರಬತ್ತಿಗಳು | 661.765 | 668.47 |
| 5. | ಟಾಲ್ಕಂ ಪೌಡರ್ | 579.484 | 441.52 |
| 6. | ತೆಂಗಿನ ಎಣ್ಣೆ | 463.539 | 245.09 |
| 7. | ಇತರೆ | - | - |
| | ಒಟ್ಟು | **34,626.298** | **28,468.16** |

### ii) 2022–23 ವರ್ಷದ ಮುಖ್ಯಾಂಶಗಳು

ನಿಮ್ಮ ಕಂಪನಿಯು ಕಳೆದ ವರ್ಷದಲ್ಲಿ ಮಾಡಿದ್ದ 929.62 ರೂ. ವರಮಾನಕ್ಕೆ ಪ್ರತಿಯಾಗಿ 31.03.2023ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ 1127.29 ಕೋಟಿ ರೂ ವರಮಾನ ಗಳಿಸಿದೆ. ಕಂಪನಿಯು ಹಿಂದಿನ ವರ್ಷದಲ್ಲಿ ರೂ. 137.88 ಕೋಟಿ ನಿವ್ವಳ ಲಾಭಕ್ಕೆ ಪ್ರತಿಯಾಗಿ ರೂ. 182.49 ಕೋಟಿಗಳ ನಿವ್ವಳ ಲಾಭ ಗಳಿಸಿದೆ. ಕಂಪನಿಯು ಈ ಹಿಂದಿನ ವರ್ಷದ ಖರ್ಚು ರೂ715.00 ಕೋಟಿ ರೂಗಳಿಗೆ ಪ್ರತಿಯಾಗಿ ಪ್ರಸಕ್ತ ಸಾಲಿನಲ್ಲಿ ರೂ.899.45 ಕೋಟಿ ಖರ್ಚು ಮಾಡಿದೆ.

### 5. ಆರ್ಥಿಕ ವರ್ಷದ ಕೊನೆ ಮತ್ತು ವರದಿಯ ದಿನಾಂಕದ ನಡುವೆ ಹಣಕಾಸಿನ ಸ್ಥಿತಿಗತಿಯ ಮೇಲೆ ಪರಿಣಾಮ ಉಂಟು ಮಾಡುವ ವಾಸ್ತವಿಕ ಬದಲಾವಣೆಗಳು ಮತ್ತು ಬದ್ಧತೆಗಳು

ಆರ್ಥಿಕ ವರ್ಷದ ಕೊನೆ ಮತ್ತು ವರದಿಯ ದಿನಾಂಕದ ನಡುವೆ ಹಣಕಾಸಿನ ಸ್ಥಿತಿಗತಿಯ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ವಾಸ್ತವಿಕ ಬದಲಾವಣೆಗಳು ಮತ್ತು ಬದ್ಧತೆಗಳು ನಿಮ್ಮ ಕಂಪನಿ ಹೊಂದಿರುವುದಿಲ್ಲ.

### 6. ಪ್ರಸ್ತುತ ವರ್ಷದ ಅವಧಿಯಲ್ಲಿ ಕಂಪನಿಯ ಬಂಡವಾಳ ಸ್ವರೂಪದಲ್ಲಿ ಆಗಿರುವ ಬದಲಾವಣೆಗಳು

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಆರ್ಥಿಕ ವರ್ಷ ಆರಂಭ ಮತ್ತು ಅಂತ್ಯದಲ್ಲಿ ಕಂಪನಿಯ ಅಧಿಕೃತ ಷೇರು ಬಂಡವಾಳ ರೂ.35,00,00,000/–(ಮೂವತ್ತ ಐದು ಕೋಟಿ ರೂಪಾಯಿಗಳು ಮಾತ್ರ) ಈ ಮೊತ್ತವು ತಲಾ ರೂ.1000/– (ಒಂದು ಸಾವಿರ ರೂಪಾಯಿಗಳು ಮಾತ್ರ) 3,50,000 (ಮೂರು ಲಕ್ಷದ ಐವತ್ತು ಸಾವಿರ) ಷೇರುಗಳಿಂದ ಬಂದಿರುವುದು.

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಆರಂಭ ಮತ್ತು ಅಂತ್ಯದಲ್ಲಿನ ಕಂಪನಿಯ ಪಾವತಿಯಾದ ಷೇರು ಬಂಡವಾಳ ತಲಾ ರೂ.1000/– (ಒಂದು ಸಾವಿರ ರೂಪಾಯಿಗಳು ಮಾತ್ರ) ಮೊತ್ತದ 3,18,221/– (ಮೂರು ಲಕ್ಷ ಹದಿನೆಂಟು ಸಾವಿರದ ಎರಡು ನೂರ ಇಪ್ಪತ್ತೊಂದು) ಷೇರುಗಳಿಂದ ವಿಭಾಗಿಸಲ್ಪಟ್ಟ ರೂ.31,82,21,000/– (ಮೂವತ್ತೊಂದು ಕೋಟಿ ಎಂಬತ್ತೆರಡು ಲಕ್ಷದ ಇಪ್ಪತ್ತೊಂದು ಸಾವಿರ ರೂಪಾಯಿಗಳು ಮಾತ್ರ) ಆಗಿರುವುದು.

ಕಂಪನಿಯು ಪರಾಮರ್ಶನೆಯಲ್ಲಿನ ವರ್ಷದ ಅವಧಿಯಲ್ಲಿ ಸ್ವೆಟ್ ಈಕ್ವಿಟಿ ಷೇರುಗಳು, ಬೋನಸ್ ಷೇರುಗಳು, ನೌಕರರ ಷೇರು ಅವಕಾಶ, ಸಾಲಪತ್ರಗಳು (ಡಿಬೆಂಚರುಗಳು), ಕರಾರು ಪತ್ರಗಳು (ಬಾಂಡ್‌ಗಳು), ಷೇರ್ ವಾರೆಂಟ್‌ಗಳು ಅಥವಾ ಯಾವುದೇ ಇತರೆ ಪರಿವರ್ತನೀಯವಲ್ಲದ ಸೆಕ್ಯೂರಿಟಿಗಳನ್ನು ನೀಡಿರುವುದಿಲ್ಲ.

### 7. ಸೆಕ್ಯೂರಿಟಿಗಳ ಕ್ರೆಡಿಟ್ ರೇಟಿಂಗ್

ನಿಮ್ಮ ಕಂಪನಿಯು ಭಾರತದಲ್ಲಾಗಲಿ ಅಥವಾ ವಿದೇಶದಲ್ಲಾಗಲಿ ಹಣವನ್ನು ಸಂಗ್ರಹಿಸುವ ವ್ಯವಸ್ಥೆ ಒಳಗೊಂಡ ಸಾಲಪತ್ರಗಳನ್ನು ನೀಡಿರುವುದಿಲ್ಲ ಅಥವಾ ಯಾವುದೇ ನಿಶ್ಚಿತ ಠೇವಣಿ ಕಾರ್ಯಕ್ರಮ ಅಥವಾ ಯಾವುದೇ ಯೋಜನೆ ಅಥವಾ ಪ್ರಸ್ತಾವನೆಯನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ ಕಂಪನಿಯು ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಯಾವುದೇ ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳಿಂದ ತನ್ನ ಸೆಕ್ಯೂರಿಟಿಗಳಿಗೆ ಕ್ರೆಡಿಟ್ ರೇಟಿಂಗ್ ಪಡೆದುಕೊಂಡಿರುವುದಿಲ್ಲ.

### 8. ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ

ನಿಗದಿಪಡಿಸಿದ ಕಾಲಾವಧಿಯ ಒಳಗೆ ಎಲ್ಲಾ ಷೇರುದಾರರು ಸಂಪೂರ್ಣ ಲಾಭಾಂಶವನ್ನು ಪಡೆದುಕೊಂಡಿರುವುದರಿಂದ ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕೇಳದೆ ಬಿಟ್ಟಿರುವ ಯಾವುದೇ ಲಾಭಾಂಶವನ್ನು ನಿಮ್ಮ ಕಂಪನಿಯು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾಯಿಸಿರುವುದಿಲ್ಲ. ಆದ್ದರಿಂದಾಗಿ ಕಂಪನಿಗಳ ಕಾಯ್ದೆ 2013ರ ಪ್ರಕರಣ 125(2)ರ ಉಪಬಂಧಗಳು ಅನ್ವಯವಾಗದು.

### 9. ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಮಂಡಳಿ ಸಿಬ್ಬಂದಿ

ಕಂಪನಿಯು ಸರ್ಕಾರದ ನಿಗಮವಾಗಿರುವುದರಿಂದ ಕಂಪನಿಯ ನಿರ್ದೇಶಕರು ಕಂಪನಿಯ ನಾಮನಿರ್ದೇಶಿತ ನಿರ್ದೇಶಕರಾಗಿರುವರು. ಇವರು ನಿಯೋಜನೆ ಮೇಲಿರುವರು. ನಿರ್ದೇಶಕರ ಮಂಡಳಿಯ ಪ್ರಸಕ್ತ ಸಂಯೋಜನೆ ಸೇರಿದಂತೆ ಆರ್ಥಿಕ ವರ್ಷ 2022–23ರ ಅವಧಿಯಲ್ಲಿ ಈ ಕೆಳಕಂಡ ಬದಲಾವಣೆ ಆಗಿರುವುದು;

| ಕ್ರ. ಸಂ. | ನಿರ್ದೇಶಕರ ಹೆಸರು | ಡಿಐಎನ್ | ಪದನಾಮ | ನೇಮಕಾತಿ/ ಸಮಾಪ್ತಿ | ನೇಮಕಾತಿ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|---|---|---|
| 1 | ಶ್ರೀ ಚಂದ್ರಶೇಖರ್ ನಾಯಕ್. ಎಲ್ | 08215036 | ಸ್ವತಂತ್ರ ನಿರ್ದೇಶಕರು | ಸಮಾಪ್ತಿ | 06/07/2020 | 18/04/2022 |
| 2 | ಶ್ರೀ ಕೆ.ಎಂ. ವಿರೂಪಾಕ್ಷಪ್ಪ | 08904142 | ನಾಮ ನಿರ್ದೇಶಿತ ನಿರ್ದೇಶಕರು ಮತ್ತು ಅಧ್ಯಕ್ಷ | ಸಮಾಪ್ತಿ | 27/07/2020 | 07/03/2023 |
| 3 | ಮಹೇಶ್ ಬಿ ಶಿರೂರು | 08524095 | ವ್ಯವಸ್ಥಾಪಕ ನಿರ್ದೇಶಕರು | ಸಮಾಪ್ತಿ | 06/03/2021 | 23/05/2022 |
| 4 | ಸಿದ್ದಿಕ್ ಪಾಷಾ | 09253321 | ಸಮಾಪ್ತಿ | ಸಮಾಪ್ತಿ | 22/06/2021 | 31/03/2023 |
| 5 | ಡಾ.ಮಹೇಶ್ ಮಹಾದೇವಯ್ಯ | 09628072 | ವ್ಯವಸ್ಥಾಪಕ ನಿರ್ದೇಶಕರು | ನೇಮಕಾತಿ | 23/05/2022 | - |
| 6 | ಕುಕ್ಕೇಹಳ್ಳಿ ನಿತೀಶ್ | 08890701 | ನಾಮನಿರ್ದೇಶಿತ ನಿರ್ದೇಶಕರು | ನೇಮಕಾತಿ | 31/05/2022 | - |
| 7 | ಕೃಷ್ಣಮೂರ್ತಿ ಕೆ.ಎಸ್. | - | ನಾಮನಿರ್ದೇಶಿತ ನಿರ್ದೇಶಕರು | ನೇಮಕಾತಿ | 03/02/2023 | - |
| 8 | ಕಿರಣ್ ಅವರಾಡಿ | - | ನಾಮನಿರ್ದೇಶಿತ ನಿರ್ದೇಶಕರು | ನೇಮಕಾತಿ | 14/02/2023 | - |
| 9 | ಗಾಳೆಪ್ಪ ದೊಡ್ಡ ಪೂಜಾರಪ್ಪ | - | ನಾಮನಿರ್ದೇಶಿತ ನಿರ್ದೇಶಕರು | ನೇಮಕಾತಿ | 07/03/2023 | - |
| 10 | ಜಯಣ್ಣ ಪುಟ್ಟಪ್ಪ ಮಾಲಿಗಾರ | - | ನಾಮನಿರ್ದೇಶಿತ ನಿರ್ದೇಶಕರು | ನೇಮಕಾತಿ | 02/03/2023 | - |

ಜಮಾ ಖರ್ಚು ಪಟ್ಟಿ ನಂತರದ ದಿನಾಂಕ ಮತ್ತು ಮಂಡಳಿ ವರದಿ ದಿನಾಂಕದ ವರೆಗೆ ಮಂಡಳಿಯಲ್ಲಿ ಆದ ಬದಲಾವಣೆಗಳು ಕೆಳಗಿನಂತಿವೆ.

| ಕ್ರ. ಸಂ. | ನಿರ್ದೇಶಕರ ಹೆಸರು | ಡಿಐಎನ್ | ಪದನಾಮ | ನೇಮಕಾತಿ/ ಸಮಾಪ್ತಿ | ನೇಮಕಾತಿ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|---|---|---|
| 1. | ಮಲ್ಲಿಕಾರ್ಜುನ ವೀರಭದ್ರಪ್ಪ ಸಾಹುಕಾರ | 09046936 | ವ್ಯವಸ್ಥಾಪಕ ನಿರ್ದೇಶಕರು | ಸಮಾಪ್ತಿ | 29/12/2020 | 22/05/2023 |
| 2. | ಕುಬಸದ ರಾಜು ನಿವೇದಿತ | 09046939 | ವ್ಯವಸ್ಥಾಪಕ ನಿರ್ದೇಶಕರು | ಸಮಾಪ್ತಿ | 29/12/2020 | 22/05/2023 |
| 3. | ಹಾಲೇಶಪ್ಪ ಶಿವಕುಮಾರ್ | 09047618 | ಸ್ವತಂತ್ರ ನಿರ್ದೇಶಕರು | ಸಮಾಪ್ತಿ | 29/12/2020 | 22/05/2023 |
| 4. | ಡಾಮಹೇಶ್ ಮಹಾದೇವಯ್ಯ | 09628072 | ನಾಮನಿರ್ದೇಶಿತ ನಿರ್ದೇಶಕರು | ಸಮಾಪ್ತಿ | 23/05/2022 | 08/08/2023 |
| 5. | ವಿಕಾಶ್ ಕುಮಾರ್ ವಿಕಾಶ್ | 08122455 | ನಾಮನಿರ್ದೇಶಿತ ನಿರ್ದೇಶಕರು | ಸಮಾಪ್ತಿ | 22/06/2021 | 08/08/2023 |
| 6. | ಕೃಷ್ಣಮೂರ್ತಿ ಕೆ.ಎಸ್ | - | ವ್ಯವಸ್ಥಾಪಕ ನಿರ್ದೇಶಕರು | ಸಮಾಪ್ತಿ | 03/02/2023 | 22/05/2023 |
| 7. | ಕಿರಣ್ ಅವರಾಡಿ | - | ನಾಮನಿರ್ದೇಶಿತ ನಿರ್ದೇಶಕರು | ಸಮಾಪ್ತಿ | 14/02/2023 | 22/05/2023 |
| 8. | ಗುಳ್ಳಪ್ಪ ದೊಡ್ಡಪೂಜಾಕಾರಪ್ಪ | - | ನಾಮನಿರ್ದೇಶಿತ ನಿರ್ದೇಶಕರು | ಸಮಾಪ್ತಿ | 07/03/2023 | 22/05/2023 |
| 9. | ಜಯಣ್ಣ ಪುಟ್ಟಪ್ಪ ಮಲ್ಲಿಗಾರ | - | ನಾಮನಿರ್ದೇಶಿತ ನಿರ್ದೇಶಕರು | ಸಮಾಪ್ತಿ | 02/03/2023 | 22/05/2023 |
| 10. | ಮಲ್ಲನಗೌಡ ಬಸನಗೌಡ ಪಾಟೀಲ್ | 02558869 | ನಾಮನಿರ್ದೇಶಿತ ನಿರ್ದೇಶಕರು ಅಧ್ಯಕ್ಷರು | ನೇಮಕಾತಿ | 13/06/2023 | ಈ ದಿನಾಂಕದ ವರೆಗೆ |
| 11. | ಪುರದ ಕಟ್ಟಿ ಮನೆಮಠದ ಪ್ರಶಾಂತ್ | 10293189 | ವ್ಯವಸ್ಥಾಪಕ ನಿರ್ದೇಶಕರು | ನೇಮಕಾತಿ | 08/08/2023 | ಈ ದಿನಾಂಕದ ವರೆಗೆ |
| 12. | ಮನೋಜ್ ಕುಮಾರ್ | 09379177 | ನಾಮನಿರ್ದೇಶಿತ ನಿರ್ದೇಶಕರು | ನೇಮಕಾತಿ | 08/08/2023 | ಈ ದಿನಾಂಕದ ವರೆಗೆ |
| 13. | ರಾಮಚಂದ್ರಪ್ಪ ರಮೇಶ್ | 06820058 | ನಾಮನಿರ್ದೇಶಿತ ನಿರ್ದೇಶಕರು | ನೇಮಕಾತಿ | 08/08/2023 | ಈ ದಿನಾಂಕದ ವರೆಗೆ |

ವರದಿ ದಿನಾಂಕದಂದು, ಮಂಡಳಿಯ ರಚನೆ ಈ ಕೆಳಗಿನಂತಿದೆ:

| ಕ್ರ. ಸಂ. | ನಿರ್ದೇಶಕರ ಹೆಸರು ಮತ್ತು ಡಿಐಎನ್ | ಪದನಾಮ | ನೇಮಕಾತಿ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|---|
| 1 | ಮಲ್ಲನಗೌಡ ಬಸನಗೌಡ ಪಾಟೀಲ್ ಡಿಐಎನ್: 02558869 | ನಾಮನಿರ್ದೇಶಿತ ನಿರ್ದೇಶಕರು ಅಧ್ಯಕ್ಷರು | 13/06/2023 | ಈ ದಿನಾಂಕದ ವರೆಗೆ |
| 2 | ಪುರದ ಕಟ್ಟಿ ಮನೆಮಠದ ಪ್ರಶಾಂತ್ ಡಿಐಎನ್: 10293189 | ವ್ಯವಸ್ಥಾಪಕ ನಿರ್ದೇಶಕರು | 08/08/2023 | ಈ ದಿನಾಂಕದ ವರೆಗೆ |
| 3 | ಕುಕ್ಕೆಹಳ್ಳಿ ನಿತೀಶ್ ಡಿಐಎನ್: 08890701 | ನಾಮನಿರ್ದೇಶಿತ ನಿರ್ದೇಶಕರು | 31/05/2022 | ಈ ದಿನಾಂಕದ ವರೆಗೆ |
| 4 | ಮನೋಜ್ ಕುಮಾರ್ ಡಿಐಎನ್: 09379177 | ನಾಮನಿರ್ದೇಶಿತ ನಿರ್ದೇಶಕರು | 08/08/2023 | ಈ ದಿನಾಂಕದ ವರೆಗೆ |
| 5 | ರಾಮಚಂದ್ರಪ್ಪ ರಮೇಶ್ ಡಿಐಎನ್: ಡಿಐಎನ್: 06820058 | ನಾಮನಿರ್ದೇಶಿತ ನಿರ್ದೇಶಕರು | 08/08/2023 | ಈ ದಿನಾಂಕದ ವರೆಗೆ |

## 10. ಸ್ವತಂತ್ರ ನಿರ್ದೇಶಕರು

ಸ್ವತಂತ್ರ ನಿರ್ದೇಶಕರ ನೇಮಕಾತಿ ಕ್ರಮವು ಕಂಪನಿಯ ವಿವರಣಾ ಪತ್ರದೊಂದಿಗೆ ಓದಲಾದ ಕಂಪನಿಗಳ ಕಾಯ್ದೆ 2013ರ ಅನುಸಾರ ನಡೆಯುವುದು.

ಹಣಕಾಸಿನ ವರ್ಷದ ಆರಂಭದಲ್ಲಿ ಶ್ರೀ ಚಂದ್ರಶೇಖರ ನಾಯಕ್.ಎಲ್. (ಡಿಐಎನ್: 08215036) ಇವರು ಕಂಪನಿಯ ಸ್ವತಂತ್ರ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಆದಾಗ್ಯೂ ಶ್ರೀ ಚಂದ್ರಶೇಖರ ನಾಯಕ್.ಎಲ್. (ಡಿಐಎನ್: 08215036) ಇವರು ವರ್ಷದ ಅವಧಿಯಲ್ಲಿ ಕಂಪನಿಯ ನಿರ್ದೇಶಕರಾಗಿರುವುದು ಕೊನೆಗೊಂಡಿತು. ಸ್ವತಂತ್ರ ನಿರ್ದೇಶಕರಾಗಿ ತಮ್ಮ ಅವಧಿಯಲ್ಲಿ ಇವರು ಸಲ್ಲಿಸಿದ ಅಮೂಲ್ಯ ಕೊಡುಗೆ ಮತ್ತು ನೀಡಿದ ಮಾರ್ಗದರ್ಶನಕ್ಕಾಗಿ ಅವರಿಗೆ ಮಂಡಳಿಯು ಕೃತಜ್ಞತೆ ಸಲ್ಲಿಸುವುದನ್ನು ದಾಖಲಿಸಿದೆ. ತದನಂತರ 31/05/2022ರಿಂದ ಶ್ರೀ ನಿತೀಶ್ ಕೆ. (ಡಿಐಎನ್: 08890701) ಸ್ವತಂತ್ರ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು.

ಕಾಯ್ದೆಯ ಸೆಕ್ಷನ್ 149ರ ಅನ್ವಯ ಶ್ರೀ ನಿತೀಶ್ ಕೆ. (ಡಿಐಎನ್: 08890701) ಇವರು 31.03.2023ರಂದು ಕೊನೆಗೊಂಡ ಹಣಕಾಸು ವರ್ಷದಂತೆ ಮತ್ತು ಮುಂದೆ ಕಂಪನಿಯ ಸ್ವತಂತ್ರ ನಿರ್ದೇಶಕರಾಗಿರುವರು ಮತ್ತು ಸದರಿ ನಿರ್ದೇಶಕರು ಸ್ವತಂತ್ರ ನಿರ್ದೇಶಕರ ಮಾನದಂಡಗಳನ್ನು ಈಡೇರಿಸಿರುವರು.

## 11. ಮಂಡಳಿ ಸಭೆಗಳು ಮತ್ತು ಸಾಮಾನ್ಯ ಸಭೆಗಳು

(i) ಹಣಕಾಸಿನ ವರ್ಷ 2022–23ರ ಅವಧಿಯಲ್ಲಿ ನಿರ್ದೇಶಕರ ಮಂಡಳಿಯು 4 (ನಾಲ್ಕು) ಬಾರಿ ಸಭೆ ಸೇರಿದ್ದರು. ಹಣಕಾಸಿನ ವರ್ಷ 2022–23ರಲ್ಲಿ ನಡೆದ ಆಡಳಿತ ಮಂಡಳಿ ನಿರ್ದೇಶಕರ ಸಭೆಗಳು.

| ಆಡಳಿತ ಮಂಡಳಿ ಸಭೆ ಸಂಖ್ಯೆ | ಆಡಳಿತ ಮಂಡಳಿ ಸಭೆ ದಿನಾಂಕ |
|---|---|
| 257ನೇ | 22.04.2022 |
| 258ನೇ | 11.08.2022 |
| 259ನೇ | 07.10.2022 |
| 260ನೇ | 21.11.2022 |

ಕಂಪನಿಯು 120 ದಿನಗಳ ಅಂತರದಲ್ಲಿ ಕ್ರಮಾನುಗತವಾಗಿ ಎರಡು ಆಡಳಿತ ಮಂಡಳಿ ಸಭೆ ನಡೆಸಬೇಕಾಗಿತ್ತು. ಆದಾಗ್ಯೂ, ಕಂಪನಿಯು 01/01/2023 ರಿಂದ 31.03.2023ರ ಅವಧಿಯಲ್ಲಿ ಆಡಳಿತ ಮಂಡಳಿ ಸಭೆ ಆಯೋಜಿಸಿರಲಿಲ್ಲ; ಹೀಗಾಗಿ ಕಂಪನಿಯು ಕಂಪನಿ ಕಾಯ್ದೆ, 2013ರ ಸೆಕ್ಷನ್ 173(1) ನಿಬಂಧನೆಯನ್ನು ಉಲ್ಲಂಘಿಸಿತ್ತು.

(ii) ಕಂಪನಿಯು ಆರ್ಥಿಕ ವರ್ಷ 2022–23ರಲ್ಲಿ **42ನೇ ವಾರ್ಷಿಕ ಮಹಾಸಭೆಯನ್ನು** 07/10/2022ರಂದು ನಿಗದಿಪಡಿಸಿದ ಅವಧಿ ಅಂದರೆ 30/09/2022ರ ನಂತರ ಆಯೋಜಿಸಿತು. ಆದಾಗ್ಯೂ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ರಿಜಿಸ್ಟ್ರಾರ್ ಆಫ್ ಕಂಪನೀಸ್ ಕರ್ನಾಟಕವು ನೀಡಿದ್ದ ಆದೇಶ ದಿನಾಂಕ 28/09/2022ರ ಮೂಲಕ ಕಂಪನಿಯು 31/12/2022ರವರೆಗೆ ಮೂರು(3) ತಿಂಗಳ ವಿಸ್ತರಣೆ ಪಡೆದಿತ್ತು. ಮುಂದೆ, ಕಂಪನಿಯ

ಷೇರುದಾರರುಗಳಿಂದ ಅಗತ್ಯ ಒಪ್ಪಿಗೆ ಪಡೆದ ನಂತರ ಅಲ್ಪಕಾಲಿಕೆ ಸೂಚನೆ ಮೇರೆಗೆ ಕಂಪನಿಯ 42ನೇ ವಾರ್ಷಿಕ ಮಹಾಸಭೆ ನಡೆಯಿತು.

(iii) ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಯು ಯಾವುದೇ ವಿಶೇಷ ಮಹಾಸಭೆ ನಡೆಸಿರುವುದಿಲ್ಲ

ಕಂಪನಿಯು ಮಂಡಳಿಯ ಸಭೆಗಳು ಮತ್ತು ಸಾಮಾನ್ಯ ಸಭೆಗಳನ್ನು ನಡೆಸುವಾಗ ಅನ್ವಯವಾಗುವ ಕಾರ್ಯದರ್ಶೀಯ (ಸೆಕ್ರೆಟರಿಯಲ್) ಮಾನದಂಡಗಳನ್ನು ಮತ್ತು ಇದರ ಸಂಬಂಧಪಟ್ಟ ಮಾರ್ಗದರ್ಶಿ ಟಿಪ್ಪಣಿಗಳನ್ನು ಪಾಲಿಸಿದೆ. ಎಲ್ಲಾ ಮಂಡಳಿಯ ಸಭೆಗಳು ಮತ್ತು ಸಾಮಾನ್ಯ ಸಭೆಗಳಲ್ಲಿ ಅಗತ್ಯವಾದ ಕೋರಂ ಇತ್ತು ಮತ್ತು ಸಭೆ ನಡೆಸುವ ಬಗ್ಗೆ ಸಾಕಷ್ಟು ಸಮಯದ ಮೊದಲು ಸೂಚನೆಗಳನ್ನು ಕಳುಹಿಸಲಾಗಿತ್ತು.

## 12. ಸಮಿತಿಗಳು

### (i) ಲೆಕ್ಕಪರಿಶೋಧನಾ ಸಮಿತಿ

ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 177ರ ಅನ್ವಯ ರಚಿಸಲಾದ ಲೆಕ್ಕಪರಿಶೋಧನಾ ಸಮಿತಿಯು ಶ್ರೀ ನಿತೀಶ್ ಕೆ, ಐಎಎಸ್ (ಅಧ್ಯಕ್ಷರು), ಶ್ರೀ ಸಿದ್ದಿಕ್ ಪಾಷಾ (ಸದಸ್ಯ) ಮತ್ತು ಶ್ರೀ ವಿಕಾಶ್ ಕುಮಾರ್ ವಿಕಾಶ್, ಐಪಿಎಸ್ (ಸದಸ್ಯ) ಇವರುಗಳನ್ನು ಒಳಗೊಂಡಿರುವುದು.

ಲೆಕ್ಕಪರಿಶೋಧನ ಸಮಿತಿಯು ಆಂತರಿಕ ನಿಯಂತ್ರಣ ವ್ಯವಸ್ಥೆಯೊಂದಿಗೆ ಅನುಪಾಲನೆ, ಅಂಕಿಅಂಶಗಳ ನ್ಯಾಯಬದ್ಧವಾದ ನಮೂದು, ಖಚಿತಪಡಿಸಿಕೊಳ್ಳಲು ಹಣಕಾಸಿನ ವಿವರಣಾ ಪಟ್ಟಿಗಳನ್ನು, ಪ್ರಕಟಣೆಗಳ ದಕ್ಷತೆ ಹಾಗೂ ಕಾರ್ಪೊರೇಟ್‌ಆಡಳಿತವನ್ನು ಪರಿಶೀಲಿಸುವುದು. ಪ್ರಕಟಣೆ ಹಾಗೂ ಕಾರ್ಪೊರೇಟ್ ಆಡಳಿತ ಸಮರ್ಪಕವಾಗಿರುವುದೇ ಎಂಬುದನ್ನು ಪರಿಶೀಲಿಸುವುದು.

2022-23ರ ಅವಧಿಯಲ್ಲಿ ಲೆಕ್ಕಪರಿಶೋಧನಾ ಸಮಿತಿ ಸಭೆ ನಡೆದಿರುವುದು.

| ಲೆಕ್ಕಪರಿಶೋಧನಾ ಸಮಿತಿ ಸಭೆ | ಲೆಕ್ಕಪರಿಶೋಧನಾ ಸಮಿತಿ ಸಭೆ ದಿನಾಂಕ |
|---|---|
| 51ನೇ | 11.08.2022 |
| 52ನೇ | 03.10.2022 |

### (ii) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿ :

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ಸಮಿತಿಯನ್ನು ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 135ರ ಅನ್ವಯ ರಚನೆ ಮಾಡಿದ್ದು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸುವುದು ಮತ್ತು ಉಸ್ತುವಾರಿ ಮಾಡುವುದು, ಸಿಎಸ್ಆರ್ ಚಟುವಟಿಕೆಗಳಿಗೆ ಮಾಡಬೇಕಾದ ಖರ್ಚಿನ ಮೊತ್ತದ ಬಗ್ಗೆ ಶಿಫಾರಸ್ಸು ಮಾಡುವುದು ಮತ್ತು ಕಂಪನಿಯು ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳು/ ಚಟುವಟಿಕೆಗಳ ಅನುಷ್ಠಾನ ಮಾಡುವುದನ್ನು ಖಾತರಿಪಡಿಸುವುದು.

**ಸಿಎಸ್ಆರ್ ಸಮಿತಿ ಸದಸ್ಯರು :** ಡಾ. ಮಹೇಶ್ ಮಹದೇವಯ್ಯ, ಐಎಎಸ್ (ಅಧ್ಯಕ್ಷರು), ಶ್ರೀ ಸಿದ್ದಿಕ್ ಪಾಷಾ (ಸದಸ್ಯ) ಹಾಗೂ ಶ್ರೀ ನಿತೀಶ್, ಭಾಆಸೇ (ಸದಸ್ಯ).

2022-23ರ ವರ್ಷದ ಅವಧಿಯಲ್ಲಿ ನಡೆದ ಸಿಎಸ್ಆರ್ ಸಭೆಗಳು

| ಸಿಎಸ್ಆರ್ ಸಭೆ ಸಂ | ಸಿಎಸ್ಆರ್ ಸಭೆ ದಿನಾಂಕ |
|---|---|
| 12ನೇ | 13.04.2022 |
| 13ನೇ | 27.07.2022 |
| 14ನೇ | 03.10.2022 |
| 15ನೇ | 21.11.2022 |

### (iii) ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ:

ನಿಮ್ಮ ಕಂಪನಿಯು ಸರ್ಕಾರದ ಕಂಪನಿಯಾಗಿರುವುದರಿಂದ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ ರಚನೆಗೆ ಸಂಬಂಧಿಸಿದ ಸೆಕ್ಷನ್ 178(1)ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

### (iv) ಭಾಗೀಧಾರಿಗಳ ಬಾಂಧವ್ಯ ಸಮಿತಿ:

1000ಕ್ಕಿಂತ ಹೆಚ್ಚು ಷೇರುದಾರರುಗಳನ್ನು ಹೊಂದಿಲ್ಲದೇ ಇರುವುದರಿಂದ ಕಾಯ್ದೆಯ ನಿಬಂಧನೆಯಡಿಯಲ್ಲಿ ಕಂಪನಿಯು ಈ ಸಮಿತಿ ರಚನೆ ಮಾಡುವ ಅಗತ್ಯವಿರುವುದಿಲ್ಲಆದಾಗ್ಯೂ, ಭಾಗೀದಾರಿಗಳೊಂದಿಗೆ ಸುಲಲಿತವಾದ ಸಂವಹನ ನಡೆಸುವುದನ್ನು ಖಾತರಿಪಡಿಸಲು ಮತ್ತು ಅವರ ಕುಂದುಕೊರತೆಗಳನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

### (v) ಹೂಡಿಕೆ ಸಮಿತಿ:

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹೆಚ್ಚುವರಿ ಹಣವನ್ನು ಹೂಡಿಕೆ ಮಾಡುವ ಸಂಬಂಧ ಚರ್ಚೆ ನಡೆಸಲು ಹಣಕಾಸಿನ ವರ್ಷ 2022-23ರ ಅವಧಿಯಲ್ಲಿ ಕಂಪನಿಯ ಹೂಡಿಕೆ ಸಮಿತಿ ಮೂರು ಬಾರಿ ಸಭೆ ಸೇರಿತ್ತು.

## 13. ನಿರ್ದೇಶಕರ ನೇಮಕ ಮತ್ತು ಅವರಿಗೆ ಸಂಭಾವನೆ ಪಾವತಿ ಕುರಿತಂತೆ ಕಂಪನಿ ನೀತಿ

ನಿಮ್ಮ ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ ಕಂಪನಿಗಳ ಕಾಯ್ದೆ 2013ರ ಪ್ರಕರಣ 2(45)ರ ಅನ್ವಯ ನಿರ್ದೇಶಕರ ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ನೇಮಕಾತಿಯು ಸರ್ಕಾರದ ಅಧಿಸೂಚನೆಯನುಸಾರ ನಡೆಯುತ್ತದೆ ಹಾಗೂ ಅಂತಹ ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಗೆ ಕರ್ನಾಟಕ ಸರ್ಕಾರದ ನಿಯಮಾನುಸಾರ ಸಂಭಾವನೆ ಪಾವತಿಸಲಾಗುತ್ತದೆ.

## 14. ಮಂಡಳಿಯ ಮೌಲ್ಯಮಾಪನ

ಕಂಪನಿಯ ಎಲ್ಲಾ ನಿರ್ದೇಶಕರುಗಳನ್ನು ಕರ್ನಾಟಕ ಸರ್ಕಾರ ನಾಮನಿರ್ದೇಶನ ಮಾಡುವುದರಿಂದ ಮೌಲ್ಯಮಾಪನವನ್ನು ಕೂಡ ಸರ್ಕಾರದ ಮಟ್ಟದಲ್ಲಿಯೇ ಮಾಡಲಾಗುತ್ತದೆ.

**15. ನಿರ್ದೇಶಕರ ಹೊಣೆಗಾರಿಕೆ ವಿವರಣೆ**

ಕಂಪನಿಯ ಹಣಕಾಸಿನ ವಿವರಣಾ ಪಟ್ಟಿ ಸಂಬಂಧಿಸಿದಂತೆ; ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 134ರ ಉಪ ಸೆಕ್ಷನ್ (5)ರ ಅನ್ವಯ, ಉಪಸೆಕ್ಷನ್ (3)ರ ಕಲಂ (ಸಿ)ರಲ್ಲಿ ಉಲ್ಲೇಖಿಸಿರುವಂತೆ ನಿರ್ದೇಶಕರುಗಳ ಹೊಣೆಗಾರಿಕೆ ವಿವರಣೆಯು ಈ ಕೆಳಗಿನಂತಿದೆ:

ಎ) ವಾರ್ಷಿಕ ಲೆಕ್ಕಗಳನ್ನು ಸಿದ್ಧಪಡಿಸುವಲ್ಲಿ ಯಾವುದೇ ಬದಲಾವಣೆಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ವಿವರಣೆಗಳೊಂದಿಗೆ ಲೆಕ್ಕ ನಿರ್ವಹಣೆ ಮಾನದಂಡಗಳನ್ನು ಅನುಸರಿಸಲಾಗಿದೆ;

ಬಿ) ಹಣಕಾಸು ವರ್ಷದ ಕೊನೆಯಲ್ಲಿ ಮತ್ತು ಆ ಅವಧಿಗೆ ಕಂಪನಿಯ ಲಾಭದ ಕುರಿತಂತೆ ನೈಜವಾದ ಮತ್ತು ನ್ಯಾಯೋಚಿತವಾದ ಚಿತ್ರಣವನ್ನು ನೀಡಲು ನಿರ್ದೇಶಕರು ಅಂತಹ ಲೆಕ್ಕನಿರ್ವಹಣೆ ನೀತಿಗಳನ್ನು ಅಳವಡಿಸಿಕೊಂಡಿದ್ದಾರೆ ಮತ್ತು ಅವುಗಳನ್ನು ದೃಢವಾಗಿ ಅನ್ವಯ ಮಾಡಿದ್ದಾರೆ;

ಸಿ) ಕಂಪನಿಯ ಆಸ್ತಿಗಳನ್ನು ಸುರಕ್ಷತೆ ಮಾಡಲು ಮತ್ತು ವಂಚನೆ ಮತ್ತು ಇತರೆ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆ ಹಚ್ಚಲು ನಿರ್ದೇಶಕರು ಈ ಕಾಯ್ದೆಯ ಉಪಬಂಧಗಳ ಅನುಸಾರ ಪರ್ಯಾಪ್ತ ಪ್ರಮಾಣದ ಲೆಕ್ಕ ನಿರ್ವಹಣೆ ದಾಖಲೆಗಳನ್ನು ನಿರ್ವಹಣೆ ಮಾಡಲು ಸೂಕ್ತವಾದ ಮತ್ತು ಸಾಕಷ್ಟು ಎಚ್ಚರಿಕೆ ವಹಿಸಿದ್ದಾರೆ;

ಡಿ) ನಿರ್ದೇಶಕರು ವಾರ್ಷಿಕ ಲೆಕ್ಕಗಳನ್ನು ಹಣಕಾಸಿನ ವಿವರಣಾ ಪಟ್ಟಿಯ ತಯಾರಿಯಲ್ಲಿ ಆಧರಿತವಾಗಿರುವ ಊಹೆಯ ಆಧಾರದಲ್ಲಿ ಸಿದ್ಧಪಡಿಸಿದ್ದಾರೆ.

ಇ) ಅನ್ವಯವಾಗುವ ಎಲ್ಲಾ ಕಾನೂನುಗಳ ಉಪಬಂಧಗಳನ್ನು ಅನುಪಾಲನೆ ಮಾಡಿರುವುದನ್ನು ಖಾತರಿಪಡಿಸಲು ಮತ್ತು ಅಂತಹ ವ್ಯವಸ್ಥೆಯು ಪರ್ಯಾಪ್ತ ಪ್ರಮಾಣದಲ್ಲಿರುವಂತೆ ಮತ್ತು ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವಂತೆ ಖಚಿತಪಡಿಸಲು ಸೂಕ್ತವಾದ ವ್ಯವಸ್ಥೆಗಳನ್ನು ನಿರ್ದೇಶಕರು ರೂಪಿಸಿದ್ದಾರೆ.

**16. ಆಂತರಿಕ ಹಣಕಾಸಿನ ನಿಯಂತ್ರಣದ ಪರ್ಯಾಪ್ತತೆ**

ಕೆಎಸ್&ಡಿಎಲ್ ಅದರ ಕಾರ್ಯಾಚರಣೆಗಳ ಗಾತ್ರ, ಪ್ರಮಾಣ ಮತ್ತು ಸಂಕೀರ್ಣತೆಯ ಅನುಸಾರ ಆಂತರಿಕ ನಿಯಂತ್ರಣ ವ್ಯವಸ್ಥೆಯೊಂದನ್ನು ಹೊಂದಿದೆ. ಲೆಕ್ಕಪರಿಶೋಧನಾ ಸಮಿತಿಯು ವೃತ್ತಿಪರವಾಗಿ ಅರ್ಹತೆ ಹೊಂದಿದ ನಿರ್ದೇಶಕರುಗಳನ್ನು ಒಳಗೊಂಡಿರುವುದು. ಇವರು ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಬರುವ ವಿಷಯಗಳ ಕುರಿತಾಗಿ ಶಾಸನಬದ್ಧ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು ಮತ್ತು ಆಡಳಿತ ವರ್ಗದ ಜೊತೆ ಪರಸ್ಪರ ವಿಚಾರ ವಿನಿಮಯ ನಡೆಸುವರು. ನಿಮ್ಮ ಕಂಪನಿಯು ಆಂತರಿಕ ನಿಯಂತ್ರಣಗಳ ಸೂಕ್ತವಾದ ಮತ್ತು ಪರ್ಯಾಪ್ತ ವ್ಯವಸ್ಥೆ ಹೊಂದಿದೆ. ಈ ನಿಯಂತ್ರಣಗಳು ವ್ಯವಹಾರಗಳನ್ನು ಅಧಿಕೃತಗೊಳಿಸುವುದು, ದಾಖಲು ಮಾಡುವುದು ಮತ್ತು ಸರಿಯಾಗಿ ವರದಿ ಮಾಡುವುದನ್ನು ಖಾತರಿಪಡಿಸುವುದು ಹಾಗೂ ಅನಧಿಕೃತ ಬಳಕೆ ಅಥವಾ ವಿಲೇವಾರಿಯಿಂದ ಉಂಟಾಗುವ ನಷ್ಟದಿಂದ ಸ್ವತ್ತುಗಳನ್ನು ಸುರಕ್ಷಿತಗೊಳಿಸುವುದು

ಆದಾಗ್ಯೂ, ವ್ಯವಹಾರದ ಸ್ವರೂಪ ಮತ್ತು ಗಾತ್ರಗಳಿಗೆ ಅನುಗುಣವಾಗಿ ಕಂಪನಿಗೆ ಬಲಿಷ್ಠವಾದ ಆಂತರಿಕ ಆರ್ಥಿಕ ನಿಯಂತ್ರಣಗಳಿವೆ ಮತ್ತು ನಿರ್ವಹಣಾ ಸಾಮರ್ಥ್ಯವಿದ್ದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಆರ್ಥಿಕ ವರ್ಷ 2022–23ರಲ್ಲಿ ಯಾವುದೇ ವಾಸ್ತವಿಕ ದೌರ್ಬಲ್ಯಗಳಿಲ್ಲ ಎಂದು ಲೆಕ್ಕಪರಿಶೋಧನಾ ಸಮಿತಿ ಮತ್ತು ಆಡಳಿತ ಮಂಡಳಿಯು ಅಭಿಪ್ರಾಯಪಟ್ಟಿದೆ.

**17. ಅಧೀನ ಸಂಸ್ಥೆಗಳು, ಸಹವರ್ತಿಗಳು ಹಾಗೂ ಜಂಟಿ ಉದ್ಯಮಗಳಿಗೆ ಸಂಬಂಧಿಸಿದ ಪ್ರಕಟಣೆಗಳು**

ಕಂಪನಿಯು ಯಾವುದೇ ಅಧೀನ ಸಂಸ್ಥೆಗಳು, ಸಹವರ್ತಿಗಳು ಹಾಗೂ ಜಂಟಿ ಉದ್ಯಮ ಸಂಸ್ಥೆಗಳನ್ನು ಹೊಂದಿರುವುದಿಲ್ಲ.

**18. ಠೇವಣಿಗಳು**

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಾಯ್ದೆಯ ಸೆಕ್ಷನ್ 73 ಮತ್ತು ಕಂಪನಿಗಳ (ಠೇವಣಿಗಳ ಅಂಗೀಕಾರ) ನಿಯಮಗಳು, 2014ರ ಅನ್ವಯದೊಳಗಿನಂತೆ ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ ಅಥವಾ ನವೀಕರಿಸಿರುವುದಿಲ್ಲ.

**19. ಸೆಕ್ಷನ್ 186ರ ಅನ್ವಯ ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳ ವಿವರಗಳು**

ಪರಾಮರ್ಶೆ ವರ್ಷದ ಅವಧಿಯಲ್ಲಿ ಕಂಪನಿಯು ಯಾವುದೇ ಹೂಡಿಕೆಯನ್ನು ಮಾಡಿರುವುದಿಲ್ಲ, ಜಾಮೀನು ನೀಡಿರುವುದಿಲ್ಲ ಮತ್ತು ಸೆಕ್ಯೂರಿಟಿಗಳನ್ನು ನೀಡಿರುವುದಿಲ್ಲ ಆದ್ದರಿಂದ ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 186ರ ಉಪಬಂಧಗಳನ್ನು ಅನುಸರಿಸಬೇಕಿಲ್ಲ.

**20. ಸಂಬಂಧಪಟ್ಟ ವ್ಯಕ್ತಿಗಳ ಜೊತೆಗಿನ ಗುತ್ತಿಗೆಗಳು ಅಥವಾ ವ್ಯವಸ್ಥೆಗಳ ವಿವರ**

ಪರಾಮರ್ಶೆ ವರ್ಷದ ಅವಧಿಯಲ್ಲಿ ಕಂಪನಿಯು ಯಾವುದೇ ಸಂಬಂಧಿತ ವ್ಯಕ್ತಿಗಳೊಂದಿಗೆ ಕಂಪನಿ ಕಾಯ್ದೆ 2013ರ ಸೆಕ್ಷನ್ 188ರ ನಿಬಂಧನೆಗಳಿಗನುಸಾರವಾಗಿ ಯಾವುದೇ ಗುತ್ತಿಗೆಗಳನ್ನು ಅಥವಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಿಲ್ಲ.

**21. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ**

ನಿಮ್ಮ ಕಂಪನಿಯು ಅತ್ಯುತ್ತಮವಾಗಿ ದಾಖಲೀಕರಿಸಲಾದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ನೀತಿಯನ್ನು ಹೊಂದಿದೆ. ಇದು ಕಂಪನಿಯ ವೆಬ್‌ಸೈಟ್: https://mysoresandal.karnataka.gov.in/ನಲ್ಲಿ ಲಭ್ಯವಿರುವುದು. ಸಿಎಸ್ಆರ್ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿಯನ್ನು ಸದರಿ ವರದಿಗೆ **ಅನುಬಂಧ–1** ಆಗಿ ಲಗತ್ತಿಸಿದೆ.

## 22. ಇಂಧನ ಸಂರಕ್ಷಣೆ, ಸಂಶೋಧನೆ ಮತ್ತು ಅಭಿವೃದ್ಧಿ, ತಂತ್ರಜ್ಞಾನ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆಗಳು ಮತ್ತು ವೆಚ್ಚ

ನಮೂನೆ ಎ

ಎ.ವಿದ್ಯುತ್ ಮತ್ತು ಇಂಧನ ಬಳಕೆ

| ಕ್ರ ಸಂ | ವಿಧ | ವಿವರ | 2022-23 | 2021-22 |
|---|---|---|---|---|
| 1. | ವಿದ್ಯುಚ್ಛಕ್ತಿ | ಎ) ಖರೀದಿಸಿದ್ದು | | |
| | | i) ಯೂನಿಟ್‌ಗಳು– ಕಿ.ವ್ಯಾ | 37,74,159.00 | 33,80,490.00 |
| | | ii) ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ) | 363.76 | 307.89 |
| | | ಬಿ) ವಿದ್ಯುತ್ ಸ್ವಯಂ ಉತ್ಪಾದನೆ | | |
| | | i) ಡೀಸೆಲ್ ಜನರೇಟರ್ ಯೂನಿಟ್‌ಗಳ ಮೂಲಕ | 24,144.00 | 1,836.00 |
| | | ii) ಡೀಸೆಲ್ ಬಳಕೆ (ಕಿ.ಲೀ) | 14,787.00 | 7,224.00 |
| | | iii) ಯೂನಿಟ್‌ಗಳು ಡೀಸೆಲ್ ತೈಲ ಲೀಟರ್‌ನಲ್ಲಿ | 1.63 | 2.54 |
| | | iv) ಒಂದು ಯೂನಿಟ್ ದರ (ರೂ) | 57.05 | 33.22 |
| | | ಸಿ) ಆವಿ (ಸ್ಟೀಮ್) ಮೂಲಕ | - | - |
| | | i) ಟರ್ಬೈನ್‌ಗಳು ಜನರೇಟರ್‌ಗಳು | - | - |
| | | ii) ಯೂನಿಟ್‌ಗಳು | - | - |
| | | iii) ವೆಚ್ಚ/ಯೂನಿಟ್ (ರೂ.) | - | - |
| 2. | ಕಲ್ಲಿದ್ದಲು | i) ಪ್ರಮಾಣ (ಮೆ.ಟನ್‌ಗಳು) | 519 | 612.82 |
| | | ii) ಮೌಲ್ಯ (ರೂ.ಲಕ್ಷಗಳಲ್ಲಿ) | 64.92 | 46.99 |
| | | iii) ಸರಾಸರಿ ದರ/ ಟನ್ (ರೂ.) | 12509.09 | 7,668.48 |
| 3. | ಬಳಕೆ ಉತ್ಪಾದನೆಯಾದ ಯೂನಿಟ್ ಒಂದಕ್ಕೆ ಬಳಕೆ (ಉತ್ಪಾದನೆ ಮೆ. ಟನ್‌ಗಳಲ್ಲಿ) (ಪರಿಚ್ಛೇದ 28ಕ್ಕೆ ಗಮನಿಸಿ) | ಎ) ವಿದ್ಯುಚ್ಛಕ್ತಿ–ಕಿ.ವ್ಯಾ ಟನ್ | 109.69 | 119.39 |
| | | ಬಿ) ಕಲ್ಲಿದ್ದಲು (ಮೆಟನ್ ಬಳಕೆ) | 239.52 | 194.55 |

### ಬಿ) ತಂತ್ರಜ್ಞಾನ ಅಳವಡಿಕೆ:

| | | |
|---|---|---|
| ಎ. | ತಂತ್ರಜ್ಞಾನ ಅಳವಡಿಕೆಗೆ ಮಾಡಲಾದ ಪ್ರಯತ್ನ | ಸೋಪುಗಳ ಉತ್ಪಾದನೆಗೆ ಹೊಸ ಅತ್ಯಾಧುನಿಕ ಯಂತ್ರಗಳನ್ನು ಅಳವಡಿಸಲಾಗಿದೆ. |
| ಬಿ. | ಉತ್ಪನ್ನ ಅಭಿವೃದ್ಧಿ, ವೆಚ್ಚ ಇಳಿಕೆ, ಉತ್ಪನ್ನ ಅಭಿವೃದ್ಧಿ ಅಥವಾ ಆಮದು ಬದಲಿಯಿಂದ ಪಡೆಯಲಾದ ಪ್ರಯೋಜನಗಳು | ಉತ್ಪಾದನೆಯ ಸುಧಾರಿತ ಪ್ರದರ್ಶನ, ಉತ್ಪಾದನಾ ಸಾಮರ್ಥ್ಯದಲ್ಲಿ ಹೆಚ್ಚಳ |
| ಸಿ. | ಒಂದೊಮ್ಮೆ ಕಳೆದ ಮೂರು ವರ್ಷಗಳಲ್ಲಿ ಆಮದು ತಂತ್ರಜ್ಞಾನವನ್ನು ಆಮದು ಮಾಡಿಕೊಂಡಿದ್ದಲ್ಲಿ ಹಣಕಾಸು ವರ್ಷದ ಆರಂಭದಿಂದ ಲೆಕ್ಕ ಮಾಡಿದಂತೆ (ಎ) ತಂತ್ರಜ್ಞಾನ ಆಮದಿನ ವಿವರ)<br>(ಎ) ಆಮದು ಮಾಡಿಕೊಂಡ ತಂತ್ರಜ್ಞಾನದ ವಿವರಗಳು;<br>(ಬಿ) ಆಮದಿನ ವರ್ಷ;<br>(ಸಿ) ತಂತ್ರಜ್ಞಾನವನ್ನು ಪೂರ್ಣ ಅಳವಡಿಸಲಾಗಿದೆಯೇ;<br>(ಡಿ) ಪೂರ್ಣ ಅಳವಡಿಸದೇ ಹೋದಲ್ಲಿ ಅಳವಡಿಸದೇ ಇರುವ ಪ್ರದೇಶಗಳು ಮತ್ತು ಅದಕ್ಕೆ ಕಾರಣ | – |
| ಡಿ. | ಸಂಶೋಧನೆ ಮತ್ತು ಅಭಿವೃದ್ಧಿಗೆ ತಗುಲಿದ ಖರ್ಚು | – |

### ಸಿ. ಮುಂದೆ, ವಿದೇಶಿ ವಿನಿಮಯ ಗಳಿಕೆ ಮತ್ತು ಖರ್ಚು :

| | | |
|---|---|---|
| ಎ, | ವರದಿ ವರ್ಷದಡಿಯಲ್ಲಿ ವಾಸ್ತವಿಕ ಒಳಹರಿವಿನ ಲೆಕ್ಕದಲ್ಲಿ ಗಳಿಸಿದ ವಿದೇಶಿ ವಿನಿಮಯ | ರೂ.19.62 ಕೋಟಿ |
| ಬಿ. | ವರದಿ ಮಾಡುತ್ತಿರುವ ವರ್ಷದ ಅವಧಿಯಲ್ಲಿ ವಾಸ್ತವಿಕ ಹೊರಹರಿವಿನ ಅನುಸಾರ ಹೊರಹೋದ ವಿದೇಶಿ ವಿನಿಮಯ | –ಇಲ್ಲ– |

## 23. ಅಪಾಯ ನಿರ್ವಹಣೆ

ಅಪಾಯಗಳನ್ನು ಸೂಕ್ತವಾಗಿ ಗುರುತಿಸುವುದು ಮತ್ತು ನಿವಾರಿಸುವುದನ್ನು ಖಾತರಿಪಡಿಸಲು ಕಂಪನಿಯು ಸುಸ್ಪಷ್ಟವಾದ ಪ್ರಕ್ರಿಯೆಯನ್ನು ಹೊಂದಿದೆ. ಇಂತಹ ಅಪಾಯ ಕಳವಳ/ಅಪಾಯಗಳನ್ನು ಪರಿಹರಿಸಲು ಉತ್ತಮವಾದ ಅಪಾಯ ನಿರ್ವಹಣಾ ನೀತಿ ಹೊಂದಿರುವುದನ್ನು ಖಾತರಿಪಡಿಸಲು ಕಂಪನಿಯು ತೀವ್ರವಾದ ಕ್ರಮಗಳನ್ನು ಕೈಗೊಂಡಿದೆ. ಅಪಾಯ ನಿರ್ವಹಣಾ ಪ್ರಕ್ರಿಯೆಯು ಸೂಕ್ತ ಗುರುತಿಸುವಿಕೆ ಮತ್ತು ತಡೆಗಟ್ಟುವುದನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಸ್ಥಳದಲ್ಲಿ ಉತ್ತಮವಾಗಿ ವ್ಯಾಖ್ಯಾನಿಸಲಾದ ಪ್ರಕ್ರಿಯೆಯನ್ನು ಹೊಂದಿದೆ.

ತಡೆಗಟ್ಟುವ ನಿರಂತರ ಕ್ರಮಗಳ ಆಧಾರದ ಮೇಲೆ ಅಂತಹ ಕಾಳಜಿಗಳು/ಅಪಾಯಗಳನ್ನು ಪರಿಹರಿಸಲು ಸ್ಥಳದಲ್ಲಿ ಉತ್ತಮ ಅಪಾಯ ನಿರ್ವಹಣಾ ನೀತಿ ಇದೆ ಎಂದು ಖಚಿತಪಡಿಸಿಕೊಳ್ಳಲು ಇದು ಆಳವಾದ ಕ್ರಮಗಳನ್ನು ತೆಗೆದುಕೊಂಡಿದೆ. ಅಪಾಯ ನಿರ್ವಹಣೆ ಪ್ರಕ್ರಿಯೆಯು ಅಪಾಯವನ್ನು ಗುರುತಿಸುವುದು, ಮೌಲ್ಯಮಾಪನ ಮಾಡುವುದು, ವಿಶ್ಲೇಷಿಸುವುದು ಹಾಗೂ ತಗ್ಗಿಸುವುದನ್ನು ಒಳಗೊಳ್ಳುತ್ತದೆ ಪ್ರಕ್ರಿಯೆಯಲ್ಲಿ ಸುಸ್ಥಿರತೆಯನ್ನು ಅಳವಡಿಸಿಕೊಳ್ಳಲು ಸಾಮರ್ಥ್ಯ ಒಗ್ಗೂಡಿಸಲು ಹಾಗೂ ಆಯ್ಕೆ ಮಾಡಿದ ಉಪಾಯಗಳಲ್ಲಿ ಒಳಗೊಂಡಿರುವ ಅಪಾಯಗಳನ್ನು ಎತ್ತಿ ತೋರಿಸಲು ಸಹ ನೆರವಾಗುವುದು.

ಅಪಾಯದ ನಿರ್ವಹಣೆ ಮತ್ತು ಅದರ ಸಕಾಲಿಕ ಅನುಷ್ಠಾನದಲ್ಲಿ ಲೆಕ್ಕಪರಿಶೋಧನಾ ಸಮಿತಿಯು ಹೆಚ್ಚುವರಿ ಮೇಲ್ವೋಟವನ್ನು ಹೊಂದಿದೆ.ಹಾಗಿದ್ದಾಗ್ಯೂ, ಅಪಾಯ ನಿರ್ವಹಣೆಯ ಪ್ರಮುಖ ಉದ್ದೇಶವು ವ್ಯವಹಾರಕ್ಕೆ ಅಂತರ್ಗತವಾಗಿರುವ ಅಪಾಯಗಳನ್ನು ತೊಲಗಿಸುವುದು ಆಗಿರದೇ ಹೋದರೂ ಇಂತಹ ಅಪಾಯಗಳನ್ನು ಪರಿಣಾಮಕಾರಿಯಾದ ಮತ್ತು ಪ್ರೌಢ ರೀತಿಯಲ್ಲಿ ಪರಿಹರಿಸುವುದಾಗಿದೆ.

## 24. ಜಾಗೃತ ವ್ಯವಸ್ಥೆ ಸ್ಥಾಪನೆ ವಿವರಗಳು

ಕಂಪನಿಯು ಅತ್ಯುತ್ತಮ ಗುಣಮಟ್ಟದ ವೃತ್ತಿಪರತೆ, ಪ್ರಾಮಾಣಿಕತೆ, ಸಮನ್ವಯತೆ ಮತ್ತು ನೈತಿಕ ನಡವಳಿಕೆಗಳನ್ನು ಅಳವಡಿಸಿಕೊಳ್ಳುವ ಮೂಲಕ ನ್ಯಾಯೋಚಿತ ಮತ್ತು ಪಾರದರ್ಶಕ ರೀತಿಯಲ್ಲಿ ವ್ಯವಹಾರಗಳನ್ನು ನಡೆಸುವುದರಲ್ಲಿ ನಂಬಿಕೆ ಹೊಂದಿದೆ. ಯಾವುದೇ ವಾಸ್ತವಿಕವಾದ ಅಥವಾ ಸಂಭವನೀಯ ಉಲ್ಲಂಘನೆಯು ಅದು ಮಹತ್ತರವಾಗಿಲ್ಲದೇ ಹೋಗಲಿ ಅಥವಾ ಗೋಚರಿತವಾದುದಾಗಿರಲಿ ಅದು ಕಂಪನಿಗೆ ತೀವ್ರವಾದ ಕಾಳಜಿಯ ವಿಚಾರವಾಗಿರುವುದು.

ಹಾಗಿದ್ದಾಗ್ಯೂ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 177ರ ಅನ್ವಯ ನಿಗದಿಪಡಿಸಿರುವಂತೆ ಜಾಗೃತ ವ್ಯವಸ್ಥೆಗೆ ಸಂಬಂಧಿಸಿದ ಉಪಬಂಧಗಳು ಪರಾಮರ್ಶೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಗೆ ಅನ್ವಯವಾಗುವುದಿಲ್ಲ. ಲೆಕ್ಕಪರಿಶೋಧನಾ ಸಮಿತಿಗೆ ಪ್ರವೇಶಿಸಲು ಕಂಪನಿಯ ಯಾವುದೇ ಸಿಬ್ಬಂದಿಗೆ ಅವಕಾಶ ನಿರಾಕರಿಸುವುದಿಲ್ಲವೆಂದು ದೃಢಪಡಿಸಿದೆ.

## 25. ನ್ಯಾಯಾಂಗ ಸಂಸ್ಥೆಗಳು ಅಥವಾ ನಿಯಂತ್ರಕರು ಹೊರಡಿಸಿರುವ ಪ್ರಮುಖ ಆದೇಶಗಳು

ನಿಮ್ಮ ನಿರ್ದೇಶಕರ ಮಂಡಳಿಯು ತಿಳಿಸುವುದೇನೆಂದರೆ, ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಯು ತನ್ನ ಜವಾಬ್ದಾರಿಗಳನ್ನು ಪೂರೈಸುವ ಮತ್ತು ಭವಿಷ್ಯಕ್ಕಾಗಿ ತನ್ನ ವ್ಯವಹಾರವನ್ನು ಮುಂದುವರೆಸುವ ಆರ್ಥಿಕವಾಗಿ ಸ್ಥಿರವಾಗಿರುವ ಸ್ಥಿತಿ ಮತ್ತು ಮತ್ತು ಕಂಪನಿಯ ಭವಿಷ್ಯದಲ್ಲಿನ ಕಾರ್ಯಾಚರಣೆಗಳ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ಮಹತ್ತರವಾದ ಮತ್ತು ಪ್ರಮುಖವಾದ ಆದೇಶಗಳನ್ನು ನಿಯಂತ್ರಕರುಗಳು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣಗಳು ಹೊರಡಿಸಿರುವುದಿಲ್ಲ.

## 26. ಲೆಕ್ಕಪರಿಶೋಧಕರು

### (i) ಶಾಸನಬದ್ಧ ಲೆಕ್ಕಪರಿಶೋಧಕರು

ಕಂಪನಿಗಳ ಕಾಯ್ದೆ, 2013ರ 139ರ ಸೆಕ್ಷನ್ ಅನುಸಾರ, ಮೆ॥ ಪಿ.ಚಂದ್ರಶೇಖರ್, (Firm Reg No.000580S/S200066), ಎಲ್‌ಎಲ್‌ಪಿ, ಲೆಕ್ಕಪರಿಶೋಧಕರು, ಬೆಂಗಳೂರು ಇವರನ್ನು ಆರ್ಥಿಕ ವರ್ಷ 2022–23ರ ಶಾಸನಬದ್ಧ ಲೆಕ್ಕಪರಿಶೋಧನೆ ನಡೆಸಲು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ. ಮಾಡಲಾಯಿತು ಮತ್ತು ಇವರಿಗೆ ಪಾವತಿ ಮಾಡಬೇಕಾಗಿರುವ ಸಂಭಾವನೆಯನ್ನು ದಿನಾಂಕ: 07/10/2022ರಂದು ನಡೆದ ಕಂಪನಿಯ 42ನೇ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರಿಂದ ಅನುಮೋದಿಸಲ್ಪಟ್ಟಿದೆ.

ಭಾರತದ ಮಹಾ ಲೆಕ್ಕ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರ ಕಚೇರಿಯ ಪತ್ರದ ಸಂಖ್ಯೆ: ಸಿಎ.ವಿ./ಸಿಒ.ವೈ/ಕರ್ನಾಟಕ. ಕೆಎನ್‌ಎಸ್‌ಒಎಪಿ(1)/1669,ದಿನಾಂಕ:22/09/2023 ಅನ್ವಯ ಮೆ॥ ಪಿ.ಚಂದ್ರಶೇಖರ್ ಎಲ್‌ಎಲ್‌ಪಿ ಲೆಕ್ಕಪರಿಶೋಧಕರು, (Firm #000580S/S200066), ಬೆಂಗಳೂರು ಇವರನ್ನು 20223–24ರ ವರ್ಷದ ಅವಧಿಗೆ ಶಾಸನಬದ್ಧ ಲೆಕ್ಕಪರಿಶೋಧನೆ ಕಾರ್ಯ ನಡೆಸಲು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿದೆ.

### (ii) ಆಂತರಿಕ ಲೆಕ್ಕ ಪರಿಶೋಧಕರು

ಕೇಂದ್ರ ಕಚೇರಿ, ವಿಭಾಗಗಳು ಮತ್ತು ಶಾಖೆಗಳ ಹಣಕಾಸಿನ ವರ್ಷ 2022–23ರ ಅವಧಿಯ ಆಂತರಿಕ ಲೆಕ್ಕಪರಿಶೋಧನೆ ಮಾಡಲು ಈ ಕೆಳಗೆ ತಿಳಿಸಿರುವ ಲೆಕ್ಕ ಪರಿಶೋಧಕರುಗಳನ್ನು ಕಂಪನಿಯ ಆಂತರಿಕ ಲೆಕ್ಕಪರಿಶೋಧಕರುಗಳನ್ನಾಗಿ ನೇಮಕ ಮಾಡಿದೆ ಮತ್ತು ಸದರಿ ಲೆಕ್ಕಪರಿಶೋಧಕರು ಕಾಲಕಾಲಕ್ಕೆ ತಮ್ಮ ವರದಿಯನ್ನು ಸಲ್ಲಿಸಿದ್ದಾರೆ.

| ಕ್ರ ಸಂ. | ಲೆಕ್ಕಪರಿಶೋಧಕರ ಹೆಸರು | ಶಾಖೆಗಳು |
|---|---|---|
| 1 | ಮೆ॥ ನಟರಾಜ್ ಅಸೋಸಿಯೇಟ್ಸ್ | ಪ್ರಧಾನ ಕಚೇರಿ<br>ಎಸ್‌ಓಡಿ, ಮೈಸೂರು<br>ಎಸ್‌ಓಡಿ, ಶಿವಮೊಗ್ಗ |
| 2 | ಮೆ॥ ಎಸ್. ವೆಂಕಟ್‌ರಾಮ್ ಅಂಡ್ ಕೊ | ಬೆಂಗಳೂರು ಶಾಖೆ |
| 3 | ಮೆ॥ ವಿ.ಎನ್.ಪುರೋಹಿತ್ & ಕೋ | ಹೈದರಾಬಾದ್ ಶಾಖೆ |
| 4 | ಮೆ॥ ಆರ್.ಸುಬ್ರಮಣಿಯನ್ ಅಂಡ್ ಕೋ ಎಲ್‌ಎಲ್‌ಪಿ | ಚೆನ್ನೈ ಶಾಖೆ |
| 5 | ಮೆ॥ ಆರ್.ಎಸ್.ವಿ.ಎ. ಅಂಡ್ ಕೊ. | ಮುಂಬೈ ಶಾಖೆ |
| 6 | ಮೆ॥ ಡಿಕೆಡಿ ಅಂಡ್ ಅಸೋಸಿಯೇಟ್ಸ್ | ಕೊಲ್ಕೊತ್ತಾ ಶಾಖೆ |
| 7 | ಮೆ॥ ಗುಪ್ತಾ ಅಮಿತ್ ಕುಮಾರ್ & ಕೋ | ನವದೆಹಲಿ ಶಾಖೆ |

ಆಂತರಿಕ ಲೆಕ್ಕಪರಿಶೋಧಕರು ಅವರ ವರದಿಯಲ್ಲಿ ಮಾಡಿರುವ

ಅಭಿಪ್ರಾಯಗಳನ್ನು ಆಡಳಿತ ಮಂಡಳಿ ಜಾಗರೂಕತೆಯಿಂದ ಪರಿಶೀಲಿಸಿದೆ ಮತ್ತು ಅದನ್ನು ಅನುಸರಿಸಲು ಕಠಿಣ ಪರಿಶ್ರಮ ವಹಿಸಿದೆ.

### (iii) ವೆಚ್ಚದ ಲೆಕ್ಕಪರಿಶೋಧಕರು

ಪರಾಮರ್ಶೆಯಲ್ಲಿರುವ ವರ್ಷದ ಅವಧಿಯಲ್ಲಿ, ಕಂಪನಿಗಳ ಕಾಯ್ದೆ, 2013,ರ ಸೆಕ್ಷನ್ 148ರ ಉಪಬಂಧಗಳು, ಕಂಪನಿಗೆ ಅನ್ವಯವಾಗುವುದಿಲ್ಲ. ಆದ್ದರಿಂದ ಈ ಸಂಬಂಧವಾಗಿ ಕಂಪನಿಗೆ ಯಾವುದೇ ವೆಚ್ಚದ ಲೆಕ್ಕಪರಿಶೋಧಕರನ್ನು ನೇಮಕ ಮಾಡಿರುವುದಿಲ್ಲ.

### (iv) ಕಾರ್ಯದರ್ಶೀಯ (ಸೆಕ್ರೆಟೇರಿಯಲ್) ಲೆಕ್ಕಪರಿಶೋಧಕರು

ಕಾಯ್ದೆಯ ಸೆಕ್ಷನ್ 204ರ ಉಪಬಂಧಗಳು ಮತ್ತು ಇದರಡಿಯಲ್ಲಿ ರೂಪಿಸಿರುವ ನಿಯಮಗಳ ಅನುಸಾರ, 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಕಂಪನಿಯ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ಕೈಗೊಳ್ಳಲು ಮೆ॥ ಜ್ಯೋತಿ ಶಿವಯೋಗಿ ಮತ್ತು ಅಸೋಸಿಯೇಟ್ಸ್ ಕಂಪನಿ ಕಾರ್ಯದರ್ಶಿಗಳು, ಇವರನ್ನು ನೇಮಕ ಮಾಡಲಾಗಿದೆ. ಈ ಸಂಬಂಧ ಹೊರಡಿಸಿರುವ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ವರದಿಯನ್ನು ಅನುಬಂಧವಾಗಿ ಲಗತ್ತಿಸಿದೆ.

**27. ಪ್ರತಿಯೊಂದು ಅರ್ಹತೆಗಳು, ಕಾಯ್ದಿರಿಸುವಿಕೆ ಅಥವಾ ವ್ಯತಿರಿಕ್ತ ಟೀಕೆ ಅಥವಾ ಹಕ್ಕು ನಿರಾಕರಣೆ ಬಗ್ಗೆ ಮಂಡಳಿಯ ವಿವರಣೆ ಅಥವಾ ಟೀಕೆ ಟಿಪ್ಪಣಿ:**

**ಎ) ಶಾಸನಬದ್ಧ ಲೆಕ್ಕಪರಿಶೋಧಕರು ತನ್ನ ವರದಿಯಲ್ಲಿ:**

| ಕ್ರ.ಸಂ. | ಶಾಸನಬದ್ಧ ಲೆಕ್ಕ ಪರಿಶೋಧಕರ ಟಿಪ್ಪಣಿ | ಆಡಳಿತ ಮಂಡಳಿ ಉತ್ತರ |
|---|---|---|
| 1. | ಜಮೀನು (ಸ್ವಾಯತ್ತ /ಅನಿರ್ಬಂಧ ಅಧಿಕಾರ ಮತ್ತು ಗುತ್ತಿಗೆ ಆಸ್ತಿ)–ಕಂಪನಿಯು ನಿರ್ವಹಿಸಿರುವ ಪಿಪಿಇ ದಾಖಲೆಗಳು ಮತ್ತು ಕಂದಾಯ ಪ್ರಾಧಿಕಾರಗಳು ಹೊಂದಿರುವ ದಾಖಲೆಗಳನ್ನು ಪರಸ್ಪರ ಸಂಬಂಧಿಸಲು ಸಾಧ್ಯವಾಗಲಿಲ್ಲ. ಗುರುತಿಸಲಾದ ಮಟ್ಟಿಗೆ ದಾಖಲಾತಿಗಳಲ್ಲಿನ ಎಲ್ಲಾ ನ್ಯೂನ್ಯತೆಗಳು, ಮೂರನೇ ವ್ಯಕ್ತಿಗಳಿಂದ ಕೆಲವೊಂದು ಸ್ವತ್ತುಗಳ/ಆಸ್ತಿಗಳ ಒತ್ತುವರಿಗಳನ್ನು ಹಣಕಾಸು ವಿವರಣಾ ಪಟ್ಟಿಗಳ ಟಿಪ್ಪಣಿಗಳು 2.i ನಿಂದ v ರವರೆಗೆ ನೀಡಲಾಗಿದೆ. ಕಂಪನಿಯ ಹೆಸರಿನಲ್ಲಿರದ ಜಮೀನನ್ನು ಎಲ್ಲಿ ಸಮಗ್ರವಾಗಿ ಗುರುತಿಸಲು ಸಾಧ್ಯವಾಗದೋ ಅಲ್ಲಿ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2020 ("ದಿ ಆರ್ಡರ್")ರ ನಿಬಂಧನೆಗಳೊಳಗೆ ವ್ಯವಹರಿಸಬೇಕಾದ ಅಗತ್ಯತೆ ಇರುವ ವಿಚಾರಗಳ ಕುರಿತು ನಮ್ಮ ವರದಿಯ ಕಂಡಿಕೆ (ಪ್ಯಾರಾಗ್ರಾಫ್) 1(ಸಿ) ಕುರಿತು ಸದಸ್ಯರ ಅವಗಾಹನೆಯನ್ನು ಸೆಳೆಯಲಾಗಿದೆ. ಹೇಳಲಾದ ಟಿಪ್ಪಣಿಯಲ್ಲಿ ವಿವರಿಸಲಾದ ಈ ನ್ಯೂನ್ಯತೆಗಳು ಅಂತಹ ಸ್ವತ್ತು/ಆಸ್ತಿಗಳ ಅಧಿಕಾರದ ಮೇಲೆ ಗಮನಾರ್ಹ ಪ್ರಭಾವವನ್ನು ಹೊಂದಿದೆ. | ಮೂರನೇ ವ್ಯಕ್ತಿಗಳಿಂದ ಒತ್ತುವರಿಯನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಕಂಪನಿಯಿದ್ದು, ಕಂಪನಿಯು ಒಂದು ಬಾರಿ ಎಲ್ಲ ಒತ್ತುವರಿಯ ವಿವರಗಳನ್ನು ಪಡೆದ ಬಳಿಕ ಅಂತಹ ಕಂಪನಿಯು ಆ ಭೂಮಿಯ ಕಾನೂನು ಕ್ರಮಗಳನ್ನು ಅನುಸರಿಸಬೇಕು. |
| 2. | ಕಂಪನಿಯ 1.82 ಎಕರೆ ಮೈಸೂರು ಆಸ್ತಿಯ 99 ವರ್ಷಗಳ ಗುತ್ತಿಗೆಗೆ ಸಂಬಂಧಿಸಿದಂತೆ ಹಣಕಾಸು ವಿವರಣಾ ಪಟ್ಟಿಗಳ ಟಿಪ್ಪಣಿ ಸಂಖ್ಯೆ 2.vi ರ ಮೇಲೆ ಗಮನ ಸೆಳೆಯಲಾಗಿದೆ. IND AS 40ರ–ಕಂಡಿಕೆ 7 ಮತ್ತು 16ರ ಪ್ರಕಾರ, ಹೂಡಿಕೆ ಆಸ್ತಿ, ಸಂಸ್ಥೆಯು ಬಾಡಿಗೆ ಅಥವಾ ಬಂಡವಾಳ ಮೌಲ್ಯ ಏರಿಕೆ ಕಾಣುವುದಿದ್ದರೆ ಅಥವಾ ಎರಡೂ ಇದ್ದರೆ ಅದು ಹೂಡಿಕೆ ಆಸ್ತಿ ಎನಿಸಲಿದೆ. 99 ವರ್ಷಗಳ ಗುತ್ತಿಗೆಗೆ ನೀಡಿದ್ದರೂ ಕಂಪನಿಯ ಆಡಳಿತವು ಇದನ್ನು ಹೂಡಿಕೆ ಆಸ್ತಿ ಎಂದು ಪರಿಗಣಿಸಿಲ್ಲ ಮತ್ತು ಈ ಅವಧಿಯಲ್ಲಿ ಗಮನಾರ್ಹವಾದ ಬಂಡವಾಳ ಮೌಲ್ಯದ ಏರಿಕೆ ಆಗಿರುತ್ತದೆ. ಇಂತಹ ಪ್ರಕಟಣೆಗಳು ಇಲ್ಲದ ಕಾರಣ ಹಣಕಾಸು ವಿವರಣಾ ಪಟ್ಟಿಗಳ ಮೇಲೆ ಇದರ ಪರಿಣಾಮದ ಟಿಪ್ಪಣಿ ಮಾಡಲು ನಾವು ಅಸಮರ್ಥರಾಗಿದ್ದೇವೆ. | ಕಂಪನಿಯು 1.82 ಎಕರೆ ಜಮೀನನ್ನು ಮೈಸೂರಿನಲ್ಲಿ ಗುತ್ತಿಗೆಗೆ ನೀಡಿದೆ. ಭೂಮಿಯ ಮೇಲೆ ಬಂಡವಾಳದ ಬೆಲೆ ಏರಿಕೆ ಆದರೂ ಕಂಪನಿಯು ಈ ಆಸ್ತಿಯಿಂದ ಯಾವುದೇ ಗಮನಾರ್ಹವಾದ ಬಾಡಿಗೆ ಆದಾಯ ಪಡೆಯುತ್ತಿಲ್ಲ ಹೀಗಾಗಿ ಕಂಪನಿಯು ಈ ಭೂಮಿಯನ್ನು ಹೂಡಿಕೆ ಆಸ್ತಿ ಎಂದು ಪ್ರಕಟಿಸುತ್ತಿಲ್ಲ. |
| 3. | ಒಂದೋ ಅಂದಾಜಿನ ಆಧಾರದಲ್ಲಿ ಜಮೀನು ಗುರುತಿಸಲ್ಪಟ್ಟ ಅಥವಾ ಕಂದಾಯ ಅಧಿಕಾರಿಗಳಿಂದ ಬೇಡಿಕೆ ಇಲ್ಲದೇ ಇದ್ದಲ್ಲಿ ಮತ್ತು/ಅಥವಾ ಕಂದಾಯ ಅಧಿಕಾರಿಗಳಿಂದ ವ್ಯಾಜ್ಯ ಪರಿಹಾರಕ್ಕೆ ಬಾಕಿ ಇರುವ ಭೂ ದಾಖಲೆಗಳ ಕುರಿತಾದ ಪಾವತಿಸಬೇಕಾದ ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಹಣಕಾಸು ವಿವರಣಾ ಪಟ್ಟಿಗಳ ಟಿಪ್ಪಣಿ ಸಂಖ್ಯೆ 23ಕ್ಕೆ ಗಮನ ಸೆಳೆಯಲಾಗಿದೆ. ಸೂಕ್ತವಾದ ದಾಖಲೆಗಳು ಲಭ್ಯವಿಲ್ಲದ ಕಾರಣ, ಪರ್ಯಾಪ್ತತೆ/ ಸಂಪೂರ್ಣತೆ/ ಗುರುತಿಸಲಾದ ನಿಬಂಧನೆಗಳ ನಿಖರತೆ, ಹಣಕಾಸು ವಿವರಣಾ ಪಟ್ಟಿಯ ಮೇಲೆ ಅದರ ಪರಿಣಾಮವನ್ನು ಖಚಿತಪಡಿಸಿಕೊಳ್ಳಲಾಗದು. | ಕರ್ನಾಟಕದ ಕಂದಾಯ ಇಲಾಖೆ ನೀಡಿರುವ ಆದೇಶಗಳನ್ನು ಆಧರಿಸಿ ಕಂಪನಿಯು ಅವಕಾಶಗಳನ್ನು ಮಾಡಿಕೊಂಡಿದೆ. ಕಂಪನಿಯು ಅಪಾರ ಪ್ರಮಾಣದ ಖಾಲಿ ಜಮೀನನ್ನು ಹೊಂದಿದೆ ಹೀಗಾಗಿ ಅದರ ಮೇಲೆ ಆಸ್ತಿ ತೆರಿಗೆಯನ್ನು ಬಹಿರಂಗಪಡಿಸಬೇಕಿದೆ. ಕಂಪನಿಯು ಸಂಬಂಧಿತ ಪ್ರಾಧಿಕಾರಗಳನ್ನು ಸಂಪರ್ಕಿಸಿದೆ ಮತ್ತು ಅವರೊಂದಿಗೆ ಸಮಾಲೋಚನೆ ನಡೆಸಿ ಆ ದರದಲ್ಲಿ ಮೊತ್ತಗಳನ್ನು ಒದಗಿಸಿದೆ. |
| 4. | **ಇತರೇ ಸ್ಥಿರಾಸ್ತಿಗಳು:** ಕಂಪನಿಯು ಸ್ಥಿರಾಸ್ತಿಗಳ ಭೌತಿಕ ಪರಿಶೀಲನೆ ನಡೆಸಿಲ್ಲ ಮತ್ತು ಸ್ಥಿರಾಸ್ತಿ ದಾಖಲೆ ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಲ್ಲ. ಇದು ಇಲ್ಲದೇ ಇರುವುದರಿಂದ, ಕಂಪನಿಯ ಎಲ್ಲಾ ಸ್ಥಿರಾಸ್ತಿಗಳು ಅಸ್ತಿತ್ವದಲ್ಲಿದೆಯೆ ಮತ್ತು ಬಳಕೆ ಯೋಗ್ಯ ಸ್ಥಿತಿಯಲ್ಲಿದೆಯೇ ಎಂಬುದನ್ನು ಖಚಿತಪಡಿಸಲು ಸಮರ್ಥರಾಗಿಲ್ಲ. | ಸ್ಥಿರಾಸ್ತಿಯ ಭೌತಿಕ ಪರಿಶೀಲನೆ ಪ್ರಕ್ರಿಯೆಯನ್ನು ಕಂಪನಿಯು ಆರಂಭಿಸಿದೆ. ಇದನ್ನು ನಡೆಸಲಾಗುವುದು ಮತ್ತು ಭೌತಿಕ ಪರಿಶೀಲನೆಯ ವರದಿಯನ್ನು ನಿಮ್ಮ ಕಚೇರಿಗೆ ಸಲ್ಲಿಸಲಾಗುವುದು. |

| | | |
|---|---|---|
| 5. | IndAS 36- ಸ್ವತ್ತುಗಳ ದುರ್ಬಲತೆ ಪ್ಯಾರಾ 9 ಮತ್ತು 12 ರ ಪ್ರಕಾರ, ಸಂಸ್ಥೆ/ಘಟಕವು ಪ್ರತಿ ವರದಿಯ ಅವಧಿಯ ಕೊನೆಯಲ್ಲಿ ಒಂದು ಆಸ್ತಿಯು ದುರ್ಬಲಗೊಳ್ಳಬಹುದು ಎಂಬುದಕ್ಕೆ ಯಾವುದೇ ಸೂಚನೆ ಇದೆಯೇ ಎಂಬುದನ್ನು ನಿರ್ಣಯಿಸುತ್ತದೆ. ಮಾಹಿತಿಯ ಬಾಹ್ಯ ಮೂಲ ಮತ್ತು ಮಾಹಿತಿಯ ಆಂತರಿಕ ಮೂಲವನ್ನು ಪರಿಗಣಿಸಿ ಆಡಳಿತ ಮಂಡಳಿಯು ದುರ್ಬಲತೆಯ ಯಾವುದೇ ಪರೀಕ್ಷೆಯ ಸೂಚನೆಯನ್ನು ಮಾಡಿಲ್ಲ. ಸಾಕಷ್ಟು ಮತ್ತು ಸೂಕ್ತ ಮಾಹಿತಿಯು ಇಲ್ಲದೇ ಇರುವುದರಿಂದ ಪರಿಣಾಮವನ್ನು ಅಳೆಯಲು ನಮಗೆ ಸಾಧ್ಯವಾಗುತ್ತಿಲ್ಲ. | ಕಂಪನಿಯು ಆಸ್ತಿಗಳ ದುರ್ಬಲತೆಯನ್ನು ಮೇಲ್ವಿಚಾರಣೆ ಮಾಡಲು ಒಂದು ಸಮಿತಿಯನ್ನು ಸ್ಥಾಪಿಸಿದೆ. ಇದು ದುರ್ಬಲತೆಯ ಸಂಭವನೀಯ ಪರಿಣಾಮಗಳಿಗಾಗಿ ಸ್ಥಿರಾಸ್ತಿಗಳ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯಲ್ಲಿದೆ.<br>ಸಮಿತಿಯು ಪ್ರಸ್ತುತ ಹಣಕಾಸು ವರ್ಷದ ಅಂತ್ಯದಲ್ಲಿ ವರದಿಯನ್ನು ಸಲ್ಲಿಸುತ್ತದೆ. ಹೀಗಾಗಿ Ind AS 36 – ಅಡಿಯಲ್ಲಿ ಕಂಪನಿಯು ಹಣಕಸು ವರ್ಷದ ಆರ್ಥಿಕ ವಿವರ ಪಟ್ಟಿಯ (ಬ್ಯಾಲೆನ್ಸ್‌ಶೀಟ್) ದಿನಾಂಕದಂದು ಸ್ಥಿರ ಆಸ್ತಿಗಳ ಮೇಲೆ ಯಾವುದೇ ದುರ್ಬಲತೆಯನ್ನು ನಿರ್ಣಯಿಸಲು ಸಹಾಯ ಮಾಡುವುದು. |
| 6. | ಕಾರ್ಯಾಚರಣೆ ಆದಾಯದ ಪ್ರಕಾರ ಸರಕು ಮತ್ತು ಸೇವೆಗಳ ಪೂರೈಕೆ ಮತ್ತು ಅಂತರ–ಘಟಕಗಳ ನಡುವೆ ಸರಕು ಮತ್ತು ಸೇವೆಗಳ ಪೂರೈಕೆ ಮತ್ತು GST ಇಲಾಖೆಯೊಂದಿಗೆ ಘೋಷಿಸಿದ ಆದಾಯದ ಪ್ರಕಾರ ಸರಕು ಮತ್ತು ಸೇವೆಗಳ ಪೂರೈಕೆಯು ಹೊಂದಾಣಿಕೆಯಾಗುವುದಿಲ್ಲ. ವಹಿವಾಟಿನ ಹೊಂದಾಣಿಕ ಇಲ್ಲದೇ ಇರುವುದರಿಂದ ಹಣಕಾಸಿನ ವಿವರಣ ಪಟ್ಟಿ ಮೇಲಿನ ಪರಿಣಾಮವನ್ನು ಅಳೆಯಲು ನಮಗೆ ಸಾಧ್ಯವಾಗುತ್ತಿಲ್ಲ.<br>ಉತ್ಪಾದನೆಯೊಂದಿಗೆ ಸಂಬಂಧವಿಲ್ಲದ ಬಂಡವಾಳ ಸರಕುಗಳು (ಕ್ಯಾಪಿಟಲ್ ಗೂಡ್ಸ್) ಸೇರಿದಂತೆ ಎಲ್ಲಾ ವಸ್ತುಗಳ ಮೇಲೆ ಇನ್‌ಪುಟ್ ತೆರಿಗೆ ಕ್ರೆಡಿಟ್ ಅನ್ನು ಪಡೆಯುವುದು ITC ನಿಯಮಗಳಿಗೆ ವಿರುದ್ಧವಾಗಿದೆ. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ಹೊಂದಾಣಿಕೆಯ ಕೊರತೆಯಿಂದಾಗಿ, ಹಣಕಾಸಿನ ವಿವರಣ ಪಟ್ಟಿ ಮೇಲಿನ ಪರಿಣಾಮವನ್ನು ಅಳೆಯಲು ನಮಗೆ ಸಾಧ್ಯವಾಗುತ್ತಿಲ್ಲ. | ಕಂಪನಿಯು GST ರಿಟರ್ನ್ಸ್‌ನಲ್ಲಿ ಘೋಷಿಸಲಾದ ಮಾರಾಟ ಮತ್ತು ಅಂತರ–ಘಟಕ ವರ್ಗಾವಣೆಗಳ ಹೊಂದಾಣಿಕೆ ಪ್ರಕ್ರಿಯೆಯನ್ನು ನಡೆಸುತ್ತಿದೆ. ಅಲ್ಲದೆ ಕಂಪನಿಯು ಅದು ಮಾಡಿದ ಖರೀದಿಗಳನ್ನು ಹೊಂದಾಣಿಕೆ ಮಾಡುತ್ತಿದೆ ಮತ್ತು ಬಂಡವಾಳ ಖರೀದಿಗಳು ಮತ್ತು ಆದಾಯದ ಖರೀದಿಗಳನ್ನು ಪ್ರತ್ಯೇಕಿಸುತ್ತಿದೆ. ಒಮ್ಮೆ ಹೇಳಲಾದ ಹೊಂದಾಣಿಕೆಯನ್ನು ಮಾಡಿದ ನಂತರ, ಕಂಪನಿಯು ತಾನು ಪಡೆದ ಯಾವುದೇ ಹೆಚ್ಚುವರಿ ಕ್ರೆಡಿಟ್ ಅನ್ನು ಮರಳಿಸುತ್ತದೆ ಮತ್ತು ಅದನ್ನೇ ಬಂಡವಾಳಗೊಳಿಸುತ್ತದೆ. |
| 7. | ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 203ರೊಂದಿಗೆ ಓದಲಾದ ಕಂಪನಿಗಳ ನಿಯಮ 8 (ವ್ಯವಸ್ಥಾಪಕ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ತಿದ್ದುಪಡಿ ನಿಯಮಗಳು, 2014: ಪ್ರತಿಯೊಂದು ಲಿಸ್ಟೆಡ್ (ಪಟ್ಟಿ ಮಾಡಲಾದ) ಕಂಪನಿ ಮತ್ತು ಹತ್ತು ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿಗೆ ಮೊತ್ತದ ಬಂಡವಾಳವನ್ನು ಹೊಂದಿರುವ ಯಾವುದೇ ಇತರ ಸಾರ್ವಜನಿಕ ಕಂಪನಿಯು ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ಹೊಂದಿರಬೇಕು. ಕಂಪನಿಯು ಯಾವುದೇ ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ನೇಮಕ ಮಾಡಿಲ್ಲ. ಇದು ಕಂಪನಿಗಳ ಕಾಯಿದೆ, 2013 ರ ವಿಭಾಗ 203 ರ ಅಗತ್ಯತೆಗಳ ನಿಬಂಧನೆಗಳಿಗೆ ವಿರುದ್ಧವಾಗಿದೆ. | ಕಂಪನಿಯ ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ಗುರುತಿಸುವ ಮತ್ತು ನೇಮಕಕ್ಕಾಗಿ ಅರ್ಜಿ ಆಹ್ವಾನಿಸುವ ಪ್ರಕ್ರಿಯೆಯಲ್ಲಿದೆ. ಅದು ಮುಂದಿನ ಆರ್ಥಿಕ ವಿವರ ಪಟ್ಟಿ (ಬ್ಯಾಲೆನ್ಸ್‌ಶೀಟ್)ಯ ದಿನಾಂಕದೊಳಗೆ ಪೂರ್ಣಗೊಳ್ಳುತ್ತದೆ. |
| 8. | ಟಿಪ್ಪಣಿ ಸಂಖ್ಯೆ 5ರ ದೃಢೀಕರಣ– ಮಾಡಲಾದ ಬಿಲ್‌ಗಳಿಗೆದುರಾಗಿ ಪಡೆದ ಪಾವತಿಗಳನ್ನು ದೃಢೀಕರಣಗೊಳಿಸುವ ವ್ಯವಸ್ಥೆಯನ್ನು ಕಂಪನಿಯು ಹೊಂದಿದೆ. ಆದಾಗ್ಯೂ, ಗ್ರಾಹಕರಿಂದ ನಿರ್ದಿಷ್ಟ ಸೂಚನೆ ಇಲ್ಲದೇ ಬಿಲ್‌ಗಳಿಗೆದುರಾಗಿ ಸ್ವೀಕರಿಸಲಾದ ಪಾವತಿಗಳ ದೃಢೀಕರಣವನ್ನು ತತ್ಪೂರ್ತ ಆಧಾರದಲ್ಲಿ ಮಾಡಲಾಗುತ್ತಿದೆ. ಪರಿಣಾಮವಾಗಿ, ವ್ಯಾಪಾರ ಸ್ವೀಕೃತಿಗೆ ಸಂಬಂಧೀಸಿದಂತೆ ಒದಗಿಸಲಾದ ಕಾಲಾವಧಿವಾರು ಅಂಕಿ ಅಂಶಗಳನ್ನು ದೃಢೀಕರಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಮೇಲಾಗಿ ಕಂಪನಿಯು ಅದರ ವ್ಯಾಪಾರ ಸ್ವೀಕೃತಿ ಶಿಲ್ಕುಗಳು/ ಲೆಕ್ಕಪತ್ರದ ವಿವರಣಪಟ್ಟಿ/ ಪುಸ್ತಕ (ಬುಕ್ಸ್) ಗಳೊಂದಿಗೆ ಹೊಂದಾಣಿಕೆ ಪಡೆದಿಲ್ಲ. ಬಾಹ್ಯ ದೃಢೀಕರಣ ಇಲ್ಲದೇ ಇರುವುದರಿಂದ ನ್ಯಾಯೋಚಿತ ಮೌಲ್ಯಮಾಪನದ ಕುರಿತು ನಾವು ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಿಲ್ಲ. | ಕಂಪನಿಯು ತನ್ನ ವ್ಯಾಪಾರ ಸ್ವೀಕೃತಿಗಳನ್ನು ಪ್ರತಿನಿಧಿಸುವ ಎಲ್ಲಾ ವ್ಯಕ್ತಿಗಳಿಗೆ ಶಿಲ್ಕು ದೃಢೀಕರಣ ವಿನಂತಿ ಪತ್ರಗಳನ್ನು ಕಳುಹಿಸಿದೆ. ಅವರು ವಿನಂತಿ ಪತ್ರಗಳನ್ನು ಗೌರವಿಸಿದಾಗ ಮತ್ತು ಅವರಿಂದ ಕಂಪನಿಯು ಶಿಲ್ಕು ದೃಢೀಕರಣಗಳನ್ನು ಸ್ವೀಕರಿಸಿದಾಗ, ಕಂಪನಿಯು ಅನ್ವಯವಾಗುವಲ್ಲೆಲ್ಲಾ ಬಾಕಿಗಳನ್ನು ಹೊಂದಾಣಿಕೆ ಮಾಡುತ್ತದೆ ಮತ್ತು ಅಗತ್ಯವಿದ್ದರೆ ಹೆಚ್ಚುವರಿ ನಿಬಂಧನೆಗಳನ್ನು ಹೊಂದಿಸುತ್ತದೆ ಅಥವಾ ಬರೆಯುತ್ತದೆ. |

| | | |
|---|---|---|
| 9. | ಟಿಪ್ಪಣಿ ಸಂಖ್ಯೆ 13 ರ ದೃಢೀಕರಣ – ವ್ಯಾಪಾರ ಪಾವತಿಗಳು, ಟಿಪ್ಪಣಿ ಸಂಖ್ಯೆ 14 – ಇತರ ಪಾವತಿಗಳು ಮತ್ತು ವ್ಯಾಪಾರ ಠೇವಣಿಗಳು ಮತ್ತು ಟಿಪ್ಪಣಿ ಸಂಖ್ಯೆ 15 – ಹಣಕಾಸಿನ ವಿವರಣ ಪಟ್ಟಿಗಳಲ್ಲಿ ಬಹಿರಂಗಪಡಿಸಿದ ಗ್ರಾಹಕರ ಮುಂಗಡವು ದೃಢೀಕರಣಗಳಿಗೆ ಅನ್ವಯವಾಗುತ್ತದೆ. ಬಾಹ್ಯ ದೃಢೀಕರಣ ಇಲ್ಲದೇ ಇರುವುದರಿಂದ ನ್ಯಾಯೋಚಿತ ಮಾಪನದ ಕುರಿತು ನಾವು ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಿಲ್ಲ. | ಕಂಪನಿಯು ತನ್ನ ಗಾತ್ರ ಮತ್ತು ವಹಿವಾಟಿನ ಸ್ವರೂಪಕ್ಕೆ ಅನುಗುಣವಾಗಿರುವ ಹಣಕಾಸು ವಿವರಣ ಪಟ್ಟಿಗಳನ್ನು ಕ್ರೋಢೀಕರಿಸಲು ಬಾಹ್ಯ ತಜ್ಞರನ್ನು ನೇಮಕ ಮಾಡಿದೆ. ನಿಯತಕಾಲಿಕವಾಗಿ ಅಂತರ್ ಘಟಕ ಹೊಂದಾಣಿಕೆಗಳನ್ನು ಮಾಡಲು ಕಂಪನಿಯು ಆಂತರಿಕ ಕಾರ್ಯತಂತ್ರವೊಂದನ್ನು ಕೂಡ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿದೆ. |
| 10. | ಎಂಎಸ್‌ಎಂಇಡಿ ಕಾಯ್ದೆ, 2006 ರ ಪ್ರಕಾರ – ಕಂಪನಿಯು ಈ ಕಾಯಿದೆಯ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಮಾರಾಟಗಾರರನ್ನು ಗುರುತಿಸಬೇಕು. ಕಂಪನಿಯು ತನ್ನ ಹಣಕಾಸಿನ ವಿವರಣಾ ಪಟ್ಟಿಗಳು ಮತ್ತು ಕಂಪನಿಗಳ ಕಾಯಿದೆ, 2013ರ ಅಡಿಯಲ್ಲಿ ಅರ್ಧವಾರ್ಷಿಕ ವರದಿ ಮಾಡುವ ಅಗತ್ಯತೆಗಳಲ್ಲಿ ಪ್ರತ್ಯೇಕವಾದ ಪ್ರಕಟಣೆಯನ್ನು ಮಾಡಬೇಕು. ಪ್ರಕಟಿಸುವಿಕೆ ಮತ್ತು ವರದಿ ಮಾಡುವಿಕೆಯು ಬಾಕಿ ಮತ್ತು ಪಾವತಿಸಿದ ಮೂಲ ಮೊತ್ತ, ಪಾವತಿಸಬೇಕಾದ ಬಡ್ಡಿಯ ಪ್ರಮಾಣ ಮತ್ತು ಪಾವತಿಸಿದ ಮೊತ್ತ, ವಿಳಂಬಕ್ಕೆ ಕಾರಣ, ಯಾವುದಾದರೂ ಇದ್ದಲ್ಲಿ ಒಳಗೊಂಡಿರಬೇಕು. ಕಂಪನಿಯು ಎಂಎಸ್‌ಎಂಇಡಿ ಕಾಯಿದೆ, 2006 ಮತ್ತು ಕಂಪನಿಗಳ ಕಾಯಿದೆ, 2013ಕ್ಕೆ ನಿಯಮಗಳಿಗೆ ವಿರುದ್ಧವಾಗಿ ಮಾರಾಟಗಾರರನ್ನು ಗುರುತಿಸಲು ಯಾವುದೇ ಕಾರ್ಯವಿಧಾನವನ್ನು ಮಾಡಿಲ್ಲ. | ಟಿಪ್ಪಣಿ ಸಂಖ್ಯೆ. 13 ರ ಅಡಿಯಲ್ಲಿ ಹೆಚ್ಚುವರಿ ಪ್ರಕಟಿಸುವಿಕೆಯಲ್ಲಿ, MSMED ಕಾಯಿದೆಯಡಿಯಲ್ಲಿ ನೋಂದಾಯಿಸಲ್ಪಟ್ಟಿರುವ ಮಾರಾಟಗಾರರು ಮತ್ತು ಪೂರೈಕೆದಾರರಿಗೆ ಬಾಕಿ ಉಳಿದಿರುವ ಮೂಲ ಮೊತ್ತವನ್ನು ಗುರುತಿಸಿರುವುದಾಗಿ ಕಂಪನಿಯು ಹೇಳಿದೆ. ಆದಾಗ್ಯೂ, ಕಂಪನಿಯು ಯಾವುದೇ ವಾಸ್ತವಿಕ ಬಡ್ಡಿಯನ್ನು ನಿರೀಕ್ಷಿಸದ ಕಾರಣ, ಅದು ಬಾಕಿ ಉಳಿದಿರುವ ಅಸಲು ಮೊತ್ತವನ್ನು ಪ್ರಕಟಿಸಿಲ್ಲ. |
| 11. | ಉತ್ಪನ್ನಗಳ ಮಾರಾಟಕ್ಕೆ ಕೇಂದ್ರ ಕಚೇರಿಯಿಂದ ಮತ್ತು ಶಾಖೆಗಳಿಂದ ನೇಮಕ ಮಾಡಲ್ಪಟ್ಟ ಮರು ವಿತರಕರೊಂದಿಗೆ ಕಂಪನಿಯು ಯಾವುದೇ ಔಪಚಾರಿಕ ಒಪ್ಪಂದಗಳನ್ನು ಮಾಡಿಕೊಂಡಿಲ್ಲ. ಮರು ವಿತರಕರನ್ನು ವಿವಿಧ ಪ್ರದೇಶಗಳಿಗೆ ನೇಮಕ ಮಾಡಲಾಗಿದೆ, ಒಂದೊಮ್ಮೆ ಜವಾಬ್ದಾರಿಗಳನ್ನು ನಿಭಾಯಿಸಲು ಸಾಧ್ಯವಾಗದೇ ಇದ್ದ ಸಂದರ್ಭದಲ್ಲಿ ಕಂಪನಿಯು ಮರು ವಿತರಕರನ್ನು ಬದಲಾಯಿಸುವುದು. ಉತ್ಪನ್ನಗಳ ಮಾರಾಟ ಜಾಲಕ್ಕೆ ಮರು ವಿತರಕರು ಪ್ರಮುಖ ಕೊಂಡಿಯಾಗಿದ್ದು ಕಂಪನಿಯ ಉತ್ಪನ್ನಗಳ ಮಾರಾಟದ ಬಹುಭಾಗವು ಇಂತಹ ಮರು ವಿತರಕರನ್ನು ಅವಲಂಭಿಸಿದೆ. ಹೆಚ್ಚುವರಿಯಾಗಿ, ಮರು ವಿತರಕರೊಂದಿಗಿನ ಸಂಬಂಧವೂ ಸೇರಿದಂತೆ ಕಂಪನಿಯ ಕ್ಷೇತ್ರ ಮಾರಾಟ ಚಟುವಟಿಕೆಗಳು ಕಂಪನಿಯ ಕ್ಷೇತ್ರ ಗುತ್ತಿಗೆ ನೌಕರರಿಂದ ನಿರ್ವಹಿಸಲ್ಪಡುವುದು. ಔಪಚಾರಿಕ ಒಪ್ಪಂದವು ಇಲ್ಲದೇ ಇರುವುದರಿಂದ ಮರು ವಿತರಕರ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಮತ್ತು ಕಂಪನಿ ಮತ್ತು ಕಂಪನಿಯ ಭವಿಷ್ಯದ ಮಾರಾಟದ ನಿರೀಕ್ಷೆಗಳ ಮೇಲೆ ಪ್ರಭಾವದ ಕುರಿತು ಖಾತರಿಪಡಿಸಲು ನಮಗೆ ಸಾಧ್ಯವಾಗಿಲ್ಲ. | ಶಾಖೆಗಳಲ್ಲಿ ಕಂಪನಿಯ ಪ್ರಸ್ತುತ ಸಾಂಸ್ಥಿಕ ಚೌಕಟ್ಟು ಈ ರೀತಿಯಾಗಿದೆ, ಪ್ರತಿಯೊಂದು ಶಾಖೆಗೂ ಶಾಖಾ ವ್ಯವಸ್ಥಾಪಕರು/ ಶಾಖಾ ಲೆಕ್ಕಾಧಿಕಾರಿ/ಕಿರಿಯ ಅಧಿಕಾರಿ ಮತ್ತು ಕಂಪನಿಯ ಖಾಯಂ ನೌಕರರಾದ ಇತರ ಅಧಿಕಾರಿಗಳು ಇರುತ್ತಾರೆ. ಈ ಅಧಿಕಾರಿಗಳಿಗೆ ಮರು ವಿತರಕರ, ದಾಸ್ತಾನುಗಾರರು (ಸ್ಟಾಕಿಸ್ಟ್‌ಗಳು), ಸಾಗಾಟಗಾರರು(ಟ್ರಾನ್ಸ್‌ಪೋರ್ಟರ್), ಸಿ &ಎಫ್ ಏಜೆಂಟರು ನೇಮಕಾತಿ/ಬದಲಾವಣೆ ಮೇಲೆ ನಿಯಂತ್ರಣ ಹೊಂದಿರುತ್ತಾರೆ. ಶಾಖೆಗಳಿಂದ ಮಾರಾಟವು ಶಾಖಾ ಮುಖ್ಯಸ್ಥರಿಂದ ಮತ್ತು ಕೇಂದ್ರ ಕಚೇರಿ ಮಟ್ಟದಲ್ಲಿ ಮಾರಾಟ ಅಧಿಕಾರಿಗಳಿಂದ ನಿಕಟವಾಗಿ ಮೇಲ್ವಿಚಾರಣೆ ನಡೆಸಲ್ಪಡುತ್ತದೆ. ಆದಾಗ್ಯೂ, ಈ ಪ್ರಕ್ರಿಯೆಯನ್ನು ಸುಗಮಗೊಳಿಸಲು ಶಾಖಾ ಮಟ್ಟದಿಂದ ಕೇಂದ್ರ ಕಚೇರಿ ಹಂತದವರೆಗೂ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. |
| 12. | ಟಿಪ್ಪಣಿ ಸಂಖ್ಯೆ 18. i ಕ್ಕೆ ಗಮನ ಸೆಳೆಯಲಾಗಿದೆ: ಇತರೇ ಆದಾಯ–ನೌಕರರ ಪಿಂಚಣಿ ಮರುಪಾವತಿ. ಈ ಮೊದಲಿನ ಮೈಸೂರು ಗಂಧದೆಣ್ಣೆ ಕಾರ್ಖಾನೆಯ ಮೈಸೂರು, ಬೆಂಗಳೂರು ಹಾಗೂ ಶಿವಮೊಗ್ಗಗಳಲ್ಲಿ ಉದ್ಯೋಗಕ್ಕೆ ಸೇರ್ಪಡೆಯಾದ ನೌಕರರರಿಗೆ ಕರ್ನಾಟಕ ಸರ್ಕಾರದಿಂದ ಹಿಂದಿನ ವರ್ಷಗಳಲ್ಲಿ ಇತ್ಯರ್ಥವಾದ ಅಂತಿಮ ಬಾಕಿ ಪಾವತಿಗಳನ್ನು ಕಂಪನಿಯು ಲೆಕ್ಕ ಹಾಕುತ್ತದೆ. ಇಂತಹ 250 ನೌಕರರ ಇತ್ಯರ್ಥಗಳನ್ನು ಹಣಕಾಸು ವರ್ಷ 2020–21ಕ್ಕೆ ಅಂತಹ 250 ನೌಕರರ ಮರುಪಾವತಿಗಳನ್ನು ಕಂಪನಿಯು ಪಡೆದಿದ್ದು, ಕಂಪನಿಯ ಬಳಿ ಒಟ್ಟಾರೆ ಅಂತಹ ನೌಕರರ ಸಂಖ್ಯೆಯ ಅರ್ಹ ಪ್ರಕರಣಗಳ ಮತ್ತು ವಸೂಲಾತಿಯ ಸಂಭಾವ್ಯ ಮೊತ್ತ /ಸರ್ಕಾರದಿಂದ ಸ್ವೀಕರಿಸಬೇಕಾದ ಮರುಪಾವತಿ ಕುರಿತಂತೆ ಒಟ್ಟು ನಿರ್ಣಾಯಕ ದಾಖಲೆಗಳು ಕಂಪನಿ ಬಳಿ ಇಲ್ಲ. ಇಂತಹ ಮಾಹಿತಿ ಲಭ್ಯವಿಲ್ಲದ ಸಂದರ್ಭದಲ್ಲಿ, ಹಣಕಾಸು ವಿವರಣ ಪಟ್ಟಿಗಳಲ್ಲಿ ಇಂತಹ ವಹಿವಾಟುಗಳ ಪರಿಣಾಮವನ್ನು ಅಳತೆ ಮಾಡಲು ಸಾಧ್ಯವಾಗುವುದಿಲ್ಲ. | ಕೆಎಸ್‌ಡಿಎಲ್ ಇಪಿಎಫ್ ಟ್ರಸ್ಟ್‌ಗೆ ಮರುಪಾವತಿಸಬೇಕಾದ ಪಿಂಚಣಿ ಮೊತ್ತಕ್ಕಾಗಿ ಕಂಪನಿಯು 2021–2022ರಿಂದ 2022–23ರ ವರೆಗೆ ರೂ. 9.6 ಕೋಟಿ ಮೊತ್ತಕ್ಕೆ ವ್ಯವಸ್ಥೆಗಳನ್ನು ಮಾಡಿದೆ. ಕಂಪನಿಯು, ಸರ್ಕಾರದಿಂದ ಪಿಂಚಣಿ ಸ್ವೀಕರಿಸಿದಂತಹ ನೌಕರರ ದಾಖಲೆಗಳನ್ನು ಪಡೆಯುವ ಪ್ರಕ್ರಿಯಯಲ್ಲಿದೆ. ಆದಾಗ್ಯೂ, ಮೊತ್ತವನ್ನು ಕೆಎಸ್‌ಡಿಎಲ್ ಇಪಿಎಫ್ ಟ್ರಸ್ಟ್‌ಗೆ ಪಾವತಿ ಮಾಡಬೇಕಿರುವುದರಿಂದ ಕಂಪನಿಯು ಅದಕ್ಕೆ ವ್ಯವಸ್ಥೆಗಳನ್ನು ಮಾಡಿದೆ. |

| | | |
|---|---|---|
| 13. | ಟಿಪ್ಪಣಿ 38.vi ಕ್ಕೆ ಗಮನ ಸೆಳೆಯಲಾಗಿದೆ–ಸಾಮಾನ್ಯ, ಕಂಪನಿಯು ಖರೀದಿ ಮಾಡಿದ ಕಚ್ಚಾ ವಸ್ತುಗಳ ದರಖಾಸ್ತು (ಟೆಂಡರ್) ಮತ್ತು ಖರೀದಿ ಕುರಿತಂತೆ ಲೋಕಾಯುಕ್ತ ಪೊಲೀಸರಿಂದ ತನಿಖೆ. ತನಿಖೆ ಮುಂದುವರೆಯುತ್ತಿರುವುದರಿಂದ, ಸರ್ಕಾರದ ನಿರ್ದೇಶನಗಳ ಅನುಪಾಲನೆ ಮತ್ತು ಕಂಪನಿಯಿಂದ ಕಚ್ಚಾವಸ್ತುಗಳ ಖರೀದಿಯಲ್ಲಿ ಆಂತರಿಕ ನಿಯಂತ್ರಣಗಳ ಪರ್ಯಾಪ್ತತೆ ಕುರಿತು ಟಿಪ್ಪಣಿ ಮಾಡಲು ನಮಗೆ ಸಾಧ್ಯವಾಗುವುದಿಲ್ಲ. ಈ ಸಂಬಂಧ ನಮಗೆ ಯಾವುದೇ ದಾಖಲೆ/ಮಾಹಿತಿಗಳನ್ನು ನಮಗೆ ಒದಗಿಸಲಾಗಿಲ್ಲ. | ಲೆಕ್ಕಪರಿಶೋಧನೆಯಡಿಯಲ್ಲಿನ ವರ್ಷದಲ್ಲಿ ಕರೆಯಲಾದ ಕಚ್ಚಾ ವಸ್ತುಗಳ ದರಖಾಸ್ತು (ಟೆಂಡರ್)ಗಳ ಪರಿಶೀಲನೆಗಾಗಿ ನೇಮಕ ಮಾಡಲಾದ ವೆಚ್ಚ ಪರಿಶೋಧಕರ ವರದಿಯನ್ನು ಅಧ್ಯಯನ ಮಾಡಲು ಸಮಿತಿಯೊಂದರ ರಚನೆಗೆ ಕಂಪನಿಯ ಆಡಳಿತ ಮಂಡಳಿಯು ಅನುಮೋದನೆ ನೀಡಿದೆ. ಈ ಪ್ರಕ್ರಿಯೆಯು ಈಗಾಗಲೇ ಆರಂಭವಾಗಿದೆ ಮತ್ತು ವೆಚ್ಚ ಪರಿಶೋಧಕರಿಂದ ದರಪಟ್ಟಿಯನ್ನು (ಕೊಟೇಶನ್) ಕಂಪನಿಯು ಕರೆಯುತ್ತಿದೆ. |
| 14. | ಟಿಪ್ಪಣಿ 28ಕ್ಕೆ ಗಮನ ಸೆಳೆಯಲಾಗಿದೆ– ಸಂಭವನೀಯ ಹೊಣೆಗಾರಿಕೆಗಳು, ಬಂಡವಾಳ ಮತ್ತು ಇತರೇ ಬದ್ಧತೆಗಳು ಕಂಪನಿಯ ಕೇಂದ್ರ ಕಚೇರಿ ವಿರುದ್ಧ ದಾವೆಗಳ ಮೇಲೆ ಸಂಭವನೀಯ ಹೊಣೆಗಾರಿಕೆಗಳ ಹಣಕಾಸು ಪರಿಣಾಮ ಸಾಧ್ಯತೆಗಳನ್ನು ಕಂಪನಿ ವರದಿ ಮಾಡಿದೆ. ಕಂಪನಿಯು ಅಂತಹ ಕಾನೂನು ದಾವೆಗಳ ದಾಖಲೆಗಳನ್ನು ಹೊಂದಿಲ್ಲ ಮತ್ತು ಸಂಪೂರ್ಣ ಮಾರಾಟ ವಹಿವಾಟು ಹೊರಹೊಮ್ಮುವ ಕಂಪನಿಯ ಶಾಖಾ ಕಚೇರಿಗಳಿಗೆ ಸಂಬಂಧಪಟ್ಟಂತೆ ಇತರೇ ಸಂಭವನೀಯ ಹೊಣೆಗಾರಿಕೆಗಳ ಕುರಿತಂತೆ ಕಂಪನಿಯು ಯಾವುದೇ ದಾಖಲೆಗಳನ್ನು ಹೊಂದಿಲ್ಲವಾದ್ದರಿಂದ ಮತ್ತು ನಿಖರತೆ / ಇಲ್ಲವಾದರೆ ವರದಿಯಾದ ಸಂಭವನೀಯ ಹೊಣೆಗಾರಿಕೆಗಳು ಮತ್ತು ಕಂಪನಿಯ ಹಣಕಾಸು ವಿವರಣಾ ಪಟ್ಟಿ ಮೇಲೆ ಅದರ ಪರಿಣಾಮದ ಸಾಧ್ಯತೆಗಳ ಕುರಿತು ನಾವು ಟಿಪ್ಪಣಿ ಮಾಡಲು ಸಾಧ್ಯವಾಗುವುದಿಲ್ಲ. | ಕಂಪನಿಯು ಎಲ್ಲ ಕಾನೂನು ದಾವೆಗಳ ಮತ್ತು ಎಲ್ಲಾ ಶಾಖಾ ಕಚೇರಿಗಳಿಂದ ಸಂಭವನೀಯ ಹೊಣೆಗಾರಿಕೆಗಳನ್ನು ಜೋಡಣೆ ಮಾಡುವ ಪ್ರಕ್ರಿಯೆಯಲ್ಲಿದೆ. ಈ ಸಾದಿಲ್ವಾರುಗಳ ಪರಿಣಾಮದ ಸಾಧ್ಯತೆಯನ್ನು ಇದರ ನ್ಯಾಯಸಮ್ಮತವಾದ ಖಚಿತತೆ ನಂತರ ಪ್ರಕಟಿಸಲಾಗುವುದು. |
| 15. | ಕಂಪನಿಯು ಆದಾಯ ತೆರಿಗೆಗೆ ಸಂಬಂಧಿಸಿದಂತೆ ಬಾಕಿಗಳನ್ನು ತಾಳೆಯಾಗುವ ಹೊಣೆಗಾರಿಕೆ ಸೇರಿದಂತೆ ಮುಂಗಡ ತೆರಿಗೆ/ಮರು ಪಾವತಿಗಳು/ವಿವಾದಿತ ತೆರಿಗೆಗಳು ಮೇಲ್ಮನವಿ ಅಡಿಯಲ್ಲಿರುವುದೂ ಒಳಗೊಂಡಂತೆ ಹೊಂದಾಣಿಕೆ ಮಾಡಿಲ್ಲ ಮತ್ತು ಹಣಕಾಸು ವಿವರಣಾ ಪಟ್ಟಿಯಲ್ಲಿ (ಎಫ್ಎಸ್) ಸಮರ್ಪಕವಾಗಿ ವರ್ಗೀಕರಿಸಿಲ್ಲ. ಕಂಪನಿ ಒದಗಿಸಿರುವ ಸಂಬಂಧಿತ ಮೇಲ್ಮನವಿ ದಾಖಲೆಗಳು/ ಆದಾಯ ತೆರಿಗೆ ಪೋರ್ಟಲ್ ಆಧರಿತವಾಗಿ ಆದೇಶದ ಖಂಡಿಕೆ 3(vii)(b) ಗೆ ಸಂಬಂಧಿಸಿದಂತೆ ನಮ್ಮ ಟಿಪ್ಪಣಿಗಳ ಮೇಲೆ ಗಮನ ಸೆಳೆಯಲಾಗಿದೆ, ಮೇಲೆ ಹೇಳಿದಂತೆ ಇಂತಹ ಹೊಂದಾಣಿಕೆ ಇಲ್ಲದೇ ಇರುವುದರಿಂದ ಇದು ನಮ್ಮಿಂದ ಸ್ವತಂತ್ರವಾಗಿ ಮೌಲ್ಯೀಕರಿಸಲಾಗಿಲ್ಲ. | ಆದಾಯ ತೆರಿಗೆ ಮೇಲ್ಮನವಿಯ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಮತ್ತು ಇತರೇ ವಿವಾದಿತ ತೆರಿಗೆಗಳಿಗೆ ಸಂಬಂಧಿಸಿದಂತ ದಾಖಲೆಗಳನ್ನು ಒದಗಿಸಿದೆ. ಅಡಿಯಲ್ಲಿರುವ ಆದಾಯ ತೆರಿಗೆ ಸೇರಿದಂತೆ ವಿವಾದಿತ ತೆರಿಗೆಗಳ ಬಾಕಿಯನ್ನು ಹೊಂದಾಣಿಕೆ ಮಾಡುವ ಪ್ರಕ್ರಿಯೆಯಲ್ಲಿದೆ. ಒಂದು ಬಾರಿ ಈ ಹೊಂದಾಣಿಕೆ ಪ್ರಕ್ರಿಯೆ ಮಾಡಿದಲ್ಲಿ ಮತ್ತು ನಿಖರವಾದ ಮೊತ್ತವನ್ನು ಲೆಕ್ಕ ಮಾಡಿದ ಬಳಿಕ ಮತ್ತು ಆದಾಯ ತೆರಿಗೆ ಹೊಣೆಗಾರಿಕೆ ತಲುಪಿದ ಬಳಿಕ ಕಂಪನಿಯು ಅಗತ್ಯ ಅವಕಾಶಗಳನ್ನು ಮಾಡಿಕೊಳ್ಳಬೇಕು ಮತ್ತು ಅದರಂತೆ ಘೋಷಿಸಬೇಕು. |
| 16. | ಹಣಕಾಸು ವಿವರಣಾ ಪಟ್ಟಿಗೆ ಟಿಪ್ಪಣಿ ಸಂ.23– ಇತರೇ ಖರ್ಚುಗಳು ದರಗಳು ಮತ್ತು ರೂ.33.28 ಕೋಟಿಯ ತೆರಿಗೆಗಳನ್ನು ಒಳಗೊಂಡಿರುವುದು, ಇದರಲ್ಲಿ ಕಂಪನಿಯು ಬೆಂಗಳೂರು ಕಾರ್ಖಾನೆ, ಮೈಸೂರು ಕಾರ್ಖಾನೆ ಮತ್ತು ಶಿವಮೊಗ್ಗ ಕಾರ್ಖಾನೆಗಳ ಖಾಲಿ ಜಾಗಕ್ಕೆ 2003ರಿಂದ 2023ರ ಅವಧಿವರೆಗೆ ರೂ.20.22 ಕೋಟಿ ರೂ ಆಸ್ತಿ ತೆರಿಗೆ ಹೊಣೆಗಾರಿಕೆಗೆ ಮತ್ತು ರೂ.9.61 ಕೋಟಿ ಹಣಕಾಸು ವರ್ಷ 2017–18ರ ಜಿಎಸ್‌ಟಿ ಬೇಡಿಕೆಗೆ ಮತ್ತು ರೂ.3.45 ಕೋಟಿ ಇತರೇ ಖರ್ಚುಗಳಿಗೆ ಅವಕಾಶ ಮಾಡಿಕೊಟ್ಟಿದೆ. ಸ್ಪಷ್ಟವಾದ ವಿವರಗಳು ಮತ್ತು ಅಂತಹ ಹೊಣೆಗಾರಿಕೆಗಳ ಬಾಹ್ಯ ದೃಢೀಕರಣ ಇಲ್ಲದೇ ಇರುವುದರಿಂದ ಖಾತೆಗಳ ಪುಸ್ತಕದಲ್ಲಿ ಮಾಡಲಾದ ಅವಕಾಶಗಳನ್ನು ದೃಢೀಕರಿಸಲು ನಮಗೆ ಸಾಧ್ಯವಾಗಿಲ್ಲ. | ಕರ್ನಾಟಕದ ಕಂದಾಯ ಇಲಖೆಯು ನೀಡಿದ ಆದೇಶಗಳ ಆಧಾರದ ಮೇಲೆ ಕಂಪನಿಯು ಅವಕಾಶಗಳನ್ನು ಮಾಡಿದೆ. ಕಂಪನಿಯು ಅಪಾರ ಪ್ರಮಾಣದ ಖಾಲಿ ಜಮೀನನ್ನು ಹೊಂದಿದೆ ಹೀಗಾಗಿ ಅವುಗಳ ಮೇಲೆ ಆಸ್ತಿ ತೆರಿಗೆ ಘೋಷಿಸಲು ಬಾಧ್ಯವಾಗಿದೆ. ಕಂಪನಿಯು ಸಂಬಂಧಿಸಿದ ಪ್ರಾಧಿಕಾರಗಳನ್ನು ಸಂಪರ್ಕಿಸಿದೆ ಮತ್ತು ಅವರೊಂದಿಗೆ ಸಮಾಲೋಚನೆ ಬಳಿಕ ದರಗಳಿಗೆ ಮೊತ್ತವನ್ನು ಒದಗಿಸಿದೆ. |

| | | |
|---|---|---|
| 17. | Ind AS 116ರ ಅರ್ಥದೊಳಗೆ ಗುತ್ತಿಗೆದಾರ ಬರುವುದರಿಂದ ಕಂಪನಿಯು ತಾನು ಮಾಡಿಕೊಂಡಿರುವ ಗುತ್ತಿಗೆ ಒಪ್ಪಂದಗಳನ್ನು ಗುರುತಿಸಿಲ್ಲ– ಗುತ್ತಿಗೆಗಳು ಮತ್ತು ಮಾನ್ಯತೆಯ ತತ್ವಗಳು, ಮಾಪನಗಳು ಮತ್ತು ಅದರಲ್ಲಿನ ಪ್ರಕಟಣೆಯನ್ನು ಹಾಗಾಗಿ ಅಳವಡಿಸಿಕೊಂಡಿಲ್ಲ, ಆದರೆ ಒಪ್ಪಂದದ ಕರಾರಿನ ಪ್ರಕಾರ ಪಾವತಿಸಬೇಕಾದ ಬಾಡಿಗೆಯನ್ನು ಆದಾಯ ಮತ್ತು ನಷ್ಟ ವಿವರಣಾ ಪಟ್ಟಿಗೆ ಸೇರಿಸಿದೆ. | ಅಭಿಪ್ರಾಯವನ್ನು ಗಮನಿಸಲಾಗಿದೆ. ಮುಂದಿನ ಹಣಕಾಸು ವರ್ಷ 2023–24ರ ಅವಧಿಯಲ್ಲಿ ಕಂಪನಿಯು ಗುತ್ತಿಗೆ ಹೊಣೆಗಾರಿಕೆಗಳು / ಗುತ್ತಿಗೆ ಒಪ್ಪಂದಗಳನ್ನು ಇಂಡ್ಎಎಸ್–116ರ ಘೋಷಣೆಗಳ ಅರ್ಥದೊಳಗೆ ಅಗತ್ಯತೆ ಘೋಷಿಸಲಿದೆ. |
| 18. | ಟಿಪ್ಪಣಿ ಸಂಖ್ಯೆ.11 ಮುಂದೂಡಲ್ಪಟ್ಟ ತೆರಿಗೆ ಸ್ವತ್ತು (ಹೊಣೆಗಾರಿಕೆ) –ನಿವ್ವಳ: ರೂ. 0.93 ಕೋಟಿಗೆ ಪ್ರಸ್ತುತವಲ್ಲದ ಹೊಣೆಗಾರಿಗಳನ್ನು ಕಡಿತಗೊಳಿಸಲಾಗಿದೆ. ಮತ್ತು ಅದರಿಂದಾಗಿ ತೆರಿಗೆ ನಂತರದ ಲಾಭದ ಮೇಲೆ ಮತ್ತು ಕಂಪನಿಯ ಇತರೇ ಈಕ್ವಿಟಿ ಪರಿಣಾಮವಾಗಲಿದೆ. | ಮುಂದೂಡಲ್ಪಟ್ಟ ತೆರಿಗೆಗಳ ಪರಿಣಾಮವನ್ನು ಆದಾಯ ಮತ್ತು ನಷ್ಟ ಖಾತೆಯಲ್ಲಿ ಪರಿಗಣಿಸಲಾಗಿದೆ ಮತ್ತು ಮೀಸಲು 0.93 ಕೋಟಿ ಮೀಸಲನ್ನು ಮೀಸಲಿಗೆ ತೆಗೆದುಕೊಳ್ಳಲಾಗಿದೆ. |
| | **ವಿಷಯದ ಪ್ರಾಧಾನ್ಯತೆ :** | |
| **ಕ್ರ. ಸಂ.** | **ಅವಲೋಕನಗಳು** | **ಆಡಳಿತ ಮಂಡಳಿ ಉತ್ತರ** |
| 1. | ಹಣಕಾಸು ವಿವರಣಾ ಪಟ್ಟಿಗಳಿಗೆ ಟಿಪ್ಪಣಿ ಸಂಖ್ಯೆ 23–ಇತರೇ ಖರ್ಚುಗಳು ಸಂಶಯಾಸ್ಪದ ಸಾಲಗಳಿಗೆ ಅವಕಾಶ ರೂ.19.83 ಕೋಟಿ ರೂ ಸೇರಿದೆ. Ind AS 109ರ ಅಡಿಯಲ್ಲಿ ಅಗತ್ಯವಾಗಿರುವ ನಿರೀಕ್ಷಿತ ಸಾಲ (ಕ್ರೆಡಿಟ್) ನಷ್ಟದ ಮೇಲೆ ಕಂಪನಿಯು ಯಾವುದೇ ಮೌಲ್ಯಮಾಪನ ಮಾಡಿಲ್ಲ, ಆದಾಗ್ಯೂ ಗ್ರಾಹಕರಿಂದ 6 ತಿಂಗಳಿಗೂ ಹೆಚ್ಚಿನ ಅವಧಿಯ ರೂ.19.83 ಕೋಟಿ ರೂಗಳಿಗೆ ಅವಕಾಶವನ್ನು ಮಾಡಲಾಗಿದೆ. | ಆರು ತಿಂಗಳಿಗೂ ಹೆಚ್ಚು ಅವಧಿಯ ಸಾಲಗಾರರ ಬಾಕಿಗೆ ಅನುಮಾನಾಸ್ಪದ ಸಾಲಗಳಿಗೆ ಒದಗಿಸಲು ಇದು ಕಂಪನಿಯ ಲೆಕ್ಕಪತ್ರ ನೀತಿಗೆ ಅನುಗುಣವಾಗಿದೆ. |
| 2. | ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿ ಸಂ.18 – ಇತರೇ ಆದಾಯ–ಈ ಹಿಂದಿನ ಅವಧಿಗೆ ಸಂಬಂಧಿಸಿ ನಿಶ್ಚಿತ ಅವಧಿಗೆ ಕಂಪನಿಯ ಲಾಭಕ್ಕೆ ಸೇರಿಸಲಾದ ಮೊತ್ತಗಳ (ರಿಟರ್ನ್‌ಬ್ಯಾಕ್ಸ್) ರೂ.1.62 ಕೋಟಿ. | ಈ ಆದಾಯವು ಮಾಡಲಾದ ಹೆಚ್ಚುವರಿ ಅವಕಾಶ ಮತ್ತು ಪ್ರಸ್ತುತ ಸಾಲಿನಲ್ಲಿ ಈ ಹಿಂದಿನ ಅವಧಿಗೆ ಸಂಬಂಧಿಸಿ ನಿಶ್ಚಿತ ಅವಧಿಗೆ ಪಾವತಿಸ ಬೇಕಾಗದೇ ಇರುವ ಕಂಪನಿಯ ಲಾಭಕ್ಕೆ ಸೇರಿಸಲಾದ ಮೊತ್ತ(ರಿಟರ್ನ್ ಬ್ಯಾಕ್) ಆಗಿದೆ. |

**ಬಿ) ವೃತ್ತಿಯಲ್ಲಿರುವ ಕಾರ್ಯದರ್ಶೀಯ (ಸೆಕ್ರೆಟರಿಯಲ್) ಲೆಕ್ಕಪರಿಶೋಧಕಿಯವರು ತಮ್ಮ ಲೆಕ್ಕಪರಿಶೋಧನೆ ವರದಿಯಲ್ಲಿ :**

| ಕ್ರ. ಸಂ. | ಅವಲೋಕನಗಳು | ಆಡಳಿತ ಮಂಡಳಿ ಉತ್ತರ |
|---|---|---|
| 1. | 31.03.2023ರಂದು ಕೊನೆಗೊಂಡ ತ್ರೈಮಾಸಿಕಕ್ಕೆ ಕಂಪನಿಯು ಆಡಳಿತ ಮಂಡಳಿ ಸಭೆಯನ್ನು ನಡೆಸಿಲ್ಲ; ಹೀಗಾಗಿ ಕಂಪನಿಗಳ ಕಾಯಿದೆ, 2013. ಸೆಕ್ಷನ್ 173(1) ರ ನಿಬಂಧನೆಯನ್ನು ಉಲ್ಲಂಘಿಸಿದೆ. | ಆಂತರಿಕ ಸಮಸ್ಯೆಗಳಿಂದಾಗಿ ಮಾರ್ಚ್ ತ್ರೈಮಾಸಿಕಕ್ಕೆ ಕೊನೆಗೊಳ್ಳುವ ಅವಧಿಗೆ ಆಡಳಿತ ಮಂಡಳಿ ಸಭೆಯನ್ನು ನಡೆಸಲಾಗಿಲ್ಲ. |
| 2. | ಕಂಪನಿಯು ಕಂಪನಿಗಳ ನಿಯಮ (ವ್ಯವಸ್ಥಾಪಕ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014 ರಲ್ಲಿ ಓದಲಾದ ಕಂಪನಿಗಳ ಕಾಯಿದೆ, 2013ರ ವಿಭಾಗ 203 ರ ನಿಬಂಧನೆಗಳ ಅನುಸಾರವಾಗಿ ಕಂಪನಿಯು ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ನೇಮಿಸುವ ಅಗತ್ಯವಿದೆ. | ಕಂಪನಿಯು ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ಗುರುತಿಸುವ ಮತ್ತು ನೇಮಕಕ್ಕಾಗಿ ಅರ್ಜಿ ಆಹ್ವಾನಿಸುವ ಪ್ರಕ್ರಿಯೆಯಲ್ಲಿದೆ. ಅದು ಮುಂದಿನ ಬ್ಯಾಲೆನ್ಸ್‌ಶೀಟ್‌ನ ದಿನಾಂಕದೊಳಗೆ ಪೂರ್ಣಗೊಳ್ಳುತ್ತದೆ. |

| | | |
|---|---|---|
| 3. | ಕಂಪನಿ ಕಾಯ್ದೆ, 2013ರ ಸೆಕ್ಷನ್ 177ರ ನಿಬಂಧನೆಗಳ ಪ್ರಕಾರ ಕಂಪನಿಯ ಲೆಕ್ಕಪರಿಶೋಧನ ಸಮಿತಿಯು ಬಹುಪಾಲು ಸ್ವತಂತ್ರ ನಿರ್ದೇಶಕರನ್ನು ಹೊಂದಿಲ್ಲ. ಆದಾಗ್ಯೂ, ಲೆಕ್ಕಪರಿಶೋಧನ ಸಮಿತಿಯಲ್ಲಿ ಕಂಪನಿಯ ಒಬ್ಬರು ಸ್ವತಂತ್ರ ನಿರ್ದೇಶಕರನ್ನು ಕಂಪನಿ ಹೊಂದಿದೆ. ಆಡಳಿತವು ನೀಡಿರುವ ವಿವರಣೆಯನ್ನು ಆಧರಿಸಿ, ಸ್ವತಂತ್ರ ನಿರ್ದೇಶಕರ ನೇಮಕಕ್ಕೆ ಕೋರಿಕೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಮತ್ತು ಸರ್ಕಾರದ ಅನುಮೋದನೆಯನ್ನು ಕಾಯಲಾಗುತ್ತಿದೆ. | ಸ್ವತಂತ್ರ ನಿರ್ದೇಶಕರ ನೇಮಕಕ್ಕೆ ಕೋರಿಕೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಮತ್ತು ಸರ್ಕಾರದ ಅನುಮೋದನೆಯನ್ನು ಕಾಯಲಾಗುತ್ತಿದೆ. |
| 4. | ಕಂಪನಿಯ ಆಡಳಿತ ಮಂಡಳಿಯಲ್ಲಿ ಮಹಿಳಾ ನಿರ್ದೇಶಕಿಯನ್ನು ಹೊಂದಿರಬೇಕಾದ ನಿಬಂಧನೆಯನ್ನು ಕಂಪನಿಯು ಪಾಲಿಸಿದೆ. ಆದಾಗ್ಯೂ, ಲೆಕ್ಕಪರಿಶೋಧನೆಯ ದಿನಾಂಕದ ಪ್ರಕಾರ , ಕಂಪನಿಯ ಆಡಳಿತ ಮಂಡಳಿಯಲ್ಲಿ ಮಹಿಳಾ ನಿರ್ದೇಶಕರಿಲ್ಲ. | ಮಹಿಳಾ ನಿರ್ದೇಶಕರ ನೇಮಕಕ್ಕೆ ಕೋರಿಕೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಮತ್ತು ಸರ್ಕಾರದ ಅನುಮೋದನೆಯನ್ನು ಕಾಯಲಾಗುತ್ತಿದೆ. |

**ಕಂಪೆನಿಗಳ ಕಾಯ್ದೆ, 2013 ರ ಅನುಚ್ಛೇದ 143 (6)(ಬಿ) ರ ಅಡಿಯಲ್ಲಿ 2023 ಮಾರ್ಚ್ 31ಕ್ಕೆ ಕೊನೆಗೊಂಡ ವಿತ್ತೀಯ ವರ್ಷದ ಹಣಕಾಸಿನ ವಿವರಣಾ ಪಟ್ಟಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಪಾಲರಿಂದ ಸ್ವೀಕರಿಸಲಾದ ಪರಾಮರ್ಶೆ ಪ್ರಮಾಣ ಪತ್ರ/ಪರಾಮರ್ಶಿಸದಿರುವ ಪ್ರಮಾಣ ಪತ್ರ /ಶೂನ್ಯ ಟಿಪ್ಪಣಿಯನ್ನು ವಾರ್ಷಿಕ ಮಹಾಸಭೆ (ಎಜಿಎಂ)ನಲ್ಲಿ ಮಂಡಿಸಬೇಕು.**

## 28. ಸೆಕ್ರೇಟೇರಿಯಲ್ ಮಾನದಂಡಗಳ ಅನುಸರಣೆ ಬಗ್ಗೆ ಪ್ರಕಟಣೆ

ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿರುವ ಕಾರ್ಯದರ್ಶೀಯ(ಸೆಕ್ರೇಟೇರಿಯಲ್) ಮಾನದಂಡಗಳನ್ನು ಅನುಸರಿಸಲು ಕಂಪನಿ ಸೂಕ್ತವಾದ ವ್ಯವಸ್ಥೆ ರೂಪಿಸಿದೆ ಮತ್ತು ಅಂತಹ ವ್ಯವಸ್ಥೆಗಳು ಸಮರ್ಪಕವಾಗಿದೆ ಮತ್ತು ಪರಿಣಾಮಕಾರಿಯಾಗಿ ಕಾರ್ಯಾಚರಿಸುತ್ತಿದೆ.

## 29. ಹಣಕಾಸಿನ ವಿವರಣ ಪಟ್ಟಿಗಳ ನಿರೂಪಣೆ

ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ IIIರ ವಿಭಾಗ(ii)ರ ಅನ್ವಯ ಕಂಪನಿಯ 31.03.2023ಕ್ಕೆ ಕೊನೆಗೊಂಡ ವರ್ಷದ ಹಣಕಾಸಿನ ವಿವರಣಾ ಪಟ್ಟಿಗಳನ್ನು ಪ್ರಕಟಿಸಲಾಗಿದೆ.

## 30. ಭಾರತೀಯ ಲೆಕ್ಕ ನಿರ್ವಹಣೆ ಮಾನದಂಡಗಳು, 2015

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 133, ಕಂಪನಿಗಳ (ಭಾರತೀಯ ಲೆಕ್ಕನಿರ್ವಹಣೆ ಮಾನದಂಡಗಳು) ನಿಯಮಗಳು 2015 ಮತ್ತು ಕಂಪನಿಗಳ ಕಾಯ್ದೆ, 2013ರ ಸಂಬಂಧಪಟ್ಟ ಉಪಬಂಧಗಳ ಅನ್ವಯ ಪ್ರಕಟಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಮಾನದಂಡಗಳ (IND AS) ಎಲ್ಲಾ ವಾಸ್ತವಿಕ ವಿಷಯಗಳನ್ನು ಇದರೊಡನೆ ಅನುಬಂಧಿಸಲಾಗಿರುವ ಹಣಕಾಸಿನ ವಿವರಣಾ ಪಟ್ಟಿಯು ಅನುಪಾಲನೆ ಮಾಡಿವೆ.

## 31. ವಾರ್ಷಿಕ ರಿಟರ್ನ್

ಕಂಪನಿಯು https://mysoresandal.karnataka.gov.in/ ವೆಬ್‌ಸೈಟ್ ಹೊಂದಿದೆ ಮತ್ತು ಈ ವೆಬ್‌ಸೈಟ್‌ನಲ್ಲಿ ಕಂಪನಿಯ ವಾರ್ಷಿಕ ಲೆಕ್ಕಪತ್ರ(ರಿಟರ್ನ್)ಗಳನ್ನು ಆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಲಿಂಕ್ ನೀಡಲಾಗಿದೆ.

## 32. ಇತರೆ ಪ್ರಕಟಣೆಗಳು

(i) ಕಂಪನಿಯು ಯಾವುದೇ ಸಹವರ್ತಿ/ಸಹಾಯಕ ಸಂಸ್ಥೆಗಳನ್ನು ಹೊಂದಿಲ್ಲದೇ ಇರುವುದರಿಂದ ಕಂಪನಿ ಸ್ವತಂತ್ರಹಣಕಾಸಿನ ವಿವರಣಾ ಪಟ್ಟಿ ಜೊತೆಗೆ ಕ್ರೋಡೀಕೃತ ಹಣಕಾಸಿನ ವಿವರಣಾ ಪಟ್ಟಿಯನ್ನು ಪ್ರಸ್ತುತಪಡಿಸಬೇಕಾದ ಅಗತ್ಯತೆಯಿರುವುದಿಲ್ಲ.

(ii) ಕಂಪನಿಯು ತನ್ನ ಆವರಣದಲ್ಲಿ ಸ್ವಚ್ಛ, ಸುರಕ್ಷಿತ ಮತ್ತು ವಿವಾದರಹಿತ ಹಸಿರು ಪರಿಸರ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾಗಿದೆ. ಸಸಿಗಳನ್ನು ನೆಡಲು, ಸುರಕ್ಷಿತ ಕುಡಿಯುವ ನೀರು ಒದಗಿಸಲು, ತ್ಯಾಜ್ಯ ನೀರು ಸಂಸ್ಕರಿಸಲು ಮತ್ತು ಸ್ವಚ್ಛ ನೈರ್ಮಲ್ಯ ವ್ಯವಸ್ಥೆ ಕಲ್ಪಿಸಲು ಕಂಪನಿಯು ಕೆಲವು ಉಪಕ್ರಮಗಳನ್ನು ಸಹ ಕೈಗೊಂಡಿದೆ.

## 33. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹರಿಸುವಿಕೆ) ಕಾಯ್ದೆ, 2013ಕ್ಕೆ ಸಂಬಂಧಪಟ್ಟಂತೆ ಪ್ರಕಟಣೆಗಳು

ಕಂಪನಿಯ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013ರ ಅನ್ವಯ ಅಗತ್ಯವಿರುವಂತೆ ಲೈಂಗಿಕ ದೌರ್ಜನ್ಯ ನಡೆಯದಂತೆ ತಡೆಯಲು ಕಂಪನಿಯು ನೀತಿಯನ್ನು ಹೊಂದಿದೆ. ನೌಕರರು ತಮಗೆ ಭದ್ರತೆಯಿರುವುದಾಗಿ ಪರಿಭಾವಿಸಿಕೊಳ್ಳುವಂತೆ ಸುರಕ್ಷಿತ ಕಾರ್ಯನಿರ್ವಹಣಾ ಪರಿಸರ ರೂಪಿಸುವ ಧ್ಯೇಯದೊಡನೆ ಕೆಲಸದ ಸ್ಥಳದಲ್ಲಿ ನೌಕರರುಗಳಿಗೆ ರಕ್ಷಣೆ ಒದಗಿಸುವ ಮತ್ತು ಲೈಂಗಿಕ ದೌರ್ಜನ್ಯ ನಡೆಯದಂತೆ ತಡೆಯುವುದು ಮತ್ತು ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಮತ್ತು ಇದಕ್ಕೆ ಅನುರೂಪವಾಗಿರುವ ಅಥವಾ ಅನುಷಂಗಿಕವಾಗಿರುವ ವಿಚಾರಗಳ ಬಗೆಗಿನ ದೂರುಗಳನ್ನು ಪರಿಹರಿಸುವುದು

ಈ ನೀತಿಯ ಗುರಿಯಾಗಿರುವುದು. ಲೈಂಗಿಕ ದೌರ್ಜನ್ಯ ವಿಚಾರಗಳಿಗೆ ಸಂಬಂಧಿಸಿದಂತೆ ಬಂದಿರುವ ದೂರುಗಳನ್ನು ಪರಿಹರಿಸಲು ಆಂತರಿಕ ದೂರುಗಳ ಸಮಿತಿಯನ್ನು (ಐಸಿಸಿ) ರೂಪಿಸಲಾಗಿದೆ. ಎಲ್ಲಾ ನೌಕರರು (ಖಾಯಂ, ಗುತ್ತಿಗೆ, ತಾತ್ಕಾಲಿಕ, ತರಬೇತಿ ಪಡೆಯುತ್ತಿರುವವರು) ಸದರಿ ನೀತಿ ಅಡಿಯಲ್ಲಿ ಒಳಪಡುವರು.

ಸದರಿ ವರ್ಷದ ಅವಧಿಯಲ್ಲಿ ಸ್ವೀಕರಿಸಿರುವ ಮತ್ತು ಇತ್ಯರ್ಥಪಡಿಸಿರುವ ಲೈಂಗಿಕ ದೌರ್ಜನ್ಯ ದೂರುಗಳ ಸಾರಾಂಶ ಕೆಳಕಂಡಂತಿರುವುದು.

(ಎ) ವರ್ಷದ ಆರಂಭದಲ್ಲಿ ಇತ್ಯರ್ಥವಾಗದೆ ಉಳಿದಿರುವ ದೂರುಗಳ ಸಂಖ್ಯೆ – 00.

(ಬಿ) ವರ್ಷದ ಅವಧಿಯಲ್ಲಿ ಬಂದಿರುವ ದೂರುಗಳ ಸಂಖ್ಯೆ–00

(ಸಿ) ವರ್ಷದ ಅವಧಿಯಲ್ಲಿ ಇತ್ಯರ್ಥಪಡಿಸಿರುವ ದೂರುಗಳ ಸಂಖ್ಯೆ–00

(ಡಿ) ವರ್ಷದ ಕೊನೆಯಲ್ಲಿ ಹಾಗೆಯೇ ಉಳಿದಿರುವ ಪ್ರಕರಣಗಳ ಸಂಖ್ಯೆ–00

## 34. ಆರ್ಥಿಕ ವರ್ಷದ ಕೊನೆ ಮತ್ತು ನಿರ್ದೇಶಕರ ವರದಿ ದಿನಾಂಕದ ನಡುವೆ, ಕಂಪನಿಯ ಹಣಕಾಸಿನ ಪರಿಸ್ಥಿತಿಯ ಮೇಲೆ ಪರಿಣಾಮ ಉಂಟು ಮಾಡಿರುವ ದಂಡಗಳು/ಶಿಕ್ಷೆಗಳು/ಬದ್ಧತೆಗಳ ವಿವರಗಳು:

ಆರ್ಥಿಕ ವರ್ಷದ ಕೊನೆ ಮತ್ತು ನಿರ್ದೇಶಕರ ವರದಿ ದಿನಾಂಕದ ನಡುವೆ ಕಂಪನಿಯ ಹಣಕಾಸಿನ ಪರಿಸ್ಥಿತಿಯ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ದಂಡಗಳು/ಶಿಕ್ಷೆಗಳು/ಬದ್ಧತೆಗಳು ಇರುವುದಿಲ್ಲ.

## 35. ನೌಕರರು ಮತ್ತು ಕಾರ್ಮಿಕ ಕಲ್ಯಾಣ

### (i) ಒಟ್ಟು ನೌಕರರು:

31/03/2023ರಂತೆ ಒಟ್ಟು ನೌಕರರ ಸಂಖ್ಯೆ (ಹೊರಗುತ್ತಿಗೆ/ಗುತ್ತಿಗೆ ನೌಕರರು ಸೇರಿದಂತೆ) ಈ ಕೆಳಗೆ ನೀಡಲಾಗಿದೆ.

| ವಿವರಗಳು | ಒಟ್ಟು ಬಲ |
|---|---|
| ಬೆಂಗಳೂರು ಘಟಕ | 1,169 |
| ಎಸ್‌ಒಡಿ ಮೈಸೂರು | 179 |
| ಎಸ್‌ಒಡಿ ಶಿವಮೊಗ್ಗ | 17 |
| ಮಾರುಕಟ್ಟೆ ವಿಭಾಗ (ಬೆಂಗಳೂರು, ಚೆನ್ನೈ, ಹೈದರಾಬಾದ್, ಮುಂಬೈ, ಕೊಲ್ಕೊತ್ತಾ ಮತ್ತು ನವದೆಹಲಿ) | 496 |
| **ಒಟ್ಟು** | **1,861** |

### (ii) ಸಿಬ್ಬಂದಿ–ಆಡಳಿತ ಸಂಬಂಧ :

ಪರಾಮರ್ಶೆಯ ವರ್ಷದ ಅವಧಿಯಡಿಯಲ್ಲಿ ಸಿಬ್ಬಂದಿ–ಆಡಳಿತ ನಡುವಿನ ಸಂಬಂಧ ಸೌಹಾರ್ದಯುತವಾಗಿತ್ತು ಮತ್ತು ಸಾಮರಸ್ಯದಿಂದ ಕೂಡಿತ್ತು.

### (iii) ಕಾರ್ಮಿಕ ಕಲ್ಯಾಣ:

ಕಲೆ ಮತ್ತು ಸಂಸ್ಕೃತಿಗೆ ಸೇರಿದ ಇತರೇ ಎಲ್ಲ ಚಟುವಟಿಕೆಗಳಲ್ಲಿ ಕೆಲಸಗಾರರು ಮತ್ತು ಇತರೇ ಸಿಬ್ಬಂದಿ ಕ್ರಿಯಾಶೀಲವಾಗಿ ಭಾಗವಹಿಸಿದ್ದರು. ಕೆಲಸಗಾರರನ್ನು ಉತ್ತೇಜಿಸುವುದಕ್ಕಾಗಿ ಮೇಲ್ಕಾಣಿಸಿದ್ದನ್ನು ಹೊರತಾಗಿ ಇತರೇ ಕೆಲ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿತ್ತು. ಊಟದ ಕೋಣೆಗಳು, ಆಶ್ರಯ ಕೊಠಡಿಗಳು, ವಿಶ್ರಾಂತಿ ಕೋಣೆಗಳು ಹಾಗೂ ಶಿಶು ಕೇಂದ್ರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗಿತ್ತು. ಮತ್ತು ನೈರ್ಮಲ್ಯ ಮತ್ತು ಸ್ವಚ್ಛತೆಗೆ ಹೆಚ್ಚಿನ ಗಮನ ನೀಡಲಾಗಿತ್ತು.

### (iv) ಸೂಚನಾ ಪತ್ರ (ನೋಟೀಸು)ಗಳ ಪ್ರದರ್ಶನ :

ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲೂ ಸಾಕಷ್ಟು ಸೂಚನಾಪತ್ರಗಳನ್ನು ಕಾರ್ಖಾನೆಯ ಆವರಣದಲ್ಲಿ ಪ್ರದರ್ಶಿಸಲಾಗಿತ್ತು. ಸುರಕ್ಷತಾ ಫಲಕಗಳು, ಸಂಕೇತ ಫಲಕಗಳು (ಸೈನ್ ಬೋರ್ಡ್ಸ್) ಹಾಗೂ ಇತರೇ ಸೂಚನೆಗಳನ್ನು ಕೆಲಸದ ಪ್ರದೇಶದಲ್ಲಿ ಕೆಲಸಗಾರರ ಅನುಕೂಲಕ್ಕಾಗಿ ಪ್ರದರ್ಶಿಸಲಾಗಿತ್ತು.

### (v) ಕೈಗಾರಿಕಾ ಬಾಂಧವ್ಯಗಳು:

ಉದ್ಯೋಗದಾತರು (ಕಂಪನಿ) ಮತ್ತು ಉದ್ಯೋಗಿ/ನೌಕರರ ನಡುವಿನ ಸಂಬಂಧವು ಎಲ್ಲ ಸಂಸ್ಥೆಗಳ ಅಡಿಪಾಯವಾಗಿರುತ್ತದೆ ಮತ್ತು ನಿಮ್ಮ ಕಂಪನಿಯಲ್ಲಿ ವಿಶ್ವಾಸಯುತ ಸಂಬಂಧವು ಈ ಎಲ್ಲ ವರ್ಷಗಳಲ್ಲೂ ಮುಂದುವರೆದಿದೆ. ಹಣಕಾಸು ವರ್ಷ 2022–23ದಲ್ಲೂ ನೌಕರರು ಮತ್ತು ಆಡಳಿತದ ನಡುವಿನ ಸಂಬಂಧ ಸೌಹಾರ್ದಯುತವಾಗಿತ್ತು ಮತ್ತು ಸಾಮರಸ್ಯದಿಂದ ಕೂಡಿತ್ತು. ಕಾರ್ಮಿಕರ ಕಲ್ಯಾಣದ ವಿಚಾರಗಳಲ್ಲಿ ಕೆಎಸ್‌ಡಿಎಲ್ ನೌಕರರ ಸಂಘ ಮತ್ತು ಕೆಎಸ್‌ಡಿಎಲ್ ನೌಕರರು ಅಧಿಕಾರಿಗಳ ಸಂಘದ ನಡುವೆ ಕಾರ್ಮಿಕ ಕಲ್ಯಾಣದ ವಿಚಾರದಲ್ಲಿ ನಿರಂತರ ಸಂವಹನಗಳನ್ನು ನಡೆಸಲಾಗಿತ್ತು. ನಂಬಿಕೆ ಮತ್ತು ಪರಸ್ಪರ ಸಹಕಾರದ ವಾತಾವರಣ ನಿರ್ಮಾಣ ಮಾಡುವಲ್ಲಿ ಇದು ಸಹಕಾರಿಯಾಗಿ ಪ್ರೇರಣಾದಾಯಕ ಕಾರ್ಯಪಡೆ ಮತ್ತು ಸಾಧನೆಯಲ್ಲಿ ಮುಂದುವರಿದ ಪ್ರಗತಿಗೆ ಕಾರಣವಾಯಿತು.

**36. ಕೃತಜ್ಞತೆ ಸಲ್ಲಿಕೆ:**

ಕರ್ನಾಟಕ ರಾಜ್ಯ ಸರ್ಕಾರ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯೂ ಸೇರಿದಂತೆ ಸರ್ಕಾರದ ಇತರೆ ವಿವಿಧ ಪ್ರಾಧಿಕಾರಿಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಮತ್ತು ಕಂಪನಿಯ ಷೇರುದಾರರಿಂದ ದೊರಕಿರುವ ಬೆಂಬಲ ಮತ್ತು ಸಹಕಾರಕ್ಕಾಗಿ ನಿಮ್ಮ ನಿರ್ದೇಶಕರು ಕೃತಜ್ಞತಾಪೂರ್ವಕ ಅಭಿನಂದನೆ ಸಲ್ಲಿಸುವರು.

ಕಂಪನಿಯ ಉತ್ಪನ್ನಗಳು ಮತ್ತು ಸೇವೆಗಳ ಬಗ್ಗೆ ವಿಶ್ವಾಸ ಹೊಂದಿರುವುದಕ್ಕೆ ಮತ್ತು ತಮ್ಮ ನೆರವು ನೀಡಿರುವುದಕ್ಕೆ ಭಾರತದಲ್ಲಿನ ಹಾಗೂ ವಿದೇಶದಲ್ಲಿನ ತನ್ನ ಎಲ್ಲಾ ಅಮೂಲ್ಯ ಗ್ರಾಹಕರುಗಳಿಗೂ ಸಹ ನಿಮ್ಮ ಕಂಪನಿ ವಂದನೆ ಸಲ್ಲಿಸ ಬಯಸುತ್ತದೆ. ಎಲ್ಲಾ ಸರಬರಾಜುದಾರರು, ಗುತ್ತಿಗೆದಾರರು ಮತ್ತು ಇನ್ನಿತರೆ ವ್ಯಾಪಾರಸ್ಥರಿಗೂ ಅವರು ನೀಡಿದ ಅವಿರತ ಸಹಕಾರ ಮತ್ತು ಬೆಂಬಲಕ್ಕಾಗಿ ನಿಮ್ಮ ಕಂಪನಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತದೆ.

ಅವಿರತ ಪರಿಶ್ರಮ, ಅನುಪಮ ಕೊಡುಗೆ ಮತ್ತು ಅಮೂಲ್ಯ ಸೇವೆ ಸಲ್ಲಿಸಿದ್ದಕ್ಕಾಗಿ ಕಂಪನಿಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಕಾರ್ಮಿಕರು ಮತ್ತು ಹಂತದ ನೌಕರರುಗಳನ್ನು ನಿಮ್ಮ ಕಂಪನಿ ನಿರ್ದೇಶಕರು ಶ್ಲಾಘಿಸುವರು.

**ಮಂಡಳಿಯ ಆದೇಶದ ಮೇರೆಗೆ**
**ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್**

| | |
|---|---|
| **ಸಹಿ/–** | **ಸಹಿ/–** |
| **ಎಂ.ಬಿ.ಪಾಟೀಲ್** | **ಪ್ರಶಾಂತ್, ಪಿಕೆಎಂ** |
| ಅಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು |
| ಡಿಐಎನ್: 02558869 | ಡಿಐಎನ್: 10293189 |

ದಿನಾಂಕ: 25/11/2023
ಸ್ಥಳ: ಬೆಂಗಳೂರು

## ಅನುಬಂಧ – I
## 2022–23ನೇ ಸಾಲಿನ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಚಟುವಟಿಕೆಗಳ ವಾರ್ಷಿಕ ವರದಿ
## (ಕಂಪನಿ ಕಾಯ್ದೆ 2013ರ ಸೆಕ್ಷನ್ 135 ("ಕಾಯ್ದೆ") ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಅನುಸಾರವಾಗಿ)

**1. ಕಂಪನಿಯ ಸಿಎಸ್‌ಆರ್ ನೀತಿಯ ಸಂಕ್ಷಿಪ್ತ ರೂಪುರೇಖೆಗಳು:**

ಕೆಎಸ್&ಡಿಎಲ್‌ಗೆ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಎನ್ನುವುದು ಕಂಪನಿಯ ಸಾಮರ್ಥ್ಯಗಳು, ಅದರ ಕಾರ್ಯಾಚರಣೆ ನಡೆಸುವ ಪ್ರದೇಶಗಳಲ್ಲಿ ಮತ್ತು ಅದರ ಸುತ್ತಮುತ್ತಲಿನ ಸಮುದಾಯಗಳ ನಿರೀಕ್ಷೆಗಳು ಮತ್ತು ಅದು ಎಲ್ಲಿ ಇರುವುದೋ ಅಲ್ಲಿನ ಸ್ಥಳಗಳನ್ನು ಗಣನೆಗೆ ತೆಗೆದುಕೊಳ್ಳುವ ಯೋಜಿತ ಚಟುವಟಿಕೆಯಾಗಿದ್ದು, ದೀರ್ಘಾವಧಿಯಲ್ಲಿ ಸಕಾರಾತ್ಮಕ ಪರಿಣಾಮ ಬೀರುವಂತದ್ದಾಗಿರಬೇಕು. ಉದ್ಯಮವು ಕಾರ್ಯನಿರ್ವಹಿಸುತ್ತಿರುವ ಪ್ರದೇಶಗಳಲ್ಲಿ ಅಥವಾ ಅದರ ಹಿತಾಸಕ್ತಿಗಳು ನೆಲೆಗೊಂಡಿರುವ ಪ್ರದೇಶಗಳಲ್ಲಿ ಸ್ಥಳೀಯ ಸಮುದಾಯಗಳು ಮತ್ತು ಸಮಾಜದ ಆರ್ಥಿಕ ಲಾಭ, ಸಾಮಾಜಿಕ ಸ್ವಾಸ್ಥ್ಯವನ್ನು ಸಮತೋಲನಗೊಳಿಸುವ ಒಟ್ಟಾರೆ ಸುಸ್ಥಿರ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಸಕ್ರಿಯವಾಗಿ ಕೊಡುಗೆ ನೀಡುವುದು ಮುಖ್ಯ ಉದ್ದೇಶವಾಗಿದೆ.

ನೀತಿಯು ಕಂಪನಿಯ ವೆಬ್‌ಸೈಟ್ https://mysoresandal.karnataka.gov.in/. ನಲ್ಲಿ ಲಭ್ಯವಿದೆ. ಕಂಪನಿಯ ಸಿಎಸ್‌ಆರ್ ನೀತಿಯು ಕಂಪನಿ ಕಾಯ್ದೆ 2013ರ ಷೆಡ್ಯೂಲ್ VII ರ ಸೆಕ್ಷನ್ 135ರೊಂದಿಗೆ ಹೊಂದಿಕೊಂಡಿರುವ ದೃಷ್ಟಿಕೋನ, ಗುರಿ, ಆದ್ಯತೆ ವಲಯಗಳು ಮತ್ತು ಪ್ರಮುಖ ಅಗತ್ಯತೆಗಳನ್ನು ನಿರೂಪಿಸುವುದು.

**2. ಸಿಎಸ್‌ಆರ್ ಸಮಿತಿಯ ಸಂರಚನೆ:**

| ಕ್ರ. ಸಂ. | ನಿರ್ದೇಶಕರ ಹೆಸರು | ಹುದ್ದೆ/ ನಿರ್ದೇಶಕರ ಸ್ವರೂಪ | ವರ್ಷದಲ್ಲಿ ನಡೆದ ಸಿಎಸ್‌ಆರ್ ಸಮಿತಿಗಳ ಸಭೆಗಳ ಸಂಖ್ಯೆ | ವರ್ಷದ ಅವಧಿಯಲ್ಲಿ ನಡೆದ ಸಿಎಸ್‌ಆರ್ ಸಮಿತಿಗಳ ಸಭೆಗಳಿಗೆ ಹಾಜರಾದ ಸಂಖ್ಯೆ |
|---|---|---|---|---|
| 1. | ಡಾ. ಮಹೇಶ್ ಮಹದೇವಯ್ಯ, ಐ.ಎ.ಎಸ್ | ಅಧ್ಯಕ್ಷರು | 03 | 03 |
| 2 | ಶ್ರೀ ಸಿದ್ದಿಕ್ ಪಾಶಾ | ಸದಸ್ಯ | 04 | 04 |
| 3 | ಶ್ರೀ ನಿತೀಶ್ ಕೆ ಐಎಎಸ್ | ಸದಸ್ಯ | 03 | 03 |

3. ಸಿಎಸ್‌ಆರ್ ಸಮಿತಿ ಸಂರಚನೆ, ನೀತಿ ಹಾಗೂ ಮಂಡಳಿಯು ಅನುಮೋದಿಸಿರುವ ಸಿಎಸ್‌ಆರ್ ಯೋಜನೆಗಳನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ ವೆಬ್ ಲಿಂಕ್‌ನ್ನು ಒದಗಿಸಿ. **https://mysoresandal.karnataka.gov.in/.**

4. ಕಂಪನಿ ನಿಯಮಗಳು 2014 ರ ನಿಯಮ 8ರ ಉಪನಿಯಮ (3) (ಕಂಪನಿಯ ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿ ನೀತಿ)ದ ಅನ್ವಯ ಸಿಎಸ್‌ಆರ್ ಯೋಜನೆಗಳ ಪರಿಣಾಮಗಳ ಮೌಲ್ಯಮಾಪನದ ವಿವರಗಳನ್ನು ಒದಗಿಸಿ, ಅನ್ವಯವಾಗುವುದಿದ್ದಲ್ಲಿ (ವರದಿ ಲಗತ್ತಿಸಿ)

**ಕಂಪನಿಯ (ಸಾಮಾಜಿಕ ಸಾಂಸ್ಥಿಕ ಜವಾಬ್ದಾರಿ ನೀತಿ) ತಿದ್ದುಪಡಿಗೊಂಡ ನಿಯಮಗಳು 2021 ರ ಅನ್ವಯ ಸಿಎಸ್‌ಆರ್ ಯೋಜನೆಗಳ ಪರಿಣಾಮದ ಮೌಲ್ಯಮಾಪನ ನಡೆಸುವುದು ಕಂಪನಿಗೆ ಅನ್ವಯವಾಗುವುದಿಲ್ಲ.**

5.

| | | |
|---|---|---|
| ಎ. | ಸೆಕ್ಷನ್ 135 (5) ಪ್ರಕಾರ ಕಂಪನಿಯ ಸರಾಸರಿ ನಿವ್ವಳ ಲಾಭ | **1,97,41,65,179.43** |
| ಬಿ. | ಸೆಕ್ಷನ್ 135 (5) ಪ್ರಕಾರ ಕಂಪನಿಯ ಸರಾಸರಿ ನಿವ್ವಳ ಲಾಭದ ಎರಡು ಪ್ರತಿಶತ | **3,94,83,303.59** |
| ಸಿ. | ಸಿಎಸ್‌ಆರ್ ಯೋಜನೆಗಳು ಅಥವಾ ಹಿಂದಿನ ಆರ್ಥಿಕ ವರ್ಷಗಳ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಉಂಟಾಗುವ ಹೆಚ್ಚುವರಿ | **ಅನ್ವಯಿಸುವುದಿಲ್ಲ** |
| ಡಿ. | ಹಣಕಾಸು ವರ್ಷಕ್ಕೆ ಪಾವತಿಸಲು ಅಗತ್ಯವಿರುವ ಮೊತ್ತ, ಯಾವುದಾದರೂ ಇದ್ದಲ್ಲಿ | **ಅನ್ವಯಿಸುವುದಿಲ್ಲ** |
| ಇ. | ಹಣಕಾಸು ವರ್ಷಕ್ಕೆ ಒಟ್ಟು ಸಿಎಸ್‌ಆರ್ ಬಾಧ್ಯತೆ | **3,94,83,303.59** |

6. (ಎ) ಸಿಎಸ್‌ಆರ್ ಯೋಜನೆಗಳ ಮೇಲೆ ಖರ್ಚು ಮಾಡಲಾದ (ಹಾಲಿ ನಡೆಯುತ್ತಿರುವ ಯೋಜನೆಗಳು ಮತ್ತು ಹಾಲಿ ನಡೆಯುತ್ತಿರುವ ಯೋಜನೆಗಳ ಹೊರತಾಗಿ) – **ರೂ. 3,94,83,303.59/–**

(ಬಿ) ಆಡಳಿತಾತ್ಮಕ ಲೆಕ್ಕ ಶೀರ್ಷಿಕೆಯಲ್ಲಿ ಮಾಡಲಾದ ವೆಚ್ಚ – **ಇಲ್ಲ**

(ಸಿ) ಪರಿಣಾಮ ಮೌಲ್ಯಮಾಪನಕ್ಕೆ ಮಾಡಲಾದ ವೆಚ್ಚ, ಯಾವುದಾದರೂ ಇದ್ದಲ್ಲಿ – **ಇಲ್ಲ**

(ಡಿ) ಹಣಕಾಸು ವರ್ಷದಲ್ಲಿ ಮಾಡಲಾದ ಒಟ್ಟು ವೆಚ್ಚ [(a)+(b)+(c)]- ರೂ. **3,94,83,303.59/–**

(ಇ) ಹಣಕಾಸು ವರ್ಷದಲ್ಲಿ ವೆಚ್ಚ ಮಾಡಲಾದ ಅಥವಾ ಮಾಡದೇ ಇರುವ ಸಿಎಸ್‌ಆರ್ ಮೊತ್ತ

| ಹಣಕಾಸು ವರ್ಷದಲ್ಲಿ ಖರ್ಚು ಮಾಡಿದ ಒಟ್ಟು ಮೊತ್ತ (ರೂಗಳಲ್ಲಿ) | ಖರ್ಚು ಮಾಡದ ಮೊತ್ತ (ರೂಗಳಲ್ಲಿ) | | | | |
|---|---|---|---|---|---|
| | ಸೆಕ್ಷನ್ 135(6)ರ ಪ್ರಕಾರ ಖರ್ಚು ಮಾಡದ ಸಿಎಸ್‌ಆರ್ ಖಾತೆಗೆ ವರ್ಗಾವಣೆ ಮಾಡಿದ ಒಟ್ಟು ಮೊತ್ತ | | ಸೆಕ್ಷನ್ 135 (5)ರ ಷೆಡ್ಯೂಲ್ VII ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಫಂಡ್‌ಗೆ ವರ್ಗಾಯಿಸಿದ ಮೊತ್ತ | | |
| | ಮೊತ್ತ | ವರ್ಗಾವಣೆ ಮಾಡಿದ ದಿನಾಂಕ | ಫಂಡ್‌ನ ಹೆಸರು | ಮೊತ್ತ (ರೂ.ಗಳಲ್ಲಿ) | ವರ್ಗಾವಣೆ ಮಾಡಿದ ದಿನಾಂಕ |
| 3,94,83,303.59/– | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

ಕಂಪನಿಯು ಸಿಎಸ್‌ಆರ್ ಮೊತ್ತವನ್ನು ತನ್ನ ಅನುಷ್ಠಾನ ಏಜೆನ್ಸಿ ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ಸಾಂಸ್ಥಿಕ ಜವಾಬ್ದಾರಿ ಟ್ರಸ್ಟ್ ಮೂಲಕ ಖರ್ಚು ಮಾಡಿದೆ ಮತ್ತು ಸಿಎಸ್‌ಆರ್ ಮೊತ್ತವನ್ನು ಸಿಎಸ್‌ಆರ್ ಟ್ರಸ್ಟ್‌ಗೆ ವರ್ಗಾಯಿಸಲಾಗಿದೆ ಮತ್ತು ಅದರಂತೆ, ಮೊತ್ತವನ್ನು ಟ್ರಸ್ಟ್ ಖರ್ಚು ಮಾಡಿದೆ.

ಎಫ್) ಹೆಚ್ಚುವರಿ ಮೊತ್ತ, ಯಾವುದಾದರೂ ಇದ್ದಲ್ಲಿ,

| ಕ್ರ. ಸಂ | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| i | ಸೆಕ್ಷನ್ 135 (5) ಪ್ರಕಾರ ಕಂಪನಿಯ ನಿವ್ವಳ ಲಾಭದ ಎರಡು ಪ್ರತಿಶತ | ಇಲ್ಲ |
| ii | ಹಣಕಾಸು ವರ್ಷಕ್ಕೆ ಮಾಡಿದ ಒಟ್ಟು ವೆಚ್ಚ | ಇಲ್ಲ |
| iii | ಹಣಕಾಸು ವರ್ಷಕ್ಕೆ ಮಾಡಿದ ಹೆಚ್ಚುವರಿ ವೆಚ್ಚ [(ii)-(i)] | ಇಲ್ಲ |
| iv | ಸಿಎಸ್‌ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಉಂಟಾಗಿರುವ ಹೆಚ್ಚುವರಿ ಮೊತ್ತ, ಯಾವುದಾದರೂ ಇದ್ದಲ್ಲಿ | ಇಲ್ಲ |
| v | ಮುಂದಿನ ಹಣಕಾಸು ವರ್ಷಕ್ಕೆ ಸಾಲದ ಪರಸ್ಪರ ವಿತ್ತೀಯ ಬಾಧ್ಯತೆಗಳ ನಿಭಾವಣೆ (ಸೆಟ್‌ಆಫ್)ಗೆ ಲಭ್ಯವಿರುವ ಮೊತ್ತ [(iii)-(iv)] | ಇಲ್ಲ |

7. ಆರ್ಥಿಕ ವರ್ಷಕ್ಕೆ ಹಿಂದಿನ ಮೂರು ವರ್ಷಗಳಿಗೆ ಖರ್ಚು ಮಾಡದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಮೊತ್ತ– ಇಲ್ಲ

**ಮಂಡಳಿಯ ಆದೇಶದ ಮೇರೆಗೆ**
**ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್**

**ಸಹಿ/–**
**ಎಂ.ಬಿ.ಪಾಟೀಲ್**
ಅಧ್ಯಕ್ಷರು
ಡಿಐಎನ್: 02558869

**ಸಹಿ/–**
**ಪ್ರಶಾಂತ್, ಪಿಕೆಎಂ**
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 10293189

ದಿನಾಂಕ: 25/11/2023
ಸ್ಥಳ: ಬೆಂಗಳೂರು

**ನಮೂನೆ ಸಂಖ್ಯೆ. ಎಂಆರ್–3**

[ಕಂಪನಿಗಳ ಅಧಿನಿಯಮ, 2013 ರ ಸೆಕ್ಷನ್ 204(1) ಮತ್ತು
ಕಂಪನಿಗಳ ನಿಯಮ ನಂ.9
(ನೇಮಕಾತಿ ಮತ್ತು ಸಂಭಾವನೆ ಸಿಬ್ಬಂದಿ) ನಿಯಮಗಳು,2014]
ಅಧಿನಿಯಮ

**ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿ**
ಹಣಕಾಸು ವರ್ಷ 2022–23ರ ಅಂತ್ಯಕ್ಕೆ

ಇವರಿಗೆ,

ಸದಸ್ಯರು
ಮೆ॥ ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್
ಅಂಚೆ ಪೆಟ್ಟಿಗೆ ಸಂಖ್ಯೆ.5531,
ಪುಣೆ ಹೆದ್ದಾರಿ, ಬೆಂಗಳೂರು – 560055

**ಮೆ॥ ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್,** (ಇನ್ನು ಮುಂದೆ ಇದನ್ನು ಕಂಪನಿ ಎಂದು ಕರೆಯಲಾಗುತ್ತದೆ) ನಿಂದ ಅನ್ವಯವಾಗುವ ಶಾಸನಬದ್ಧ ನಿಬಂಧನೆಗಳ ಅನುಸರಣೆ ಮತ್ತು ಉತ್ತಮ ಸಾಂಸ್ಥಿಕ (ಕಾರ್ಪೊರೇಟ್) ಅಭ್ಯಾಸಗಳ ಅನುಸರಣೆಯ ಕಾರ್ಯದರ್ಶೀಯ (ಸೆಕ್ರೆಟೇರಿಯಲ್) ಲೆಕ್ಕಪರಿಶೋಧನೆಯನ್ನು ನಾವು ನಡೆಸಿದ್ದೇವೆ. ಕಾರ್ಪೊರೇಟ್ ನಡವಳಿಕೆಗಳು/ಶಾಸನಬದ್ಧ ಅನುಪಾಲನೆಗಳನ್ನು ಮೌಲ್ಯಮಾಪನ ಮಾಡಲು ಮತ್ತು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಮಗೆ ಸಮಂಜಸವಾದ ಆಧಾರವನ್ನು ಒದಗಿಸುವ ರೀತಿಯಲ್ಲಿ ಕಾರ್ಯದರ್ಶಿ ಲೆಕ್ಕಪರಿಶೋಧನೆ ನಡೆಸಲಾಯಿತು.

ಕಂಪನಿಯ ಪುಸ್ತಕಗಳು, ದಾಖಲೆಗಳು, ನಡವಳಿ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಿದ ರಿಟರ್ನ್‌ಗಳನ್ನು ಮತ್ತು ಕಂಪನಿಯು ನಿರ್ವಹಿಸುವ ಇತರ ದಾಖಲೆಗಳ ನಮ್ಮ ಪರಿಶೀಲನೆಯ ಆಧಾರದ ಮೇಲೆ ಮತ್ತು ಕಂಪನಿಯು, ಅದರ ಅಧಿಕಾರಿಗಳು, ಏಜೆಂಟರು ಮತ್ತು ಅಧಿಕೃತ ಪ್ರತಿನಿಧಿಗಳು ಕಾರ್ಯದರ್ಶಿಯ ಲೆಕ್ಕಪರಿಶೋಧನೆ ವೇಳೆ ಒದಗಿಸಿದ ಮಾಹಿತಿಯ ಆಧಾರದ ಮೇಲೆ, ನಾವು ಈ ಮೂಲಕ ವರದಿ ಮಾಡುವುದೇನೆಂದರೆ, ನಮ್ಮ ಅಭಿಪ್ರಾಯದಂತೆ, ಕಂಪನಿಯು 31ನೇ ಮಾರ್ಚ್ 2023 ರಂದು ಕೊನೆಗೊಂಡ ಆರ್ಥಿಕ ವರ್ಷವನ್ನು ಒಳಗೊಂಡ ಲೆಕ್ಕಪರಿಶೋಧನೆ ಅವಧಿಯಲ್ಲಿ ಇಲ್ಲಿ ಪಟ್ಟಿ ಮಾಡಲಾದ ಶಾಸನಬದ್ಧ ನಿಬಂಧನೆಗಳನ್ನು ಅನುಸರಿಸಿದೆ ಮತ್ತು ಕಂಪನಿಯು ಸರಿಯಾದ ಮಂಡಳಿ–ಪ್ರಕ್ರಿಯೆಗಳು ಮತ್ತು ಅನುಪಾಲನಾ–ವಿಧಾನವನ್ನು ಹೊಂದಿದ್ದು. ವಿಧಾನದಲ್ಲಿ, ಮುಂದೆ ಮಾಡಿದ ಅವರದಿಗೆ ಒಳಪಟ್ಟಿರುತ್ತದೆ.

31 ಮಾರ್ಚ್ 2023 ರಂದು ಕೊನೆಯಾದ ಹಣಕಾಸು ವರ್ಷಕ್ಕೆ **ಮೆ॥ ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್** (**"**ಕಂಪನಿ**"**) ಯ ಪುಸ್ತಕಗಳು, ದಾಖಲೆಗಳು, ನಡವಳಿ ಪುಸ್ತಕಗಳು, ನಮೂನೆಗಳು, ಮತ್ತು ಸಲ್ಲಿಸಿದ ರಿಟರ್ನ್‌ಗಳು ಮತ್ತು ನಿರ್ವಹಿಸಿದ ಇತರ ದಾಖಲೆಗಳನ್ನು ಈ ಕೆಳಕಂಡ ನಿಬಂಧನೆಗಳ ಪ್ರಕಾರ ನಾವು ಪರಿಶೀಲಿಸಿದ್ದೇವೆ:

(i) ಕಂಪನಿಗಳ ಅಧಿನಿಯಮ, 2013 (ಕಾಯ್ದೆ) ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು;

(ii) ಸೆಕ್ಯುರಿಟೀಸ್ ಕಾಂಟ್ರಾಕ್ಟ್ಸ್ (ನಿಯಂತ್ರಣ) ಕಾಯ್ದೆ, 1956 (`SCRA') ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು;

(iii) ಠೇವಣಿಗಳ ಕಾಯ್ದೆ, 1996 ಮತ್ತು ನಿಯಮಗಳು ಮತ್ತು ಅಡಿಯಲ್ಲಿ ರಚಿಸಲಾದ ಉಪ–ನಿಯಮಗಳು;

(iv) ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ, 1999 ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳು ಮತ್ತು ನಿಬಂಧನೆಗಳು ವಿದೇಶಿ ನೇರ ಬಂಡವಾಳ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಮತ್ತು ಬಾಹ್ಯ ವಾಣಿಜ್ಯ ಸಾಲಗಳ ವ್ಯಾಪ್ತಿಯಡಿಯಲ್ಲಿ ಬರುವ ನಿಯಮಗಳ ಮಟ್ಟಿಗೆ;

(v) ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ (ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) ಅಧಿನಿಯಮ, 1992 ('ಸೆಬಿ ಆ್ಯಕ್ಟ್') ಅಡಿಯಲ್ಲಿ ಸೂಚಿಸಲಾದ ಕೆಳಗಿನ ನಿಯಮಗಳು ಮತ್ತು ಮಾರ್ಗಸೂಚಿಗಳು:–

ಎ) ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ (ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) (ಷೇರುಗಳ ಗಣನೀಯ ಸ್ವಾಧೀನ ಮತ್ತು ವಿಲೇವಾರಿಗಳು) ನಿಬಂಧನೆಗಳು, 2011;

(ಬಿ) ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ (ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ)(ಆಂತರಿಕ ವಹಿವಾಟಿನ ನಿಷೇಧ) ನಿಯಮಗಳು, 1992;

(ಸಿ) ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ(ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) (ಬಂಡವಾಳ ವಿಷಯ ಮತ್ತು ಪ್ರಕಟಣೆಯ ಅವಶ್ಯಕತೆಗಳು) ನಿಬಂಧನೆಗಳು, 2009;

(ಡಿ) ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ(ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) (ನೌಕರರ ಷೇರು ಅವಕಾಶ ಯೋಜನೆ ಮತ್ತು ನೌಕರರ ಷೇರು ಖರೀದಿ ಯೋಜನೆ) ಮಾರ್ಗಸೂಚಿಗಳು, 1999;

(ಇ) ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ (ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ)(ಸಾಲ ಭದ್ರತೆಗಳ ವಿತರಣೆ ಮತ್ತು ಪಟ್ಟಿ ಮಾಡುವುದು) ನಿಬಂಧನೆಗಳು, 2008;

(ಎಫ್) ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ (ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) (ಹಂಚಿಕೆ ಇಶ್ಯೂ ಮತ್ತು ಷೇರು ವರ್ಗಾವಣೆ ಏಜೆಂಟ್ಸ್‌ಗಳಿಗೆ ರಿಜಿಸ್ಟ್ರಾರ್‌ಗಳು) ನಿಬಂಧನೆಗಳು, 1993 ಕಂಪನಿಗಳ ಅಧಿನಿಯಮ ಮತ್ತು ಗ್ರಾಹಕರೊಂದಿಗೆ ವ್ಯವಹರಿಸುವ ಬಗ್ಗೆ;

(ಜಿ) ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ (ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) (ಈಕ್ವಿಟಿ ಷೇರುಗಳ ಪಟ್ಟಿಯಿಂದ ತೆಗೆದುಹಾಕುವಿಕೆ) ನಿಯಮಗಳು, 2009; ಮತ್ತು

(ಹೆಚ್) ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ(ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) (ಸೆಕ್ಯೂರಿಟಿಗಳ ಮರು ಖರೀದಿ (ಬೈಬ್ಯಾಕ್ ಆಫ್ ಸೆಕ್ಯುರಿಟೀಸ್) ನಿಯಮಗಳು, 1998;

(vi) ಕಂಪನಿಯ ನಿರ್ವಹಣೆಯು ಈ ಕೆಳಗಿನ ಕಾನೂನುಗಳು/ ನಿಯಮಗಳು / ನೀತಿಗಳು ನಿರ್ದಿಷ್ಟವಾಗಿ ಅವುಗಳಿಗೆ ಅನ್ವಯಿಸುತ್ತವೆ ಎಂದು ಗುರುತಿಸಲಾಗಿದೆ ಮತ್ತು ದೃಢಪಡಿಸಿದೆ:

1. ಔಷಧಗಳು ಮತ್ತು ಸೌಂದರ್ಯವರ್ಧಕಗಳ ಕಾಯ್ದೆ, 1940
2. ಹಕ್ಕುಸ್ವಾಮ್ಯ ಕಾಯ್ದೆ, 1970
3. ಟ್ರೇಡ್‌ಮಾರ್ಕ್‌ಗಳ ಕಾಯ್ದೆ, 1999
4. ವಿನ್ಯಾಸ ಕಾಯ್ದೆ, 2000
5. ಕೈಗಾರಿಕೆ ವಿವಾದಗಳ ಕಾಯ್ದೆ, 1947
6. ವೇತನ ಪಾವತಿ ಕಾಯ್ದೆ, 1936
7. ಕನಿಷ್ಠ ವೇತನ ಕಾಯ್ದೆ, 1948
8. ಉದ್ಯೋಗಿ ರಾಜ್ಯ ವಿಮೆ ಕಾಯ್ದೆ, 1948
9. ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ವಿವಿಧ ನಿಬಂಧನೆಗಳ ಕಾಯ್ದೆ, 1952
10. ಬೋನಸ್ ಪಾವತಿ ಕಾಯ್ದೆ, 1965
11. ಗ್ರಾಚ್ಯುಟಿ ಪಾವತಿ ಕಾಯ್ದೆ, 1972
12. ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕಾಯ್ದೆ, 1970
13. ಮಾತೃತ್ವ ಪ್ರಯೋಜನಗಳ ಕಾಯ್ದೆ, 1961
14. ಆದಾಯ ತೆರಿಗೆ ಕಾಯ್ದೆ, 1961
15. ಅಂಗಡಿಗಳು ಮತ್ತು ಸ್ಥಾಪನೆ ಕಾಯ್ದೆ, 1948
16. ಕಾನೂನು ಮಾಪನಶಾಸ್ತ್ರ ಕಾಯ್ದೆ, 2009
17. ಪರಿಸರ (ಸಂರಕ್ಷಣೆ) ಕಾಯ್ದೆ, 1986
18. ಕಾರ್ಖಾನೆಗಳ ಕಾಯ್ದೆ, 1948
19. ಕೈಗಾರಿಕಾ (ಅಭಿವೃದ್ಧಿ ನಿಯಂತ್ರಣ) ಕಾಯ್ದೆ, 1991
20. ವಿದ್ಯುತ್, ಬೆಂಕಿ, ಪೆಟ್ರೋಲಿಯಂ, ಬಾಯ್ಲರ್‌ಗಳು, ಔಷಧಗಳು, ಮೋಟಾರು ವಾಹನಗಳು, ಸ್ಫೋಟಕಗಳಿಗೆ ಸಂಬಂಧಿಸಿದ ಕಾಯ್ದೆಗಳು;
21. ಜಿಎಸ್‌ಟಿ ಕಾಯ್ದೆ, 2017

(ii), (iii), (iv)ರ ಷರತ್ತಿನ ನಿಬಂಧನೆಗಳು ಮತ್ತು (v)ರ ನಿಬಂಧನೆಗಳು ಸದರಿ ಕಂಪನಿಗೆ ಅನ್ವಯವಾಗುವುದಿಲ್ಲ.

ನಾವು, ಕೆಳಕಂಡ ಅನ್ವಯವಾಗುವ ಕಲಂಗಳ ಅನುಪಾಲನೆಯನ್ನು ಸಹ ಪರಿಶೀಲಿಸಿದ್ದೇವೆ:

(I) ದಿ ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾ ಹೊರಡಿಸಿದ ನಿರ್ದೇಶಕರ ಮಂಡಳಿ (SS-1) ಮತ್ತು ಸಾಮಾನ್ಯ (SS-2) ಸಭೆಗಳಿಗೆ ಸಂಬಂಧಿಸಿದಂತೆ ಕಾರ್ಯದರ್ಶೀಯ ಮಾನದಂಡಗಳು (ಇತ್ತೀಚಿನ ತಿದ್ದುಪಡಿಗಳೊಂದಿಗೆ 1ನೇ ಜುಲೈ, 2015ರಿಂದ ಅನ್ವಯ)

ನಮ್ಮ ಆಡಿಟ್‌ನ ವ್ಯಾಪ್ತಿಯು ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅನುಪಾಲನೆಗಳಿಗೆ ಸೀಮಿತವಾಗಿದೆ ಮತ್ತು ಕಂಪನಿಗೆ ಅನ್ವಯವಾಗುವ ಮೇಲೆ ನಿರ್ದಿಷ್ಟಪಡಿಸಿದ ಇತರ ಕಾಯಿದೆಗಳ ಅಡಿಯಲ್ಲಿ ರಚಿಸಲಾಗಿದೆ.

ಪರಾಮರ್ಶೆಯ ಅವಧಿಯ ಅಡಿಯಲ್ಲಿ ನಾವು ಮತ್ತಷ್ಟು ಹೇಳುವುದೆಂದರೆ ಕಂಪನಿಯು ನಿರ್ವಹಿಸಿದ ದಾಖಲೆಗಳ ಪರಿಶೀಲನೆ ಮತ್ತು ನಮ್ಮ ಪರಿಶೀಲನೆಯ ಆಧಾರದ ಮೇಲೆ ಮತ್ತು ಅನುಪಾಲನಾ ವರದಿಯ ಪರಿಶೀಲನೆಯ ಆಧಾರದ ಮೇಲೆ, ಕಂಪನಿಯ ನಿರ್ದೇಶಕರ ಮಂಡಳಿಯಿಂದ ದಾಖಲೆಯನ್ನು ತೆಗೆದುಕೊಂಡ ಆಯಾ ವಿಭಾಗಗಳ ಮುಖ್ಯಸ್ಥರ ಹೇಳಿಕೆಗಳನ್ನು ದಾಖಲಿಸಲಾಗಿದೆ. ನಮ್ಮ ಅಭಿಪ್ರಾಯದಲ್ಲಿ, ಮೇಲೆ ಹೇಳಿದಂತೆ ಕೆಲಸಗಾರರು ಮತ್ತು ಪರಿಸರಕ್ಕೆ ಸಂಬಂಧಿಸಿದ ಅನ್ವಯವಾಗುವ ಕಾನೂನುಗಳ ಅನುಪಾಲನೆಯನ್ನು ಮೇಲ್ವಿಚಾರಣೆ ಮಾಡಲು ಕಂಪನಿಯಲ್ಲಿ ಸಾಕಷ್ಟು ವ್ಯವಸ್ಥೆಗಳು ಮತ್ತು ಪ್ರಕ್ರಿಯೆ ಮತ್ತು ನಿಯಂತ್ರಣ ಕಾರ್ಯವಿಧಾನವು ಅಸ್ತಿತ್ವದಲ್ಲಿದೆ. ಕಂಪನಿ ಕಾಯ್ದೆ, ಕಾರ್ಮಿಕ ಕಾನೂನುಗಳ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಣೆಯ ಸಮಯದಲ್ಲಿ ಮಾಡಿದ ಕೆಲವು ಭೌತಿಕವಲ್ಲದ ಅವಲೋಕನಗಳನ್ನು ಕಂಪನಿಯು ಪರಿಹರಿಸಿದೆ. ಪರಾಮರ್ಶೆಯ ಅವಧಿಯಲ್ಲಿ, ಕಂಪನಿಯು ಮೇಲೆ ತಿಳಿಸಲಾದ ಕಾಯ್ದೆ, ನಿಯಮಗಳು, ಮಾರ್ಗಸೂಚಿಗಳು, ಮಾನದಂಡಗಳು ಮತ್ತು ಮೇಲೆ ತಿಳಿಸಿದ ಇತರೇ ಕೆಳಕಂಡ ವಿಷಯಗಳಿಗೆ ಒಳಪಟ್ಟು ಭೌತಿಕ ಸ್ವರೂಪದ್ದಾಗಿದೆ.

**ಕಂಪನಿ ಕಾನೂನು:**

**ಗಮನಹರಿಸಬೇಕಾದ ಮಹತ್ವದ ವಿಷಯ:**

1. ಕಂಪನಿಯು 31-03-2023ರಲ್ಲಿ ಕೊನೆಗೊಳ್ಳುವ ತ್ರೈಮಾಸಿಕಕ್ಕೆ ಆಡಳಿತ ಮಂಡಳಿ ಸಭೆ ನಡೆಸಿಲ್ಲ.; ಹೀಗಾಗಿ ಇದು ಕಂಪನಿಗಳ ಅಧಿನಿಯಮ, 2013 ಸೆಕ್ಷನ್ 173(1) ನಿಬಂಧನೆಯ ಉಲ್ಲಂಘನೆಯಾಗಿದೆ.

2. ಕಂಪನಿಗಳು (ವ್ಯವಸ್ಥಾಪಕ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014 ರ ನಿಯಮ 8 ರೊಂದಿಗೆ ಓದಲಾದ ಕಂಪನಿಗಳ ಅಧಿನಿಯಮ, 2013 ರ ಸೆಕ್ಷನ್ 203 ರ ನಿಬಂಧನೆಗಳ ಅನುಸಾರವಾಗಿ ಕಂಪನಿಯು ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ನೇಮಿಸುವ ಅಗತ್ಯವಿದೆ.

3. ಕಂಪನಿ ಕಾಯ್ದೆ, 2013ರ ಸೆಕ್ಷನ್ 177ರ ನಿಬಂಧನೆಗಳ ಪ್ರಕಾರ ಕಂಪನಿಯ ಲೆಕ್ಕಪರಿಶೋಧನ ಸಮಿತಿಯು ಬಹುಪಾಲು ಸ್ವತಂತ್ರ ನಿರ್ದೇಶಕರನ್ನು ಹೊಂದಿಲ್ಲ. ಆದಾಗ್ಯೂ, ಲೆಕ್ಕಪರಿಶೋಧನ ಸಮಿತಿಯಲ್ಲಿ ಕಂಪನಿಯ ಒಬ್ಬರು ಸ್ವತಂತ್ರ ನಿರ್ದೇಶಕರನ್ನು ಕಂಪನಿ ಹೊಂದಿದೆ. ಆಡಳಿತವು ನೀಡಿರುವ ವಿವರಣೆಯನ್ನು ಆಧರಿಸಿ, ಸ್ವತಂತ್ರ ನಿರ್ದೇಶಕರ ನೇಮಕಕ್ಕೆ ಕೋರಿಕೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಮತ್ತು ಸರ್ಕಾರದ ಅನುಮೋದನೆಯನ್ನು ಕಾಯಲಾಗುತ್ತಿದೆ.

4. ಕಂಪನಿಯ ಆಡಳಿತ ಮಂಡಳಿಯಲ್ಲಿ ಮಹಿಳಾ ನಿರ್ದೇಶಕಿಯನ್ನು ಹೊಂದಿರಬೇಕಾದ ನಿಬಂಧನೆಯನ್ನು ಕಂಪನಿಯು ಪಾಲಿಸಿದೆ. ಆದಾಗ್ಯೂ, ಲೆಕ್ಕಪರಿಶೋಧನೆಯ ದಿನಾಂಕದ ಪ್ರಕಾರ, ಕಂಪನಿಯ ಆಡಳಿತ ಮಂಡಳಿಯಲ್ಲಿ ಮಹಿಳಾ ನಿರ್ದೇಶಕರಿಲ್ಲ.

**ನಾವು ಇನ್ನಷ್ಟು ವರದಿ ಮಾಡುವುದೇನೆಂದರೆ:**

ಕಂಪನಿಯ ನಿರ್ದೇಶಕರ ಮಂಡಳಿಯು ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು, ಸ್ವತಂತ್ರ ನಿರ್ದೇಶಕರು ಮತ್ತು ಮಹಿಳಾ ನಿರ್ದೇಶಕರ ಸರಿಯಾದ ಸಮತೋಲನದೊಂದಿಗೆ ಸರಿಯಾಗಿ ರಚಿತವಾಗಿದೆ. ಪರಾಮರ್ಶೆಯ ಅವಧಿಯಲ್ಲಿ ನಡೆದ ನಿರ್ದೇಶಕರ ಮಂಡಳಿಯ ಸಂಯೋಜನೆಯಲ್ಲಿನ ಬದಲಾವಣೆಗಳನ್ನು ಕಾಯ್ದೆಯ ನಿಬಂಧನೆಗಳಿಗೆ ಅನುಸಾರವಾಗಿ ಕೈಗೊಳ್ಳಲಾಗಿದೆ.

ಪರಾಮರ್ಶೆಯಲ್ಲಿರುವ ಹಣಕಾಸು ವರ್ಷದಲ್ಲಿ ಬೋರ್ಡ್ ಮೀಟಿಂಗ್‌ಗಳನ್ನು ನಿಗದಿಪಡಿಸಲು ಎಲ್ಲಾ ನಿರ್ದೇಶಕರಿಗೆ ಸಾಕಷ್ಟು ಮುಂಚಿತವಾಗಿ ಸೂಚನೆ ನೀಡಲಾಗಿದೆ. ನಿಗದಿತ ಸಭೆಯ ಮೊದಲು ಕಾರ್ಯಸೂಚಿ ಮತ್ತು ವಿವರವಾದ ಟಿಪ್ಪಣಿಗಳನ್ನು ಸರಿಯಾಗಿ ಕಳುಹಿಸಲಾಗಿದೆ ಮತ್ತು ಸಭೆಯಲ್ಲಿ ಅರ್ಥಪೂರ್ಣ ಭಾಗವಹಿಸುವಿಕೆಗಾಗಿ ಸಭೆಯ ಕಾರ್ಯಸೂಚಿಯಲ್ಲಿರುವ ವಿಷಯಗಳ ಕುರಿತು ಹೆಚ್ಚಿನ ಮಾಹಿತಿ ಮತ್ತು ಸ್ಪಷ್ಟೀಕರಣಗಳನ್ನು ಕೇಳುವ ಮತ್ತು ಪಡೆಯುವ ವ್ಯವಸ್ಥೆಯು ಅಸ್ತಿತ್ವದಲ್ಲಿದೆ.

**ನಾವು ಇನ್ನಷ್ಟು ವರದಿ ಮಾಡುವುದೇನೆಂದರೆ:** ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಯಮಗಳು ಮತ್ತು ಮಾರ್ಗಸೂಚಿಗಳ ಅನುಸರಣೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಖಚಿತಪಡಿಸಿಕೊಳ್ಳಲು ಕಂಪನಿಯ ಗಾತ್ರ ಮತ್ತು ಕಾರ್ಯಾಚರಣೆಗಳಿಗೆ ಅನುಗುಣವಾಗಿ ಕಂಪನಿಯಲ್ಲಿ ಸಾಕಷ್ಟು ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳಿವೆ ಎಂದು ನಾವು ಮತ್ತಷ್ಟು ವರದಿ ಮಾಡುತ್ತೇವೆ.

ಲೆಕ್ಕಪರಿಶೋಧನೆ ಅವಧಿಯಲ್ಲಿ ನಾವು ಇನ್ನೂ ವರದಿ ಮಾಡುವುದೇನೆಂದರೆ ಕಂಪನಿಯು:

1. ಸಾರ್ವಜನಿಕ/ ಹಕ್ಕಿನ/ಆದ್ಯತೆಯ ಷೇರುಗಳ ವಿತರಣೆ / ಸಾಲಪತ್ರಗಳು (ಡಿಬೆಂಚರುಗಳು) / ಯೋಜನೆ ಅಥವಾ ವ್ಯವಹಾರ ಅಥವಾ ಉದ್ದಿಮೆಗೆ ಕಂಪನಿಯ ಕೊಡುಗೆ (ಸ್ವೆಟ್ ಈಕ್ವಿಟಿ) ಇನ್ನಿತರ ನೀಡಿಲ್ಲ.
2. ಯಾವುದೇ ಷೇರುಗಳ ನಗದೀಕರಣ/ಮರುಖರೀದಿ ಮಾಡಲಾಗಿಲ್ಲ
3. ಕಂಪನಿಗಳ ಅಧಿನಿಯಮ, 2013 ರ ಸೆಕ್ಷನ್ 180 ರ ಅನುಸಾರವಾಗಿ ಸದಸ್ಯರು ಯಾವುದೇ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿಲ್ಲ
4. ಯಾವುದೇ ವಿಲೀನ/ ಸಮ್ಮಿಲನ/ ಪುನರ್‌ರಚನೆ ಇತ್ಯಾದಿ ಆಗಿರುವುದಿಲ್ಲ.
5. ಯಾವುದೇ ವಿದೇಶಿ ತಾಂತ್ರಿಕ ಸಹಭಾಗಿತ್ವ ಮಾಡಿಕೊಂಡಿರುವುದಿಲ್ಲ

**ಜ್ಯೋತಿ ಶಿವಯೋಗಿ & ಅಸೋಸಿಯೇಟ್ಸ್**
**ಎಫ್.ಆರ್.ನಂ. S2020KR753900**

**ಸಹಿ/–**
**ಜ್ಯೋತಿ ಶಿವಯೋಗಿ**
**ಸೇವೆಯಲ್ಲಿರುವ ಕಂಪೆನಿ ಕಾರ್ಯದರ್ಶಿಗಳ ಪರವಾಗಿ**
**ಸದಸ್ಯತ್ವ ಸಂಖ್ಯೆ: ಎಫ್9856**
**ಸಿಪಿಸಂಖ್ಯೆ: 12270**
**ಯುಡಿಐಎನ್: ಎಫ್ 009856 ಇ002341702**

ಸ್ಥಳ: ಬೆಂಗಳೂರು
ದಿನಾಂಕ: 25–11–2023

ಈ ವರದಿಯನ್ನು ನಮ್ಮ ಸಮ ದಿನಾಂಕದ ಪತ್ರದೊಂದಿಗೆ ಓದಬೇಕು, ಅದನ್ನು ಅನುಬಂಧ–ಎ ಎಂದು ಲಗತ್ತಿಸಲಾಗಿದೆ ಮತ್ತು ಅದು ಈ ವರದಿಯ ಅವಿಭಾಜ್ಯ ಅಂಗವಾಗಿದೆ.

**"ಅನುಬಂಧ–ಎ"**

ಇವರಿಗೆ,

ಸದಸ್ಯರು

ಮೆ॥ ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್
ಅಂಚೆ ಪೆಟ್ಟಿಗೆ ಸಂಖ್ಯೆ.5531,
ಪುಣೆ ಹೆದ್ದಾರಿ, ಬೆಂಗಳೂರು – 560055

ಸಮ ದಿನಾಂಕದ ನಮ್ಮ ವರದಿಯನ್ನು ಈ ಪತ್ರದೊಂದಿಗೆ ಓದಬೇಕು.

1. ಕಾರ್ಯದರ್ಶಿ ದಾಖಲೆಯ ನಿರ್ವಹಣೆಯು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ನಮ್ಮ ಆಡಿಟ್‌ನ ಆಧಾರದ ಮೇಲೆ ಕಾರ್ಯದರ್ಶೀಯ ದಾಖಲೆಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ.

2. ಕಾರ್ಯದರ್ಶಿಯ ದಾಖಲೆಗಳ ವಿಷಯಗಳ ನಿಖರತೆ ಬಗ್ಗೆ ನ್ಯಾಯಯುತವಾದ ಭರವಸೆಯನ್ನು ಪಡೆಯಲು ಸೂಕ್ತವಾದ ಲೆಕ್ಕಪರಿಶೋಧನೆ ಅಭ್ಯಾಸಗಳು ಮತ್ತು ಪ್ರಕ್ರಿಯೆಗಳನ್ನು ನಾವು ಅನುಸರಿಸಿದ್ದೇವೆ. ಕಾರ್ಯದರ್ಶೀಯ ದಾಖಲೆಗಳಲ್ಲಿ ನಿಖರವಾದ ನಿಖರ ಸತ್ಯಾಂಶಗಳು ಪ್ರತಿಫಲಿಸಿವೆ ಎಂಬುದನ್ನು ಖಾತರಿಪಡಿಸಲು ಪರೀಕ್ಷಾ ಆಧಾರದ ಮೇಲೆ ಪರಿಶೀಲನೆ ನಡೆಸಲಾಗಿದೆ. ನಾವು ಅನುಸರಿಸಿದ ಪ್ರಕ್ರಿಯೆ ಮತ್ತು ಅಭ್ಯಾಸಗಳು ನಮ್ಮ ಅಭಿಪ್ರಾಯಕ್ಕೆ ಸಮಂಜಸವಾದ ಆಧಾರವನ್ನು ಒದಗಿಸುತ್ತವೆ ಎಂದು ನಾವು ನಂಬುತ್ತೇವೆ.

3. ಕಂಪನಿಯ ಹಣಕಾಸು ದಾಖಲೆಗಳು ಮತ್ತು ಖಾತೆಗಳ ಪುಸ್ತಕಗಳ ನಿಖರತೆ ಮತ್ತು ಸೂಕ್ತತೆಯನ್ನು ನಾವು ಪರಿಶೀಲಿಸಿಲ್ಲ.

4. ಅಗತ್ಯವಿದ್ದಾಗ, ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳ ಅನುಪಾಲನೆ ಮತ್ತು ನಡೆಯುವ ಘಟನೆಗಳು ಇತ್ಯಾದಿಗಳ ಬಗ್ಗೆ ನಾವು ಆಡಳಿತದ ಪ್ರಾತಿನಿಧ್ಯವನ್ನು ಪಡೆದುಕೊಂಡಿದ್ದೇವೆ.

5. ಕಾರ್ಪೊರೇಟ್ ಮತ್ತು ಇತರ ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು, ಮಾನದಂಡಗಳ ನಿಬಂಧನೆಗಳ ಅನುಪಾಲನೆಯು ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ನಮ್ಮ ಪರೀಕ್ಷೆಯು ದಾಖಲೆಗಳ ಆಧಾರದ ಮೇಲೆ ಕಾರ್ಯವಿಧಾನಗಳ ಪರಿಶೀಲನೆಗೆ ಸೀಮಿತವಾಗಿತ್ತು.

6. ಕಾರ್ಯದರ್ಶಿಯ ಲೆಕ್ಕ ಪರಿಶೋಧನೆ (ಸೆಕ್ರೆಟೇರಿಯಲ್ ಆಡಿಟ್) ವರದಿಯು ಕಂಪನಿಯ ಭವಿಷ್ಯದ ಕಾರ್ಯಸಾಧ್ಯತೆಯ ಬಗ್ಗೆ ಅಥವಾ ಕಂಪನಿಯ ವ್ಯವಹಾರಗಳನ್ನು ಆಡಳಿತವು ನಡೆಸಿದ ಪರಿಣಾಮಕಾರಿತ್ವ ಅಥವಾ ಪರಿಣಾಮಕಾರಿಯಾಗಿ ನಡೆಸಿದ ಬಗ್ಗೆ ಭರವಸೆ ನೀಡುವುದಿಲ್ಲ.

**ಜ್ಯೋತಿ ಶಿವಯೋಗಿ & ಅಸೋಸಿಯೇಟ್ಸ್**
**ಎಫ್.ಆರ್.ನಂ. S2020KR753900**

**ಸಹಿ/–**
**ಜ್ಯೋತಿ ಶಿವಯೋಗಿ**
**ಸೇವೆಯಲ್ಲಿರುವ ಕಂಪೆನಿ ಕಾರ್ಯದರ್ಶಿಗಳ ಪರವಾಗಿ**
**ಸದಸ್ಯತ್ವ ಸಂಖ್ಯೆ: ಎಫ್9856**
**ಸಿಪಿಸಂಖ್ಯೆ: 12270**
**ಯುಡಿಐಎನ್: ಎಫ್ 009856 ಇ002341702**

ಸ್ಥಳ: ಬೆಂಗಳೂರು
ದಿನಾಂಕ: 25–11–2023




ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ 2022–23ನೇ ವರ್ಷದ **ಲಾಭಾಂಶದ ಚೆಕ್ ರೂ.54,74,80,421/–**ನ್ನು ಕರ್ನಾಟಕ ಸರ್ಕಾರದ ಗೌರವಾನ್ವಿತ ಮುಖ್ಯಮಂತ್ರಿ **ಶ್ರೀ ಸಿದ್ದರಾಮಯ್ಯ** ಅವರಿಗೆ 12.12.2023ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಮತ್ತು ಕೆಎಸ್&ಡಿಎಲ್ ಅಧ್ಯಕ್ಷರಾದ **ಶ್ರೀ ಎಂ.ಬಿ. ಪಾಟೀಲ** ಮತ್ತು ಕೆಎಸ್&ಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕರಾದ **ಡಾ. ಪ್ರಶಾಂತ್ ಪಿಕೆಎಂ,** ಭಾಆಸೇ ಇವರು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಕೆಎಸ್&ಡಿಎಲ್‌ನ ಹಿರಿಯ ಅಧಿಕಾರಿಗಳು ಹಾಜರಿದ್ದರು.




ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ಸಂಸ್ಥೆಯು **"ಮುಖ್ಯಮಂತ್ರಿ ಪರಿಹಾರ ನಿಧಿ"**ಗೆ 5 ಕೋಟಿ ರೂ ದೇಣಿಗೆ ನೀಡಿದ್ದು, ಕರ್ನಾಟಕ ಸರ್ಕಾರದ ಗೌರವಾನ್ವಿತ ಮುಖ್ಯಮಂತ್ರಿ **ಶ್ರೀ ಸಿದ್ದರಾಮಯ್ಯ** ಅವರಿಗೆ 12.12.2023ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಮತ್ತು ಕೆಎಸ್&ಡಿಎಲ್ ಅಧ್ಯಕ್ಷರಾದ **ಶ್ರೀ ಎಂ.ಬಿ. ಪಾಟೀಲ** ಮತ್ತು ಕೆಎಸ್&ಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕರಾದ **ಡಾ. ಪ್ರಶಾಂತ್ ಪಿಕೆಎಂ,** ಭಾಆಸೇ ಇವರು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಕೆಎಸ್&ಡಿಎಲ್‌ನ ಹಿರಿಯ ಅಧಿಕಾರಿಗಳು ಹಾಜರಿದ್ದರು.

**ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ಬೆಂಗಳೂರು ಇವರ 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಹಣಕಾಸಿನ ವಿವರಣಾ ಪಟ್ಟಿಗಳ ಕುರಿತು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 143(6)(ಬಿ) ಅಡಿಯಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಪಾಲರ ಅಭಿಪ್ರಾಯಗಳು.**

ಕಂಪೆನಿಗಳ ಕಾಯ್ದೆ 2013 (ಕಾಯ್ದೆ)ಯ ಅಡಿಯಲ್ಲಿ ನಿಗದಿಪಡಿಸಿದ ಹಣಕಾಸು ವರದಿ ಮಾಡುವ ಚೌಕಟ್ಟಿನ ಪ್ರಕಾರ **2023ರ ಮಾರ್ಚ್ 31ಕ್ಕೆ** ಕೊನೆಗೊಂಡ ವರ್ಷಕ್ಕೆ **ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್, ಬೆಂಗಳೂರು** ಇದರ ಹಣಕಾಸಿನ ವಿವರಣಾ ಪಟ್ಟಿಯನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಕಾಯ್ದೆಯ ಸೆಕ್ಷನ್ 139 (5) ರ ಅಡಿಯಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು ನೇಮಕ ಮಾಡಿದ ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆ ಸೆಕ್ಷನ್ 143 ರ ಅಡಿಯಲ್ಲಿ ಹಣಕಾಸಿನ ವಿವರಣಾ ಪಟ್ಟಿಗಳ ಹೇಳಿಕೆಗಳ ಬಗ್ಗೆ ಕಾಯಿದೆಯ ಸೆಕ್ಷನ್ 143 (10) ರ ಅಡಿಯಲ್ಲಿ ನಿಗದಿಪಡಿಸಿದ ಲೆಕ್ಕಪರಿಶೋಧನೆಯ ಮಾನದಂಡಗಳಿಗೆ ಅನುಗುಣವಾಗಿ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಪರಿಷ್ಕೃತ ಲೆಕ್ಕಪರಿಶೋಧನಾ ವರದಿ **ದಿನಾಂಕ 16 ನವೆಂಬರ್ 2023ರ** ಮೂಲಕ ಇದನ್ನು ಮಾಡಲಾಗಿದೆ ಎಂದು ಹೇಳಲಾಗಿದ್ದು ಅವರ ಈ ಮೊದಲಿನ ಲೆಕ್ಕಪರಿಶೋಧನಾ ವರದಿ ದಿನಾಂಕ **ದಿನಾಂಕ 22 ಸೆಪ್ಟೆಂಬರ್ 2023ರ** ವರದಿಯನ್ನು ಇದು ರದ್ದುಮಾಡಲಿದೆ.

ನಾನು, ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಪರವಾಗಿ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಬೆಂಗಳೂರು ಇದರ 31 ಮಾರ್ಚ್ 2023 ಕ್ಕೆ ಕೊನೆಗೊಂಡ ವರ್ಷದ ಹಣಕಾಸಿನ ವಿವರಣಾ ಪಟ್ಟಿಗಳನ್ನು ಕಾಯ್ದೆ ಸೆಕ್ಷನ್ 143 (6) (ಎ) ಅಡಿಯಲ್ಲಿ ಪೂರಕ ಲೆಕ್ಕಪರಿಶೋಧನೆಯನ್ನು ನಡೆಸಿದ್ದೇನೆ.ಈ ಪೂರಕ ಲೆಕ್ಕಪರಿಶೋಧನೆಯು ಶಾಸನಬದ್ಧ ಲೆಕ್ಕ ಪರಿಶೋಧಕರು ನಿರ್ವಹಿಸಿದ ದಾಖಲೆಗಳ ಲಭ್ಯತೆ ಇಲ್ಲದೆ ಸ್ವತಂತ್ರವಾಗಿ ನಡೆಸಲ್ಪಟ್ಟಿದೆ ಮತ್ತು ಇದು ಪ್ರಾಥಮಿಕವಾಗಿ ಶಾಸನಬದ್ಧ ಲೆಕ್ಕ ಪರಿಶೋಧಕರು ಮತ್ತು ಕಂಪನಿಯ ಸಿಬ್ಬಂದಿಗಳ ವಿಚಾರಣೆ ಮತ್ತು ಕೆಲವು ಲೆಕ್ಕಪತ್ರ ದಾಖಲೆಗಳ ಆಯ್ದ ಪರೀಕ್ಷೆಗೆ ಸೀಮಿತವಾಗಿದೆ.

**ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯಲ್ಲಿ ಮಾಡಲಾದ ಪರಿಷ್ಕರಣೆಯ ದೃಷ್ಟಿಯಿಂದ** ನನ್ನ ಪೂರಕ ಲೆಕ್ಕಪರಿಶೋಧನೆಯ ಸಮಯದಲ್ಲಿ ನನ್ನ ಕೆಲವು ಅಭಿಪ್ರಾಯಗಳಿಗೆ ಪರಿಣಾಮ ನೀಡಲು ಕಾಯ್ದೆಯ ಸೆಕ್ಷನ್ 143 (6) (ಬಿ) ಅಡಿಯಲ್ಲಿ ಯಾವುದೇ ನಿರ್ದಿಷ್ಟವಾದ ಟಿಪ್ಪಣಿ ನೀಡಲು ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಪೂರಕವಾಗಿ ಏನೂ ಇರುವುದಿಲ್ಲ.

**ಭಾರತೀಯ ನಿಯಂತ್ರಕರು ಮತ್ತು ಮಹಾಲೇಖಪಾಲರ**
**ಪರವಾಗಿ**

**ಸಹಿ/-**
**(ವಿಮಲೇಂದ್ರ ಎ. ಪಟವರ್ಧನ್)**
**ಪ್ರಧಾನ ಮಹಾ ಲೇಖಪಾಲರು (ಆಡಿಟ್-II)**
**ಕರ್ನಾಟಕ, ಬೆಂಗಳೂರು**

ಸ್ಥಳ: ಬೆಂಗಳೂರು
ದಿನಾಂಕ: 24ನೇ ನವೆಂಬರ್ 2023

# ಸ್ವತಂತ್ರ ಲೆಕ್ಕ ಪರಿಶೋಧಕರ ಪರಿಷ್ಕೃತ ವರದಿ

## ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ ಸದಸ್ಯರಿಗೆ

## ಸ್ವತಂತ್ರ Ind-AS ಹಣಕಾಸಿನ ವಿವರಣ ಪಟ್ಟಿಗಳ ಲೆಕ್ಕಪರಿಶೋಧನೆಯ ಮೇಲೆ ವರದಿ

### 1. ಅರ್ಹ ಅಭಿಪ್ರಾಯ

ಮಾರ್ಚ್ 31, 2023 ರಂತೆ ಆರ್ಥಿಕ ವಿವರ ಪಟ್ಟಿ (ಬ್ಯಾಲನ್ಸ್ ಶೀಟ್)ಯನ್ನು ಒಳಗೊಂಡಿರುವ **ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್‌ನ** ಸ್ವತಂತ್ರ Ind-AS ಹಣಕಾಸಿನ ವಿವರಣ ಪಟ್ಟಿಗಳು, ಲಾಭ ಮತ್ತು ನಷ್ಟದ ವಿವರಣಾ ಪಟ್ಟಿ, (ಇತರೇ ಸಮಗ್ರ ಆದಾಯವೂ ಸೇರಿದಂತೆ), ನಗದು ಹರಿವಿನ ವಿವರಣಾ ಪಟ್ಟಿ, ಮತ್ತು ಅಂದು ಕೊನೆಗೊಂಡ ವರ್ಷಕ್ಕೆ ಈಕ್ವಿಟಿಯಲ್ಲಿನ ಬದಲಾವಣೆಗಳ ವಿವರಣಾ ಪಟ್ಟಿ, ಸ್ವತಂತ್ರ ಹಣಕಾಸು ವಿವರಣಾ ಪಟ್ಟಿಗೆ ಟಿಪ್ಪಣಿಗಳು,ಅಂದಿನ ದಿನಾಂಕದಂತೆ ನಿರ್ದಿಷ್ಟ ಲೆಕ್ಕಪತ್ರ ನೀತಿಗಳ ಸಾರಾಂಶವೂ ಸೇರಿದಂತೆ ಇತರೇ ವಿವರಣಾತ್ಮಕ ಮಾಹಿತಿಗಳನ್ನು ಮತ್ತು ಅದರ ಸಾರಾಂಶ ಗಮನಾರ್ಹ ಲೆಕ್ಕಪತ್ರ ನೀತಿಗಳು ಮತ್ತು ಇತರ ವಿವರಣಾತ್ಮಕ ಮಾಹಿತಿಗಳನ್ನು ನಾವು ಲೆಕ್ಕಪರಿಶೋಧಣೆ ಮಾಡಿದ್ದೇವೆ ಮತ್ತು ನಮ್ಮ ವರದಿಯನ್ನು 22 ಸೆಪ್ಟೆಂಬರ್ 2023ರಂದು ಸಲ್ಲಿಸಿದ್ದೇವೆ. ಆಡಿಟ್ ಮಾಡಿದ್ದೇವೆ. ತರುವಾಯ, ಕಂಟ್ರೋಲರ್ ಮತ್ತು ಆಡಿಟ್ ಜನರಲ್ ಆಫ್ ಇಂಡಿಯಾದ ಅವಲೋಕನಗಳ ಹಿನ್ನೆಲೆಯಲ್ಲಿ ಲೆಕ್ಕಪರಿಶೋಧನೆ ವರದಿಯನ್ನು ಪರಿಷ್ಕಸಲಾಗಿದೆ. ಈ ವರದಿಯು 22 ಸೆಪ್ಟೆಂಬರ್ 2023ನೇ ದಿನಾಂಕದ ನಮ್ಮ ಹಿಂದಿನ ವರದಿಯನ್ನು ರದ್ದುಪಡಿಸುತ್ತದೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಅತ್ಯುತ್ತಮ ಮಾಹಿತಿಯಂತೆ, ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ನಮ್ಮ ವರದಿಯ 'ಅರ್ಹವಾದ ಅಭಿಪ್ರಾಯಕ್ಕಾಗಿ ಆಧಾರ' ವಿಭಾಗದಲ್ಲಿ ವಿವರಿಸಿದ ವಿಷಯಗಳ ಪರಿಣಾಮಗಳನ್ನು ಹೊರತುಪಡಿಸಿ, ಮೇಲೆ ಹೇಳಿದ ಸ್ವತಂತ್ರ Ind AS ಹಣಕಾಸಿನ ವಿವರಣ ಪಟ್ಟಿಗಳು ಕಂಪನಿಗಳ ಅಧಿನಿಯಮ 2013 ರ ಅಗತ್ಯವಿರುವ ರೀತಿಯಲ್ಲಿ ಅಗತ್ಯ ಮಾಹಿತಿ ನೀಡುತ್ತದೆ ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಪತ್ರ ತತ್ವಗಳಿಗೆ ಅನುಗುಣವಾಗಿ 31 ಮಾರ್ಚ್ 2023 ರಂತೆ ಕಂಪನಿಯ ವ್ಯವಹಾರಗಳ ಸ್ಥಿತಿ, ಇತರ ಸಮಗ್ರ ಆದಾಯ ಸೇರಿದಂತೆ ಅದರ ಲಾಭ, ಅದರ ನಗದು ಹರಿವುಗಳು ಮತ್ತು ಆ ದಿನಾಂಕದಂದು ಕೊನೆಗೊಂಡ ವರ್ಷದ ಈಕ್ವಿಟಿಯಲ್ಲಿನ ಬದಲಾವಣೆಗಳ ಕುರಿತು ನಿಜವಾದ ಮತ್ತು ನ್ಯಾಯಯುತವಾದ ನೋಟವನ್ನು ನೀಡುತ್ತದೆ.

### 2. ಅರ್ಹ ಅಭಿಪ್ರಾಯಕ್ಕೆ ಆಧಾರ

ಅಧಿನಿಯಮದ ಸೆಕ್ಷನ್ 143(10) ರ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ,ಭಾರತೀಯ ಲೆಕ್ಕ ಪರಿಶೋಧನಾ ಸಂಸ್ಥೆ (ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ) ನೀಡಿದ ಲೆಕ್ಕ ಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ನಾವು ಸ್ವತಂತ್ರ Ind AS ಹಣಕಾಸಿನ ವಿವರಣ ಪಟ್ಟಿಗಳ ಲೆಕ್ಕಪರಿಶೋಧನೆ ನಡೆಸಿದ್ದೇವೆ. ಈ ಮಾನದಂಡಗಳ ಅಡಿಯಲ್ಲಿ ನಮ್ಮ ಜವಾಬ್ದಾರಿಗಳನ್ನು ನಮ್ಮ ವರದಿಯ ಸ್ವತಂತ್ರ Ind AS ಹಣಕಾಸಿನ ವಿವರಣ ಪಟ್ಟಿಗಳ ವಿಭಾಗದ ಲೆಕ್ಕ ಪರಿಶೋಧಕರ ಜವಾಬ್ದಾರಿಗಳಲ್ಲಿ ಹೆಚ್ಚಿನ ವಿವರಣೆ ನೀಡಲಾಗಿದೆ. ಕಂಪನಿಗಳ ಅಧಿನಿಯಮ, 2013ರ ನಿಬಂಧನೆಗಳ ಅಡಿಯಲ್ಲಿ ಸ್ವತಂತ್ರ Ind AS ಹಣಕಾಸಿನ ವಿವರಣ ಪಟ್ಟಿಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ನೈತಿಕ ಅವಶ್ಯಕತೆಗಳೊಂದಿಗೆ, ಭಾರತೀಯ ಲೆಕ್ಕ ಪರಿಶೋಧನಾ ಸಂಸ್ಥೆ ಹೊರಡಿಸಿದ ನೀತಿ ಸಂಹಿತೆಯ ಅನುಸಾರವಾಗಿ ನಾವು ಕಂಪನಿಯಿಂದ ಸ್ವತಂತ್ರರಾಗಿದ್ದೇವೆ. ಅದರ ಅಡಿಯಲ್ಲಿ ನಿಯಮಗಳು, ಮತ್ತು ಈ ಅವಶ್ಯಕತೆಗಳು ಮತ್ತು ನೀತಿ ಸಂಹಿತೆಗೆ ಅನುಗುಣವಾಗಿ ನಾವು ನಮ್ಮ ಇತರ ನೈತಿಕ ಜವಾಬ್ದಾರಿಗಳನ್ನು ಪೂರೈಸಿದ್ದೇವೆ. ಸ್ವತಂತ್ರ Ind AS ಹಣಕಾಸಿನ ವಿವರಣ ಪಟ್ಟಿಗಳ ಮೇಲಿನ ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ನಾವು ಪಡೆದ ಲೆಕ್ಕಪರಿಶೋಧನೆ ಪುರಾವೆಗಳು ಸಾಕಷ್ಟು ಮತ್ತು ಸೂಕ್ತವೆಂದು ನಾವು ನಂಬುತ್ತೇವೆ. ಈ ಕೆಳಗಿನಂತೆ ಹೆಚ್ಚಿನ ವರದಿ ಮಾಡುತ್ತೇವೆ,

**1. ಭೂಮಿ (ಸ್ವಾಯತ್ತ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿ) :**

ಕಂಪನಿಯು ನಿರ್ವಹಿಸಿರುವ PPEಯ ದಾಖಲೆಗಳು ಮತ್ತು ಕಂಪನಿಯ ಭೂಮಿಯ ಕುರಿತು ಕಂದಾಯ ಅಧಿಕಾರಿಗಳು ಹೊಂದಿರುವ ದಾಖಲೆಗಳನ್ನು ಸಮೀಕರಿಸಲು ಸಾಧ್ಯವಾಗಿಲ್ಲ. ದಾಖಲಾತಿಗಳ ಗುರುತಿಸಲಾಗಿರುವ ವ್ಯಾಪ್ತಿಯಲ್ಲಿನ ಎಲ್ಲ ನ್ಯೂನ್ಯತೆಗಳು, ಮೂರನೇ ಪಕ್ಷದಿಂದ ಕಂಪನಿಯ ಕೆಲವು ಆಸ್ತಿಗಳ ಒತ್ತುವರಿ, ಮತ್ತು ಹಣಕಾಸಿನ ವಿವರಣ ಪಟ್ಟಿಗೆ ಟಿಪ್ಪಣಿಗಳು 2 ರಿಂದ v.ರಲ್ಲಿ ಪ್ರದರ್ಶಿಸಿರುವ ಇತರ ವಿಷಯಗಳು. ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2020 ("ದಿ ಆರ್ಡರ್") ರ ಪ್ರಕಾರ ವ್ಯವಹರಿಸಬೇಕಾದ ವಿಷಯಗಳ ಕುರಿತು ನಮ್ಮ ವರದಿಯಲ್ಲಿನ ಕಂಡಿಕೆ 1(ಸಿ)ಗೆ ಸದಸ್ಯರ ಗಮನವನ್ನು ಸೆಳೆಯಲಾಗಿದ್ದು ಕಂಪನಿಯ ಹೆಸರಿನಲ್ಲಿಲ್ಲದ ಭೂಮಿಯನ್ನು ಸಮಗ್ರವಾಗಿ ಗುರುತಿಸಲು ನಮ್ಮ ಅಸಮರ್ಥತೆಯನ್ನು ನಾವು ವ್ಯಕ್ತಮಾಡಿದ್ದೇವೆ. ಹೇಳಲಾದ ಟಿಪ್ಪಣಿಗಳಲ್ಲಿ ಈ ನ್ಯೂನ್ಯತೆಗಳ ವಿವರ ನೀಡಲಾಗಿದ್ದು ಕಂಪನಿಯ ಹಕ್ಕಿನ ಮೇಲೆ ಗಮನಾರ್ಹವಾದ ಪ್ರಭಾವವನ್ನು ಹೊಂದಿದೆ.

2. ಕಂಪನಿಯ ಮೈಸೂರಿನ 1.82 ಎಕರೆ ಆಸ್ತಿಯನ್ನು 99 ವರ್ಷಗಳ ಗುತ್ತಿಗೆ ಕುರಿತಂತೆ ಹಣಕಾಸು ವಿವರಣಾ ಪಟ್ಟಿಗಳ ಟಿಪ್ಪಣಿ ಸಂ.2. vi ರ ಮೇಲೆ ಗಮನ ಸೆಳೆಯಲಾಗಿದೆ. Ind AS 40 –ರ ಖಂಡಿಕೆ 7& 16ರ ಪ್ರಕಾರ ಹೂಡಿಕೆ ಅಸ್ತಿ, ಒಂದೊಮ್ಮೆ ಬಾಡಿಗೆ ಸಂಪಾದಿಸುತ್ತಿದ್ದರೆ ಅಥವಾ ಮಾರುಕಟ್ಟೆ ಬೆಲೆ ಏರಿಕೆ ಆದಲ್ಲಿ ಅಥವಾ ಎರಡೂ ಸಂದರ್ಭಗಳಲ್ಲಿ ಸಂಸ್ಥೆಯು ಅದನ್ನು ಹೂಡಿಕೆ ಆಸ್ತಿ ಎಂದು ಗುರುತಿಸಬೇಕು. 99 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದರೂ ಸಂಸ್ಥೆಯು

ಇದನ್ನು ಹೂಡಿಕೆ ಆಸ್ತಿ ಎಂದು ಪರಿಗಣಿಸಿಲ್ಲ ಮತ್ತು ಈ ಅವಧಿಯಲ್ಲಿ ಗಣನೀಯ ಪ್ರಮಾಣದ ಮಾರುಕಟ್ಟೆ ಬೆಲೆ ಏರಿಕೆ ಆಗಿರುವುದು. ಇಂತಹ ಪ್ರಕಟಣೆಯು ಇಲ್ಲದೇ ಇರುವುದರಿಂದ ಹಣಕಾಸು ವಿವರಣಾ ಪಟ್ಟಿ ಮೇಲೆ ಇದರ ಪರಿಣಾಮದ ಕುರಿತು ವ್ಯಾಖ್ಯಾನ ಮಾಡುವುದು ನಮಗೆ ಸಾಧ್ಯವಾಗುವುದಿಲ್ಲ.

3. ಅಂದಾಜುಗಳ ಮೇಲೆ ಅಥವಾ ಕಂದಾಯ ಪ್ರಾಧಿಕಾರಗಳಿಂದ ಯಾವುದೇ ಬೇಡಿಕೆ ಇಲ್ಲದೇ ಇರುವುದರಿಂದ ಗುರುತಿಸದೇ ಇರುವ ಆಸ್ತಿಗೆ ಅಥವಾ ಕಂದಾಯ ಅಧಿಕಾರಿಗಳು ಹೊಂದಿರುವ ದಾಖಲೆಗಳ ಪ್ರಕಾರ ಆಸ್ತಿ ದಾಖಲೆಗಳ ವ್ಯಾಜ್ಯ ಪರಿಹಾರಕ್ಕೆ ಸಂಬಂಧಿಸಿದಂತೆ ಪಾವತಿಸಬೇಕಾದ ಆಸ್ತಿ ತೆರಿಗೆ ಮೇಲೆ ಹಣಕಾಸು ವಿವರಣಾ ಪಟ್ಟಿಗಳ ಟಿಪ್ಪಣಿ 23ರ ಮೇಲೆ ಗಮನ ಸೆಳೆಯಲಾಗಿದೆ. ಸೂಕ್ತ ದಾಖಲೆಗಳು, ಗುರುತಿಸಲಾದ ನಿಬಂಧನೆಗಳ ಪರ್ಯಾಪ್ತತೆ/ಸಂಪೂರ್ಣತೆ/ ನಿಖರತೆ ಲಭ್ಯವಿಲ್ಲದ ಕಾರಣ ಹಣಕಾಸು ವಿವರಣಾ ಪಟ್ಟಿಗಳ ಮೇಲೆ ಇದರ ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

4. **ಇತರೇ ಸ್ಥಿರಾಸ್ತಿಗಳು–** ಕಂಪನಿಯು ಸ್ಥಿರಾಸ್ತಿಗಳ ಭೌತಿಕ ಪರಿಶೀಲನೆ ನಡೆಸಿಲ್ಲ ಮತ್ತು ಸ್ಥಿರಾಸ್ತಿ ನೋಂದಣಿ ಪುಸ್ತಕ (ಫಿಕ್ಸೆಡ್ ಅಸೆಟ್ಸ್ ರಿಜಿಸ್ಟರ್)ನಲ್ಲಿ ಹೊಂದಿಕೆ ಮಾಡಿಲ್ಲ. ಇದು ಇಲ್ಲದೇ ಇರುವುದರಿಂದ, ಕಂಪನಿಯ ಎಲ್ಲ ಸ್ಥಿರಾಸ್ತಿಗಳು ಅಸ್ತಿತ್ವದಲ್ಲಿದೆಯೇ ಮತ್ತು ಬಳಕೆ ಯೋಗ್ಯ ಸ್ಥಿತಿಯಲ್ಲಿದೆಯೇ ಎಂಬುದನ್ನು ಎಂಬುದನ್ನು ದೃಢಪಡಿಸಲು ನಮಗೆ ಸಾಧ್ಯವಾಗಿಲ್ಲ.

5. Ind AS 36- ಆಸ್ತಿಗಳ ದುರ್ಬಲತೆ ಪ್ಯಾರಾ 9 ಮತ್ತು 12 ರ ಪ್ರಕಾರ, ಒಂದು ಪ್ರತಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಒಂದು ಘಟಕವು ಆಸ್ತಿಯು ದುರ್ಬಲಗೊಳ್ಳಬಹುದು ಎಂಬ ಯಾವುದೇ ಸೂಚನೆ ಇದೆಯೇ ಎಂದು ಮೌಲ್ಯಮಾಪನ ಮಾಡುತ್ತದೆ. ಮಾಹಿತಿಯ ಬಾಹ್ಯ ಮೂಲವನ್ನು ಪರಿಗಣಿಸಿ ಮತ್ತು ಆಂತರಿಕ ಮೂಲವನ್ನು ಪರಿಗಣಿಸುವ ಮೂಲಕ ಆಡಳಿತ ಮಂಡಳಿಯು ದುರ್ಬಲತೆಯ ಸೂಚನೆ ನೀಡುವ ಯಾವುದೇ ಪರೀಕ್ಷೆಯನ್ನು ನಿರ್ವಹಿಸಿಲ್ಲ. ಸಾಕಷ್ಟು ಮತ್ತು ಸೂಕ್ತವಾದ ಪುರಾವೆಗಳು ಇಲ್ಲದೇ ಇರುವುದರಿಂದ, ಆಸ್ತಿಗಳ ದುರ್ಬಲತೆಯ ಪರಿಣಾಮವನ್ನು ಅಳೆಯಲು ನಮಗೆ ಸಾಧ್ಯವಾಗುತ್ತಿಲ್ಲ.

6. ಸರಕುಗಳ ಪೂರೈಕೆ ಮತ್ತು ಸೇವೆಗಳಿಂದ ಆದಾಯ ಮತ್ತು ಅಂತರ ಘಟಕಗಳ ನಡುವೆ ಸರಕು ಮತ್ತು ಸೇವೆಗಳ ಪೂರೈಕೆ ಮತ್ತು GST ಇಲಾಖೆಯೊಂದಿಗೆ ಘೋಷಿಸಿದ ರಿಟರ್ನ್ಸ್ ಪ್ರಕಾರ ಸರಕು ಮತ್ತು ಸೇವೆಗಳ ಪೂರೈಕೆಯನ್ನು ಹೊಂದಾಣಿಕೆ ಮಾಡಲಾಗಿಲ್ಲ. ವಹಿವಾಟಿನ ಹೊಂದಾಣಿಕೆಯು ಇಲ್ಲದೇ ಇರುವುದರಿಂದ ಹಣಕಾಸು ವಿವರಣಾ ಪಟ್ಟಿಯ ಮೇಲೆ ನಾವು ಅದರ ಪರಿಣಾಮವನ್ನು ಪ್ರಮಾಣೀಕರಿಸಲು ಸಾಧ್ಯವಾಗಿಲ್ಲ. ಉತ್ಪಾದನೆಯೊಂದಿಗೆ ಸಂಬಂಧವಿಲ್ಲದ ಬಂಡವಾಳ ಸರಕು ಸೇರಿದಂತೆ ಎಲ್ಲಾ ವಸ್ತುಗಳ ಮೇಲೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಪಡೆಯುವುದು ITC ನಿಯಮಗಳ ಉಲ್ಲಂಘನೆಯಾಗಿದೆ. ಇನ್‌ಪುಟ್ ಟ್ಯಾಕ್ಸ್ ಹೊಂದಾಣಿಕೆಯು ಇಲ್ಲದೇ ಇರುವುದರಿಂದ ಹಣಕಾಸಿನ ವಿವರಣಾ ಪಟ್ಟಿಗಳ ಅದರ ಪರಿಣಾಮವನ್ನು ಮೌಲ್ಯಮಾಪನ ಮಾಡಲು ನಮಗೆ ಸಾಧ್ಯವಾಗುತ್ತಿಲ್ಲ.

7. ನಿಯಮ 8 (ವ್ಯವಸ್ಥಾಪಕ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ತಿದ್ದುಪಡಿ ನಿಯಮ 2014: ರೊಂದಿಗೆ ಓದಲಾದ ಕಂಪನಿಗಳ ಅಧಿನಿಯಮ, 2013 ರ ಸೆಕ್ಷನ್ 203 ರ ಪ್ರಕಾರ ಪ್ರತಿಯೊಂದು ಲಿಸ್ಟೆಡ್ (ಪಟ್ಟಿ ಮಾಡಲಾದ) ಕಂಪನಿ ಮತ್ತು ಹತ್ತು ಕೋಟಿ ರೂಪಾಯಿಗಳ ಪಾವತಿಸಿದ ಷೇರು ಬಂಡವಾಳವನ್ನು ಹೊಂದಿರುವ ಯಾವುದೇ ಇತರ ಸಾರ್ವಜನಿಕ ಕಂಪನಿಯು ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ಹೊಂದಿರಬೇಕು. ಕಂಪನಿಯು ಯಾವುದೇ ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ನೇಮಿಸಿಲ್ಲ, ಇದು ಕಂಪನಿಗಳ ಅಧಿನಿಯಮ, 2013 ರ ಸೆಕ್ಷನ್ 203 ರ ಅಗತ್ಯತೆಗಳ ನಿಬಂಧನೆಗಳ ಉಲ್ಲಂಘನೆಯಾಗಿದೆ.

8. ಟಿಪ್ಪಣಿ ಸಂಖ್ಯೆ 5ರ ಮೇಲೆ ದೃಢೀಕರಣ–ಮಾಡಲಾದ ನಿರ್ದಿಷ್ಟ ಬಿಲ್‌ಗಳ ಮೇಲೆ ಸ್ವೀಕರಿಸಲಾದ ಪಾವತಿಗಳನ್ನು ದೃಢೀಕರಿಸುವ ವ್ಯವಸ್ಥೆಯನ್ನು ಕಂಪನಿಯು ಹೊಂದಿದೆ. ಆದಾಗ್ಯೂ, ಗ್ರಾಹಕರ ನಿರ್ದಿಷ್ಟ ಸಲಹೆ ಇಲ್ಲದೇ ತತ್ಪೂರ್ತ (ವಿಶೇಷ ಉದ್ದೇಶಕ್ಕಾಗಿ ಮಾತ್ರ) ಆಧಾರದಲ್ಲಿ ಬಿಲ್‌ಗಳಿಗೆದುರಾಗಿ ಬಂದಿರುವ ಪಾವತಿಗಳ ದೃಢೀಕರಣವನ್ನು ಮಾಡಲಾಗುತ್ತಿದೆ. ಪರಿಣಾಮವಾಗಿ, ವ್ಯಾಪಾರ ಸ್ವೀಕೃತಿಯಾಗಬೇಕಾದವುಗಳಿಂದ ಒದಗಿಸಲಾದ ಕಾಲವಾರು ಅಂಕಿ ಅಂಶವನ್ನು ನಾವು ದೃಢೀಕರಿಸಲು ಸಾಧ್ಯವಾಗಿಲ್ಲ. ಮೇಲಾಗಿ, ಕಂಪನಿಯು ಬಾಕಿಗಳ / ಅದರ ವ್ಯಾಪಾರ ಸ್ವೀಕೃತಿ ಆಗಬೇಕಾದವುಗಳ ಕುರಿತು ಪುಸ್ತಕಗಳೊಂದಿಗೆ ಹೊಂದಾಣಿಕೆ ಮಾಡಿದ ದೃಢೀಕರಣಗಳನ್ನು ಕಂಪನಿಯು ಪಡೆದಿಲ್ಲ. ಬಾಹ್ಯ ದೃಢೀಕರಣದ ಅನುಪಸ್ಥಿತಿಯಲ್ಲಿ, ನ್ಯಾಯೋಚಿತ ಮೌಲ್ಯ ಮಾಪನದ ಕುರಿತು ನಾವು ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಿಲ್ಲ.

9. ಟಿಪ್ಪಣಿ ಸಂಖ್ಯೆ.13ರ ಮೇಲೆ ದೃಢೀಕರಣ– ವ್ಯಾಪಾರ ಸಂದಾಯಗಳು, ಟಿಪ್ಪಣಿ ಸಂಖ್ಯೆ ನಂ.14 – ಇತರ ಪಾವತಿಗಳು & ವ್ಯಾಪಾರ ಠೇವಣಿಗಳು ಮತ್ತು ಟಿಪ್ಪಣಿ ಸಂಖ್ಯೆ.15 – ಹಣಕಾಸಿನ ವಿವರಣ ಪಟ್ಟಿಗಳಲ್ಲಿ ಬಹಿರಂಗಪಡಿಸಿದ ಗ್ರಾಹಕರ ಮುಂಗಡವು ದೃಢೀಕರಣಗಳಿಗೆ ಒಳಪಟ್ಟಿರುತ್ತದೆ. ಬಾಹ್ಯ ದೃಢೀಕರಣದ ಅನುಪಸ್ಥಿತಿಯಲ್ಲಿ, ನ್ಯಾಯಯುತ ಮೌಲ್ಯ ಮಾಪನದ ಕುರಿತು ನಾವು ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಿಲ್ಲ.

10. MSMED ಕಾಯ್ದೆ, 2006 ರ ಪ್ರಕಾರ – ಕಂಪನಿಯು ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲ್ಪಟ್ಟ ಮಾರಾಟಗಾರರನ್ನು ಗುರುತಿಸಬೇಕು. ಕಂಪನಿಯು ತನ್ನ ಹಣಕಾಸಿನ ವಿವರಣ ಪಟ್ಟಿಗಳು ಮತ್ತು ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅರ್ಧವಾರ್ಷಿಕ ವರದಿ ಮಾಡುವ ಅಗತ್ಯತೆಗಳಲ್ಲಿ ಪ್ರತ್ಯೇಕವಾದ ಪ್ರಕಟಣೆಯನ್ನು ಮಾಡಬೇಕು. ಪ್ರಕಟಣೆಯು ಮತ್ತು ವರದಿ ಮಾಡುವಿಕೆಯು ಬಾಕಿ ಮತ್ತು ಪಾವತಿಸಿದ ಮೂಲ ಮೊತ್ತ, ಪಾವತಿಸಬೇಕಾದ ಬಡ್ಡಿಯ ಪ್ರಮಾಣ ಮತ್ತು ಪಾವತಿಸಿದ ಮೊತ್ತ, ವಿಳಂಬವಿದ್ದಲ್ಲಿ ವಿಳಂಬಕ್ಕೆ ಯಾವುದೇ ಕಾರಣವನ್ನು ಒಳಗೊಂಡಿರಬೇಕು. ಕಂಪನಿಯು ನಿಬಂಧನೆಗಳ ಪ್ರಕಾರ ಮಾರಾಟಗಾರರನ್ನು ಗುರುತಿಸಲು ಯಾವುದೇ ಕಾರ್ಯವಿಧಾನವನ್ನು ಮಾಡಿಲ್ಲ ಇದು ಕಂಪನಿಯು MSMED ಅಧಿನಿಯಮ, 2006 ಮತ್ತು ಕಂಪನಿಗಳ ಅಧಿನಿಯಮ, 2013ರ ಉಲ್ಲಂಘನೆಯಾಗಿದೆ.

11. ಉತ್ಪನ್ನಗಳ ಮಾರಾಟಕ್ಕೆ ಕೇಂದ್ರ ಕಚೇರಿಯಿಂದ ಮತ್ತು ಶಾಖೆಗಳಿಂದ ನೇಮಕ ಮಾಡಲ್ಪಟ್ಟ ಮರು ವಿತರಕರೊಂದಿಗೆ ಕಂಪನಿಯು ಯಾವುದೇ ಔಪಚಾರಿಕ ಒಪ್ಪಂದಗಳನ್ನು ಮಾಡಿಕೊಂಡಿಲ್ಲ. ಮರು ವಿತರಕರನ್ನು ವಿವಿಧ ಪ್ರದೇಶಗಳಿಗೆ ನೇಮಕ ಮಾಡಲಾಗಿದೆ, ಒಂದೊಮ್ಮೆ ಜವಾಬ್ದಾರಿಗಳನ್ನು ನಿಭಾಯಿಸಲು ಸಾಧ್ಯಾಗದೇ ಇದ್ದ ಸಂದರ್ಭದಲ್ಲಿ ಕಂಪನಿಯು ಮರು ವಿತರಕರನ್ನು ಬದಲಾಯಿಸುವುದು. ಉತ್ಪನ್ನಗಳ ಮಾರಾಟ ಜಾಲಕ್ಕೆ ಮರು ವಿತರಕರು ಪ್ರಮುಖ ಕೊಂಡಿಯಾಗಿದ್ದು ಕಂಪನಿಯ ಉತ್ಪನ್ನಗಳ ಮಾರಾಟದ ಬಹುಭಾಗವು ಇಂತಹ ಮರು ವಿತರಕರನ್ನು ಅವಲಂಭಿಸಿದೆ. ಹೆಚ್ಚುವರಿಯಾಗಿ, ಮರು ವಿತರಕರೊಂದಿಗಿನ ಸಂಬಂಧವೂ ಸೇರಿದಂತೆ ಕಂಪನಿಯ ಕ್ಷೇತ್ರ ಮಾರಾಟ ಚಟುವಟಿಕೆಗಳು ಕಂಪನಿಯ ಕ್ಷೇತ್ರ ಗುತ್ತಿಗೆ ನೌಕರರಿಂದ ನಿರ್ವಹಿಸಲ್ಪಡುವುದು. ಔಪಚಾರಿಕ ಒಪ್ಪಂದವು ಇಲ್ಲದೇ ಇರುವುದರಿಂದ ಮರು ವಿತರಕರ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಮತ್ತು ಕಂಪನಿ ಮತ್ತು ಕಂಪನಿಯ ಭವಿಷ್ಯದ ಮಾರಾಟದ ನಿರೀಕ್ಷೆಗಳ ಮೇಲೆ ಪ್ರಭಾವದ ಕುರಿತು ಖಾತರಿಪಡಿಸಲು ನಮಗೆ ಸಾಧ್ಯವಾಗಿಲ್ಲ.

12. ಟಿಪ್ಪಣಿ ಸಂಖ್ಯೆ 18–ಕ್ಕೆ ಗಮನ ಸೆಳೆಯಲಾಗಿದೆ– ಇತರೇ ಆದಾಯ–ನೌಕರರ ಪಿಂಚಣಿ ಮರುಪಾವತಿ. ಈ ಮೊದಲಿನ ಮೈಸೂರು ಗಂಧದೆಣ್ಣೆ ಕಾರ್ಖಾನೆಯ ಮೈಸೂರು, ಬೆಂಗಳೂರು ಹಾಗೂ ಶಿವಮೊಗ್ಗಗಳಲ್ಲಿ ಉದ್ಯೋಗಕ್ಕೆ ಸೇರ್ಪಡೆಯಾದ ನೌಕರರರಿಗೆ ಕರ್ನಾಟಕ ಸರ್ಕಾರದಿಂದ ಹಿಂದಿನ ವರ್ಷಗಳಲ್ಲಿ ಇತ್ಯರ್ಥವಾದ ಅಂತಿಮ ಬಾಕಿ ಪಾವತಿಗಳನ್ನು ಕಂಪನಿಯು ಲೆಕ್ಕ ಹಾಕುತ್ತದೆ. ಇಂತಹ 250 ನೌಕರರ ಇತ್ಯರ್ಥಗಳನ್ನು ಹಣಕಾಸು ವರ್ಷ 2020–21ಕ್ಕೆ ಅಂತಹ 250 ನೌಕರರ ಮರುಪಾವತಿಗಳನ್ನು ಕಂಪನಿಯು ಪಡೆದಿದ್ದು, ಕಂಪನಿಯ ಬಳಿ ಒಟ್ಟಾರೆ ಅಂತಹ ನೌಕರರ ಸಂಖ್ಯೆಯ ಅರ್ಹ ಪ್ರಕರಣಗಳ ಮತ್ತು ವಸೂಲಾತಿಯ ಸಂಭಾವ್ಯ ಮೊತ್ತ /ಸರ್ಕಾರದಿಂದ ಸ್ವೀಕರಿಸಬೇಕಾದ ಮರುಪಾವತಿ ಕುರಿತಂತೆ ಒಟ್ಟು ನಿರ್ಣಾಯಕ ದಾಖಲೆಗಳು ಕಂಪನಿ ಬಳಿ ಇಲ್ಲ. ಇಂತಹ ಮಾಹಿತಿ ಲಭ್ಯವಿಲ್ಲದ ಸಂದರ್ಭದಲ್ಲಿ , ಹಣಕಾಸು ವಿವರಣ ಪಟ್ಟಿಗಳಲ್ಲಿ ಇಂತಹ ವಹಿವಾಟುಗಳ ಪರಿಣಾಮವನ್ನು ಅಳತೆ ಮಾಡಲು ಸಾಧ್ಯವಾಗುವುದಿಲ್ಲ.

13 ಟಿಪ್ಪಣಿ 38.viಕ್ಕೆ ಗಮನ ಸೆಳೆಯಲಾಗಿದೆ– ಸಾಮಾನ್ಯ, ಕಂಪನಿಯು ಖರೀದಿ ಮಾಡಿದ ಕಚ್ಚಾ ವಸ್ತುಗಳ ದರಖಾಸ್ತು (ಟೆಂಡರ್) ಮತ್ತು ಖರೀದಿ ಕುರಿತಂತೆ ಲೋಕಾಯುಕ್ತ ಪೋಲೀಸರಿಂದ ತನಿಖೆ. ತನಿಖೆ ಮುಂದುವರೆಯುತ್ತಿರುವುದರಿಂದ, ಸರ್ಕಾರದ ನಿರ್ದೇಶನಗಳ ಅನುಪಾಲನೆ ಮತ್ತು ಕಂಪನಿಯಿಂದ ಕಚ್ಚಾವಸ್ತುಗಳ ಖರೀದಿಯಲ್ಲಿ ಆಂತರಿಕ ನಿಯಂತ್ರಣಗಳ ಪರ್ಯಾಪ್ತತೆ ಕುರಿತು ಟಿಪ್ಪಣಿ ಮಾಡಲು ನಮಗೆ ಸಾಧ್ಯವಾಗುವುದಿಲ್ಲ. ಈ ಸಂಬಂಧ ನಮಗೆ ಯಾವುದೇ ದಾಖಲೆ/ಮಾಹಿತಿಗಳನ್ನು ನಮಗೆ ಒದಗಿಸಲಾಗಿಲ್ಲ.

14. ಟಿಪ್ಪಣಿ 28ಕ್ಕೆ ಗಮನ ಸೆಳೆಯಲಾಗಿದೆ– ಸಂಭವನೀಯ ಹೊಣೆಗಾರಿಕೆಗಳು, ಬಂಡವಾಳ ಮತ್ತು ಇತರೇ ಬದ್ದತೆಗಳು ಕಂಪನಿಯ ಕೇಂದ್ರ ಕಚೇರಿ ವಿರುದ್ಧ ದಾವೆಗಳ ಮೇಲೆ ಸಂಭವನೀಯ ಹೊಣೆಗಾರಿಕೆಗಳ ಹಣಕಾಸು ಪರಿಣಾಮ ಸಾಧ್ಯತೆಗಳನ್ನು ಕಂಪನಿ ವರದಿ ಮಾಡಿದೆ. ಕಂಪನಿಯು ಅಂತಹ ಕಾನೂನು ದಾವೆಗಳ ದಾಖಲೆಗಳನ್ನು ಹೊಂದಿಲ್ಲ ಮತ್ತು ಸಂಪೂರ್ಣ ಮಾರಾಟ ವಹಿವಾಟು ಹೊರಹೊಮ್ಮುವ ಕಂಪನಿಯ ಶಾಖಾ ಕಚೇರಿಗಳಿಗೆ ಸಂಬಂಧಪಟ್ಟಂತೆ ಇತರೇ ಸಂಭವನೀಯ ಹೊಣೆಗಾರಿಕೆಗಳ ಕುರಿತಂತೆ ಕಂಪನಿಯು ಯಾವುದೇ ದಾಖಲೆಗಳನ್ನು ಹೊಂದಿಲ್ಲವಾದ್ದರಿಂದ ಮತ್ತು ನಿಖರತೆ / ಇಲ್ಲವಾದರೆ ವರದಿಯಾದ ಸಂಭವನೀಯ ಹೊಣೆಗಾರಿಕೆಗಳು ಮತ್ತು ಕಂಪನಿಯ ಹಣಕಾಸು ವಿವರಣಾ ಪಟ್ಟಿ ಮೇಲೆ ಅದರ ಪರಿಣಾಮದ ಸಾಧ್ಯತೆಗಳ ಕುರಿತು ನಾವು ಟಿಪ್ಪಣಿ ಮಾಡಲು ಸಾಧ್ಯವಾಗುವುದಿಲ್ಲ.

15. ಕಂಪನಿಯು ಆದಾಯ ತೆರಿಗೆಗೆ ಸಂಬಂಧಿಸಿದಂತೆ ಬಾಕಿಗಳನ್ನು ತಾಳೆಯಾಗುವ ಹೊಣೆಗಾರಿಕೆ ಸೇರಿದಂತೆ ಮುಂಗಡ ತೆರಿಗೆ/ಮರು ಪಾವತಿಗಳು/ವಿವಾದಿತ ತೆರಿಗೆಗಳು ಮೇಲ್ಮನವಿ ಅಡಿಯಲ್ಲಿರುವುದೂ ಒಳಗೊಂಡಂತೆ ಹೊಂದಾಣಿಕೆ ಮಾಡಿಲ್ಲ ಮತ್ತು ಹಣಕಾಸು ವಿವರಣಾ ಪಟ್ಟಿಯಲ್ಲಿ (ಎಫ್‌ಎಸ್) ಸಮರ್ಪಕವಾಗಿ ವರ್ಗೀಕರಿಸಿಲ್ಲ. ಕಂಪನಿ ಒದಗಿಸಿರುವ ಸಂಬಂಧಿತ ಮೇಲ್ಮನವಿ ದಾಖಲೆಗಳು/ ಆದಾಯ ತೆರಿಗೆ ಪೋರ್ಟಲ್ ಆಧರಿತವಾಗಿ ಆದೇಶದ ಕಂಡಿಕೆ viiಗೆ ಸಂಬಂಧಿಸಿದಂತೆ ಅನುಬಂಧ–ಎ ಕಂಡಿಕೆ vii ರ ನಮ್ಮ ಟಿಪ್ಪಣಿಗಳ ಮೇಲೆ ಗಮನ ಸೆಳೆಯಲಾಗಿದೆ, ಮೇಲೆ ಹೇಳಿದಂತೆ ಇಂತಹ ಹೊಂದಾಣಿಕೆ

ಇಲ್ಲದೇ ಇರುವುದರಿಂದ ಇದು ನಮ್ಮಿಂದ ಸ್ವತಂತ್ರವಾಗಿ ಮೌಲ್ಯೀಕರಿಸಲಾಗಿಲ್ಲ.

16. ಹಣಕಾಸು ವಿವರಣಾ ಪಟ್ಟಿಗೆ ಟಿಪ್ಪಣಿ ಸಂ.23– ಇತರೇ ಖರ್ಚುಗಳು ದರಗಳು ಮತ್ತು ರೂ.33.28 ಕೋಟಿಯ ತೆರಿಗೆಗಳನ್ನು ಒಳಗೊಂಡಿರುವುದು, ಇದರಲ್ಲಿ ಕಂಪನಿಯು ಬೆಂಗಳೂರು ಕಾರ್ಖಾನೆ, ಮೈಸೂರು ಕಾರ್ಖಾನೆ ಮತ್ತು ಶಿವಮೊಗ್ಗ ಕಾರ್ಖಾನೆಗಳ ಖಾಲಿ ಜಾಗಕ್ಕೆ 2003ರಿಂದ 2023ರ ಅವಧಿವರೆಗೆ ರೂ.20.22 ಕೋಟಿ ರೂ ಆಸ್ತಿ ತೆರಿಗೆ ಹೊಣೆಗಾರಿಕೆಗೆ ಮತ್ತು ರೂ.9.61 ಕೋಟಿ ಹಣಕಾಸು ವರ್ಷ 2017–18ರ ಜಿಎಸ್‌ಟಿ ಬೇಡಿಕೆಗೆ ಮತ್ತು ರೂ.3.45 ಕೋಟಿ ಇತರೇ ಖರ್ಚುಗಳಿಗೆ ಅವಕಾಶ ಮಾಡಿಕೊಟ್ಟಿದೆ. ಇತರೇ ಖರ್ಚುಗಳು ರೂ.3.45 ಕೋಟಿಗೆ ಸ್ಪಷ್ಟವಾದ ವಿವರಗಳು ಮತ್ತು ಅಂತಹ ಹೊಣೆಗಾರಿಕೆಗಳ ಬಾಹ್ಯ ದೃಢೀಕರಣ ಇಲ್ಲದೇ ಇರುವುದರಿಂದ ನಿಖರತೆ ಅಥವಾ ಖಾತೆಗಳ ಪುಸ್ತಕದಲ್ಲಿ ಮಾಡಲಾದ ಅವಕಾಶಗಳನ್ನು ದೃಢೀಕರಿಸಲು ನಮಗೆ ಸಾಧ್ಯವಾಗಿಲ್ಲ.

17. Ind AS 116ರ ಅರ್ಥದೊಳಗೆ ಗುತ್ತಿಗೆದಾರ ಬರುವುದರಿಂದ ಕಂಪನಿಯು ತಾನು ಮಾಡಿಕೊಂಡಿರುವ ಗುತ್ತಿಗೆ ಒಪ್ಪಂದಗಳನ್ನು ಗುರುತಿಸಿಲ್ಲ– ಗುತ್ತಿಗೆಗಳು ಮತ್ತು ಮಾನ್ಯತೆಯ ತತ್ವಗಳು, ಮಾಪನಗಳು ಮತ್ತು ಅದರಲ್ಲಿನ ಪ್ರಕಟಣೆಯನ್ನು ಹಾಗಾಗಿ ಅಳವಡಿಸಿಕೊಂಡಿಲ್ಲ, ಆದರೆ ಒಪ್ಪಂದದ ಕರಾರಿನ ಪ್ರಕಾರ ಪಾವತಿಸಬೇಕಾದ ಬಾಡಿಗೆಯನ್ನು ಆದಾಯ ಮತ್ತು ನಷ್ಟ ವಿವರಣಾ ಪಟ್ಟಿಗೆ ಸೇರಿಸಿದೆ.

18. ಟಿಪ್ಪಣಿ ಸಂಖ್ಯೆ.11 ಮುಂದೂಡಲ್ಪಟ್ಟ ತೆರಿಗೆ ಸ್ವತ್ತು (ಹೊಣೆಗಾರಿಕೆ) –ನಿವ್ವಳ: ರೂ. 0.93 ಕೋಟಿಗೆ ಪ್ರಸ್ತುತವಲ್ಲದ ಹೊಣೆಗಾರಿಗಳನ್ನು ಕಡಿತಗೊಳಿಸಲಾಗಿದೆ. ಮತ್ತು ಅದರಿಂದಾಗಿ ತೆರಿಗೆ ನಂತರದ ಲಾಭದ ಮೇಲೆ ಮತ್ತು ಕಂಪನಿಯ ಇತರೇ ಈಕ್ವಿಟಿ ಪರಿಣಾಮವಾಗಲಿದೆ.

19. ಕಂಪನಿಯ ಫ್ಲೆಕ್ಸಿ ಠೇವಣಿಗಳನ್ನು ಪರಾಮರ್ಶಿಸಿದಾಗ, ಫ್ಲೆಕ್ಸಿ ಠೇವಣಿಗಳನ್ನು ಕೆನರಾ ಬ್ಯಾಂಕ್‌ನಲ್ಲಿ 6 ತಿಂಗಳಿಗೆ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ 12 ತಿಂಗಳಿಗೆ ಹೊಂದಿರುವುದನ್ನು ಗಮನಿಸಲಾಗಿದೆ.ಈ ಫ್ಲೆಕ್ಸಿ ಠೇವಣಿಗಳ ಅಸಲು ಅವಧಿ ಮುಕ್ತಾಯವು ಮೂರು ತಿಂಗಳಿಗೂ ಹೆಚ್ಚಾಗಿರುವುದರಿಂದ ಅವುಗಳು ನಗದು ಮತ್ತು ನಗದು ಸಮಾನಗಳ ಅಡಿಯಲ್ಲಿ ಬರುವುದಿಲ್ಲ ಮತ್ತು ನಗದು ಮತ್ತು ನಗದು ಸಮಾನಗಳನ್ನು ಹೊರತಾಗಿ ಬ್ಯಾಂಕ್ ಶಿಲ್ಕುಗಳಡಿಯಲ್ಲಿ ವರ್ಗೀಕರಿಸಬೇಕು. ಇದು ನಗದು ಮತ್ತು ನಗದು ಸಮಾನಗಳ ಅತ್ಯೋಕ್ತಿಯಾಗಿದ್ದು ನಗದು ಮತ್ತು ನಗದು ಸಮಾನಗಳ ಹೊರತಾಗಿ ರೂ.78.53 ಕೋಟಿ ನ್ಯೂನ್ಯೋಕ್ತಿಯಾಗಿದೆ.

20. ಕಂದಾಯ ಪ್ರಾಧಿಕಾರಗಳೊಂದಿಗೆ ಬಾಕಿ (ಶಿಲ್ಕು)ಯು ರೂ.5.59 ಕೋಟಿ ಋಣಾತ್ಮಕ ಶಿಲ್ಕು ಆಗಿದೆ, ಹೇಳಲಾದ ಈ ಮೊತ್ತವು ಹಣಕಾಸು ಪರಾಮರ್ಶೆ ವರ್ಷ 2020–21ನೇ ವರ್ಷಕ್ಕೆ ಆದಾಯ ತೆರಿಗೆ ಪ್ರಾಧಿಕಾರಗಳಿಂದ ಐಟಿ ಮರುಪಾವತಿಯಾಗಿ ಸ್ವೀಕರಿಸಲಾಗಿದೆ, ಇದು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಪತ್ರ ನೀತಿಗೆ ಅನ್ವಯವಾಗುವಂತಿಲ್ಲ. ಇದು ಇತರೇ ಹಣಕಾಸು ಸ್ವತ್ತುಗಳ ನ್ಯೂನ್ಯೋಕ್ತಿಯಾಗಲು ಕಾರಣವಾಗಿದ್ದು (ಇದು ಪಾವತಿಸಬೇಕಾಗಿರುವುದರಿಂದ) ಆದಾಯವು ರೂ.5.59 ಕೋಟಿ ನ್ಯೂನ್ಯೋಕ್ತಿಯಾಗಿದೆ.

21. ಮುಖ್ಯಮಂತ್ರಿ ಪರಿಹಾರ ನಿಧಿಗೆ ರೂ.8.00 ಕೋಟಿ ಪಾವತಿಸಬೇಕಿರುವ ಬಾಕಿ ಹೊಣೆಗಾರಿಕೆಯು ಇತರೇ ಪಾವತಿಯಾಗಬೇಕಿರುವದರಲ್ಲಿ ಸೇರಿದೆ. 361ನೆಯ ಆಡಳಿತ ಮಂಡಳಿಯ ಸಭೆಯಂತೆ, 2022–23ನೇ ಸಾಲಿಗೆ ರೂ.5.00 ಕೋಟಿಗಳನ್ನು ಪಾವತಿಸಲು ಸಭೆ ಅನುಮೋದನೆ ನೀಡಿದೆ. ಈ ಮೊತ್ತವು ಪ್ರಸ್ತುತ ಸಾಲಿನಲ್ಲಿ ಪಾವತಿಗೆ ಬಾಕಿ ಇದೆ. ಆದಾಗ್ಯೂ, ಆಡಳಿತ ಮಂಡಳಿಯ ರೂ.5.00 ಕೋಟಿ ಅನುಮೋದನೆ ಹೊರತಾಗಿಯೂ ರೂ.8.00 ಕೋಟಿ ಮುಖ್ಯಮಂತ್ರಿ ಪರಿಹಾರ ನಿಧಿಗೆ ಪಾವತಿಸಬೇಕಾಗಿರುವುದು ಎಂದು ಲೆಕ್ಕ ಮಾಡಲಾಗಿದೆ. ಇದು ಇತರೇ ಹಣಕಾಸು ಹೇಳಿಕೆಯ (ಇತರೇ ಪಾವತಿಸಬೇಕಾದವು) ರೂ.3.00 ಕೋಟಿ ಅತ್ಯೋಕ್ತಿಯಾಗಿದೆ ಮತ್ತು ಈ ಮೊತ್ತಕ್ಕೆ ಆದಾಯವು ನ್ಯೂನ್ಯೋಕ್ತಿಯಾಗಿದೆ ಮತ್ತು ಕಂಪನಿಯ ಮೀಸಲು ಮತ್ತು ಹೆಚ್ಚುವರಿ ಸ್ಥಿತಿ ಮೇಲೆ ಸಂವಾದಿಯಾದ ಪರಿಣಾಮ ಬೀರುವುದು.

22. ದರಗಳು ಮತ್ತು ತೆರಿಗೆಗಳ ಲೆಕ್ಕವನ್ನು ಪರಾಮರ್ಶಿಸಿದಾಗ, ಹಣಕಾಸು ವಿವರಣಾ ಪಟ್ಟಿಗಳ ಪ್ರಕಾರ ರೂ.33.28 ಕೋಟಿ ದರಗಳು ಮತ್ತು ತೆರಿಗೆಗಳಡಿಯಲ್ಲಿ ಶಿಲ್ಕು ತೋರಿಸಲಾಗಿದೆ, ಇದೇ ವೇಳೆ ಕಂಪನಿಯ ಖರ್ಚು ಮತ್ತು ಜಮಾಗಳ ಸಮತೋಲನ (ಟ್ರಯಲ್ ಬ್ಯಾಲನ್ಸ್) ಪ್ರಕಾರ ಮೊತ್ತವನ್ನು ರೂ.42.95 ಕೋಟಿ ಎಂದು ತೋರಿಸಲಾಗಿದೆ ಮತ್ತು ಖಾತೆ ಪುಸ್ತಕದ ಪ್ರಕಾರ 39.26 ಕೋಟಿ ಎಂದು ತೋರಿಸಲಾಗಿದೆ. "ದರಗಳು ಮತ್ತು ತೆರಿಗೆಗಳು" ಅಡಿಯಲ್ಲಿ ಶಿಲ್ಕಿನ ನಿಖರತೆಯ ಹೊಂದಾಣಿಕೆ ಬಾಕಿ ಇದೆ.

23. 31 ಮಾರ್ಚ್ 2023ರಂತೆ ತೆರಿಗೆ ಮುಂಗಡದಲ್ಲಿ ಶಿಲ್ಕು ರೂ.0.44 ಕೋಟಿ ಮೆ॥ ಓರಿಯೆಂಟಲ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್‌ಗೆ ಖಾತೆಯಲ್ಲಿರುವುದನ್ನು ನಾವು ಗಮನಿಸಿದ್ದೇವೆ. ಫ್ಲೀಟ್ ರ್‍ಯಾಪಿಂಗ್ ಯಂತ್ರವನ್ನು ಸರಬರಾಜು ಮಾಡಲು ಕಂಪನಿಯು ರೂ.99.42 ಲಕ್ಷವನ್ನು ಮುಂಗಡವಾಗಿ (ಜಿಎಸ್‌ಟಿ ಸೇರಿಸಿ) ಮೆ॥ ಓರಿಯೆಂಟಲ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್‌ಗೆ ಪಾವತಿಸಿದೆ. ತಾಂತ್ರಿಕ ದೋಷಗಳಿಂದಾಗಿ ಯಂತ್ರದ ಕಾರ್ಯಾರಂಭವು ಫೆಬ್ರವರಿ 2020ರಿಂದಲೂ

ಬಾಕಿ ಇದೆ ಮತ್ತು ಸರಬರಾಜುದಾರ ಸಮಸ್ಯೆ ಪರಿಹರಿಸಲು ಸಮಯ ಪಡೆದಿದ್ದಾರೆ. 2021–22ನೇ ಸಾಲಿನಲ್ಲಿ, ಕಂಪನಿಯು ರೂ.99.42 ಲಕ್ಷ ಮೊತ್ತಕ್ಕೆ ಮುಂಗಡವನ್ನು ಅಪಾಯ ವೆಚ್ಚ ಪಾವತಿಸಬೇಕಾಗಿರುವುದನ್ನು ಜಮಾ ಮಾಡುವ ಮೂಲಕ ಅಪಾಯ ವೆಚ್ಚ ಖರ್ಚುಗಳಾಗಿ ಖರ್ಚು ಹಾಕಲು ಅವಕಾಶ ಮಾಡಿತ್ತು. ಇದು ರೂ.0.44 ಕೋಟಿ ಅಪಾಯ ವೆಚ್ಚ ಖರ್ಚುಗಳ ಮತ್ತು ಪಾವತಿಸಬೇಕಾಗಿರುವ ಅಪಾಯ ವೆಚ್ಚ ಅತ್ಯೋಕ್ತಿಗೆ ಕಾರಣವಾಗಿತ್ತು. ಮೇಲಾಗಿ, ಇದು ರೂ.0.44 ಕೋಟಿ ಇತರರಿಗೆ ಮುಂಗಡದ(ಇತರೇ ಹಣಕಾಸು ಸವತ್ತುಗಳು) ಅತ್ಯೋಕ್ತಿಗೂ ಕಾರಣವಾಗಿತ್ತು.

24. ಕಂಪನಿಯು ತನ್ನ ಆವರಣದಲ್ಲಿ ತನ್ನ ಆಸ್ತಿಯ ಭಾಗವೊಂದನ್ನು ಕೆಎಂಎಫ್‌ಮಳಿಗೆ (ಔಟ್‌ಲೆಟ್) ಗೆ ಗುತ್ತಿಗೆಗೆ ನೀಡಿದೆ. ಲೆಕ್ಕಪರಿಶೋಧನೆಗೆ ಒದಗಿಸಲಾದ ಕಡತಗಳನ್ನು ಗಮನಿಸಿದಾ ಬಾಡಿಗೆದಾರ ಫೆಬ್ರವರಿ 2020ರಿಂದ ಡಿಸೆಂಬರ್ 2020ರವರೆಗೆ ಹಾಗೂ ಮಾರ್ಚ್ 2018ಕ್ಕೂ ಬಾಡಿಗೆ ಮೊತ್ತ ರೂ.0.09 ಕೋಟಿ ಪಾವತಿಸದೇ ಇರುವುದನ್ನು ಗಮನಿಸಲಾಗಿದೆ. ಬೆಂಬಲಿತ ದಾಖಲೆಗಳು ಇಲ್ಲದೇ ಇರುವುದರಿಂದ ಇದು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆಯೇ ಮತ್ತು ಹಣಕಾಸು ವಿವರಣಾ ಪಟ್ಟಿಯಲ್ಲಿ ತೋರಿಸಲಾಗಿದೆಯೇ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ವಿಚಾರಿಸಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿಲ್ಲ, ಈ ಮಟ್ಟಿಗೆ ಸ್ವೀಕೃತಿಯಾಗಬೇಕಿರುವುದರ ನ್ಯೂನ್ಯೋಕ್ತಿಯಾಗಿದೆ ಮತ್ತು ಇತರೇ ಆದಾಯ ನ್ಯೂನ್ಯೋಕ್ತಿಯಾಗಿದೆ.

## 3. ವಿಷಯದ ಪ್ರಾಧಾನ್ಯತೆ :

ಹಣಕಾಸು ವಿವರಣಾ ಪಟ್ಟಿಗಳಿಗೆ ಟಿಪ್ಪಣಿಗಳಲ್ಲಿ ಈ ಕೆಳಗಿನ ವಿಷಯಗಳ ಕುರಿತು ನಾವು ಗಮನಸೆಳೆಯುತ್ತೇವೆ.

1. ಹಣಕಾಸು ವಿವರಣಾ ಪಟ್ಟಿಗಳಿಗೆ ಟಿಪ್ಪಣಿ ಸಂಖ್ಯೆ 23–ಇತರೇ ಖರ್ಚುಗಳು ಅನುಮಾನಾಸ್ಪದ ಸಾಲಗಳಿಗೆ ಅವಕಾಶ ರೂ.19.83 ಕೋಟಿ ರೂ ಸೇರಿದೆ. Ind AS 109ರ ಅಡಿಯಲ್ಲಿ ಅಗತ್ಯವಾಗಿರುವ ನಿರೀಕ್ಷಿತ ಸಾಲ (ಕ್ರೆಡಿಟ್) ನಷ್ಟದ ಮೇಲೆ ಕಂಪನಿಯು ಯಾವುದೇ ಮೌಲ್ಯಮಾಪನ ಮಾಡಿಲ್ಲ, ಆದಾಗ್ಯೂ ಗ್ರಾಹಕರಿಂದ 6 ತಿಂಗಳಿಗೂ ಹೆಚ್ಚಿನ ಅವಧಿಯ ರೂ.19.83 ಕೋಟಿ ರೂಗಳಿಗೆ ಅವಕಾಶವನ್ನು ಮಾಡಲಾಗಿದೆ.

2. ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿ ಸಂ.18 – ಇತರೇ ಆದಾಯ–ಈ ಹಿಂದಿನ ಅವಧಿಗೆ ಸಂಬಂಧಿಸಿ ನಿಶ್ಚಿತ ಅವಧಿಗೆ ಕಂಪನಿಯ ಲಾಭಕ್ಕೆ ಸೇರಿಸಲಾದ ಮೊತ್ತಗಳ (ರಿಟರ್ನ್‌ಬ್ಯಾಕ್ಸ್) ರೂ.1.62 ಕೋಟಿ.

   ಈ ವಿಷಯಗಳ ಕುರಿತು ನಮ್ಮ ಅಭಿಪ್ರಾಯ ಬದಲಾವಣೆ ಮಾಡಿಲ್ಲ.

## 4. ಇತರೇ ಮಾಹಿತಿ

1. ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರ ಮಂಡಳಿಯು ಇತರ ಮಾಹಿತಿಯ ಜವಾಬ್ದಾರಿಯನ್ನು ಹೊಂದಿದೆ. ಇತರ ಮಾಹಿತಿಯು ಕಂಪನಿಯ ವಾರ್ಷಿಕ ವರದಿಯಲ್ಲಿ ಸೇರಿಸಲಾದ ಮಾಹಿತಿಯನ್ನು ಒಳಗೊಂಡಿದೆ, ಆದರೆ ಹಣಕಾಸಿನ ವಿವರಣಾ ಪಟ್ಟಿಗಳು ಮತ್ತು ನಮ್ಮ ಲೆಕ್ಕಪರಿಶೋಧಕರ ವರದಿಯನ್ನು ಒಳಗೊಂಡಿಲ್ಲ.

2. ಲೆಕ್ಕಪತ್ರ ಪುಸ್ತಕ :– ಕಂಪನಿಯ ಲೆಕ್ಕಪತ್ರ ಪುಸ್ತಕಗಳನ್ನು ಟ್ಯಾಲಿಯಲ್ಲಿ ನಿರ್ವಹಿಸಲಾಗುತ್ತಿದೆ. ಆದಾಗ್ಯೂ, ಕೆಲವೊಂದು ಪೂರಕ ದಾಖಲೆಗಳಾದ ವೇತನ ಪಟ್ಟಿ, ದಾಸ್ತಾನು, ಉದ್ಯೋಗಿಗಳ ಅಂಕಿ ಅಂಶ, ಸ್ವತ್ತಿನ ರಿಜಿಸ್ಟರ್‌ಗಳನ್ನು ಎಕ್ಸೆಲ್ ಸ್ಪ್ರೆಡ್ ಶೀಟ್ (ಹಾಳೆ)ಗಳಲ್ಲಿ ನಿರ್ವಹಿಸಲಾಗುತ್ತಿದೆ. ಎಲ್ಲೆಲ್ಲಿ ತಪ್ಪುಗಳಿವೆಯೋ, ಅದನ್ನು ಪರಾಮರ್ಶಿಸಲಾಗಿದೆ ಮತ್ತು ಅವುಗಳು ಕ್ರಮಬದ್ಧವಾಗಿದೆ ಎಂದು ಆಡಳಿತವು ತಿಳಿಸಿದೆ. ಬುಕ್ ಕೀಪಿಂಗ್ ವ್ಯವಸ್ಥೆ ಮತ್ತು ಇತರೇ ದಾಖಲೆಗಳಾದ ವೇತನ ರಿಜಿಸ್ಟರ್‌ಗಳು, ಆಸ್ತಿ(ಸ್ವತ್ತು)/ದಾಸ್ತಾನುಗಳ ದಾಖಲೆಗಳು ತಪ್ಪುಗಳಿಗೆ/ಅನಧಿಕೃತ ತಿದ್ದುಪಡಿಗಳಿಗೆ ಗುರಿಯಾಗುವ ಆಸ್ಪದವಿದೆ. ಲೆಕ್ಕ ಪುಸ್ತಕಗಳ ಖಚಿತತೆ, ಖಾತರಿಪಡಿಸಿಕೊಳ್ಳಲು ಸಾಕಷ್ಟು ಎಚ್ಚರಿಕೆ ವಹಿಸಲಾಗಿದೆ ಎಂಬ ಆಡಳಿತ ಮಂಡಳಿಗಳ ಪ್ರತಿನಿಧಿತ್ವವನ್ನು ನಾವು ನಂಬಿದ್ದೇವೆ. ಆಂತರಿಕ ಲೆಕ್ಕಪರಿಶೋಧಕರು ಪುಸ್ತಕಗಳ ಖಚಿತತೆ ಖಾತರಿಪಡಿಸಿಕೊಳ್ಳಲು ಸಾಕಷ್ಟು ಎಚ್ಚರಿಕೆ ವಹಿಸಲಾಗಿದೆ, ಆಂತರಿಕ ಲೆಕ್ಕಪರಿಶೋಧಕರು ಇದರ ಸೂಕ್ತ ಪರಿಶೀಲನೆಯನ್ನು ಮಾಡಿದ್ದಾರೆ ಮತ್ತು ಲೆಕ್ಕಪರಿಶೋಧಕರು ಇದರ ಸಾಕಷ್ಟು ಪರಿಶೀಲನೆ ನಡೆಸಿದ್ದಾರೆ ಮತ್ತು ಅನಧಿಕೃತ ತಿದ್ದುಪಡಿಗಳು/ತಿದ್ದುಪಡಿಗಳು ಇಲ್ಲ ಎಂಬುದನ್ನು ಖಾತರಿಪಡಿಸಿವೆ.

3. ಕಂಪನಿಯಿಂದ ನೇಮಕಗೊಂಡಿರುವ ಬಾಹ್ಯ ಲೆಕ್ಕಪತ್ರ ಪರಿಣಿತರು ಹಣಕಾಸಿನ ವಿವರಣ ಪಟ್ಟಿ ಸಿದ್ಧಪಡಿಸಿದ್ದಾರೆ. ಲೆಕ್ಕಪತ್ರ ಪರಿಣಿತರು ನೀಡಿದ ವಿವರಣೆಯನ್ನು ನಾವು ಅವಲಂಬಿಸಿದ್ದೇವೆ. ನಿಯಮಿತ ಮಧ್ಯಂತರಗಳಲ್ಲಿ ಅಂತರ–ಘಟಕ ವಹಿವಾಟುಗಳನ್ನು ಹೊಂದಾಣಿಕೆ ಮಾಡಲು ಕಂಪನಿಯು ಯಾವುದೇ ಆಂತರಿಕ ಕಾರ್ಯವಿಧಾನವನ್ನು ಹೊಂದಿಲ್ಲ. ಹೇಳಲಾದ ಲೆಕ್ಕಪತ್ರ ಪರಿಣಿತರು ಸಂಪೂರ್ಣ ಲೆಕ್ಕಪತ್ರಗಳನ್ನು ಕ್ರೋಢೀಕರಿಸಿದ್ದಾರೆ. ಕಂಪನಿಯ ಕೇಂದ್ರ ಕಚೇರಿಯು ವೈಯಕ್ತಿಕ ಶಾಖೆಗಳ ಲೆಕ್ಕಪತ್ರಗಳ ಮೇಲೆ ಯುಕ್ತವಾದ ಮೇಲ್ವಿಚಾರಣೆಯನ್ನು ಹೊಂದಿಲ್ಲ. ಲೆಕ್ಕಪತ್ರ ಪರಿಣಿತರು ಕ್ರೋಢೀಕರಿಸಿದ ಲೆಕ್ಕಪತ್ರಗಳ ಮೇಲೆ ನಾವು ಅವಲಂಭಿತರಾಗಿದ್ದೇವೆ.

   ಹಣಕಾಸು ವಿವರಣಾ ಪಟ್ಟಿಗಳ ಮೇಲೆ ನಮ್ಮ ಅಭಿಪ್ರಾಯವು ಇತರೇ ಮಾಹಿತಿಗಳನ್ನು ಒಳಗೊಂಡಿರುವುದಿಲ್ಲ ಮತ್ತು ನಾವು ಯಾವುದೇ ರೀತಿಯ ಭರವಸೆ ಅಥವಾ ಅದರ ತೀರ್ಮಾನವನ್ನು ವ್ಯಕ್ತಮಾಡುವುದಿಲ್ಲ.

ಹಣಕಾಸಿನ ವಿವರಣಾ ಪಟ್ಟಿಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ನಮ್ಮ ಜವಾಬ್ದಾರಿ ಇತರ ಮಾಹಿತಿಯನ್ನು ಓದುವುದು ಮತ್ತು ಹಾಗೆ ಮಾಡುವಾಗ, ಇತರ ಮಾಹಿತಿಯು ಹಣಕಾಸಿನ ವಿವರಣ ಪಟ್ಟಿಗಳಿಗೆ ಭೌತಿಕವಾಗಿ ಹೊಂದಿಕೆಯಾಗುತ್ತದೆಯೇ ಅಥವಾ ಲೆಕ್ಕಪರಿಶೋಧನೆಯಲ್ಲಿ ಪಡೆದ ನಮ್ಮ ಜ್ಞಾನವು ಭೌತಿಕವಾಗಿ ತಪ್ಪಾಗಿ ಕಾಣಿಸಿಕೊಂಡಿದೆ ಎಂದು ಪರಿಗಣಿಸಬೇಕು. ಒಂದೊಮ್ಮೆ, ನಾವು ನಿರ್ವಹಿಸಿದ ಕೆಲಸದ ಆಧಾರದ ಮೇಲೆ, ಈ ಇತರ ಮಾಹಿತಿಯ ವಸ್ತು ತಪ್ಪಾಗಿ ವಿವರಿಸಲಾಗಿದೆ ಎಂದು ನಾವು ತೀರ್ಮಾನಿಸಿದರೆ, ನಾವು ಆ ಸತ್ಯವನ್ನು ವರದಿ ಮಾಡಬೇಕಾಗುತ್ತದೆ. ಆದರೆ ಈ ನಿಟ್ಟಿನಲ್ಲಿ ನಮಗೆ ವರದಿ ಮಾಡಲು ಏನೂ ಇಲ್ಲ.

## 5. ಸ್ವತಂತ್ರ ಹಣಕಾಸು ವಿವರಣಾ ಪಟ್ಟಿಗಳಿಗೆ ಆಡಳಿತ ಮತ್ತು ಆಡಳಿತದ ಮೇಲೆ ಅಧಿಕಾರ ಹೊಂದಿರುವವರ ಜವಾಬ್ದಾರಿ

ಹಣಕಾಸಿನ ಸ್ಥಿತಿ, ಹಣಕಾಸಿನ ಕಾರ್ಯಕ್ಷಮತೆ ಮತ್ತು ಹಣಕಾಸು ಹರಿವಿನ ಬಗ್ಗೆ ನಿಜವಾದ ಮತ್ತು ನ್ಯಾಯಯುತ ದೃಷ್ಟಿಕೋನವನ್ನು ನೀಡುವ ಕಂಪನಿಯು ಸಾಮಾನ್ಯವಾಗಿ ಭಾರತದಲ್ಲಿ ಅಂಗೀಕರಿಸಲ್ಪಟ್ಟ ಲೆಕ್ಕ ಪರಿಶೋಧಕ ತತ್ವಗಳಿಗೆ ಅನುಗುಣವಾಗಿ, ಕಾಯ್ದೆಯ ಸೆಕ್ಷನ್ 133 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಭಾರತೀಯ ಲೆಕ್ಕ ಪರಿಶೋಧಕ ಮಾನದಂಡಗಳೊಂದಿಗೆ ಓದಲಾದ ಕಂಪನಿಗಳ (ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ಸ್) ನಿಯಮಗಳು, 2015 ತಿದ್ದುಪಡಿ, ಪ್ರಕಾರ ಈ ಸ್ವತಂತ್ರ ಹಣಕಾಸಿನ ವಿವರಣಾ ಪಟ್ಟಿ ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ, ಕಂಪನಿಯ ನಿರ್ದೇಶಕರ ಮಂಡಳಿಯು ಕಂಪೆನಿ ಅಧಿನಿಯಮ, 2013 ರ ಸೆಕ್ಷನ್ 134 (5) ರಲ್ಲಿ ಹೇಳಲಾದ ವಿಷಯಗಳಿಗೆ ಜವಾಬ್ದಾರರಾಗಿರುತ್ತಾರೆ. ಈ ಜವಾಬ್ದಾರಿಯು ಕಂಪನಿಯ ಸ್ವತ್ತುಗಳನ್ನು ರಕ್ಷಿಸಲು ಮತ್ತು ವಂಚನೆಗಳು ಮತ್ತು ಇತರ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆಹಚ್ಚಲು ಕಾಯ್ದೆಯ ನಿಬಂಧನೆಗಳಿಗೆ ಅನುಗುಣವಾಗಿ ಸಾಕಷ್ಟು ಲೆಕ್ಕ ಪರಿಶೋಧಕ ದಾಖಲೆಗಳ ನಿರ್ವಹಣೆ; ಸೂಕ್ತ ಲೆಕ್ಕಪತ್ರ ನೀತಿಗಳ ಆಯ್ಕೆ ಮತ್ತು ಅನ್ವಯ; ಸಮಂಜಸವಾದ ಮತ್ತು ವಿವೇಕಯುತವಾದ ತೀರ್ಮಾನ ಮತ್ತು ಅಂದಾಜುಗಳನ್ನು ಮಾಡುವುದು; ಮತ್ತು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ, ಲೆಕ್ಕ ಪರಿಶೋಧಕ ದಾಖಲೆಗಳ ನಿಖರತೆ ಮತ್ತು ಸಂಪೂರ್ಣತೆಯನ್ನು ಖಾತ್ರಿಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಣೆ, ಸ್ವತಂತ್ರ ಮತ್ತು ನ್ಯಾಯಯುತ ದೃಷ್ಟಿಕೋನವನ್ನು ನೀಡುವ ಮತ್ತು ಸ್ವತಂತ್ರ IndAS ಹಣಕಾಸಿನ ವಿವರಣಾ ಪಟ್ಟಿಗಳ ತಯಾರಿಕೆ ಮತ್ತು ಪ್ರಸ್ತುತಿಗೆ ಸಂಬಂಧಿಸಿದೆ ಮತ್ತು ವಂಚನೆ ಅಥವಾ ದೋಷದಿಂದಾಗಿ ವಸ್ತು ತಪ್ಪು ವಿವರಣೆಯಿಂದ ಮುಕ್ತವಾಗಿರುವುದನ್ನೂ ಒಳಗೊಂಡಿದೆ.

ಸ್ವತಂತ್ರ IndAS ಹಣಕಾಸಿನ ವಿವರಣ ಪಟ್ಟಿಗಳನ್ನು ಸಿದ್ಧಪಡಿಸುವಲ್ಲಿ ಆಡಳಿತವು, ಕಂಪನಿಯು ತನ್ನ ಹಣಕಾಸಿನ ಬಾಧ್ಯತೆಗಳನ್ನು ನಿಭಾಯಿಸಿ ಮುಂದುವರೆಯುವ, ಈ ಹಣಕಾಸಿನ ಬಾಧ್ಯತೆಗಳನ್ನು ನಿಭಾಯಿಸುವುದಕ್ಕೆ ಸಂಬಂಧಿಸಿದ ವಿಷಯಗಳಿಗೆ ಅನ್ವಯವಾಗುವುದನ್ನು ಪ್ರಕಟಿಸುವ, ಆಡಳಿತ ಮಂಡಳಿಯು ಕಂಪನಿಯನ್ನು ದಿವಾಳಿ ಎಂದು ಘೋಷಿಸಲು, ಕಾರ್ಯಾಚರಣೆಯನ್ನು ನಿಲ್ಲಿಸಲು ಅಥವಾ ವಾಸ್ತವಿಕ ಪರ್ಯಾಯವನ್ನು ಹೊಂದಿರದಿರುವುದನ್ನು ಹೊರತಾಗಿ ತನ್ನ ಹಣಕಾಸಿನ ಬಾಧ್ಯತೆಗಳನ್ನು ನಿಭಾಯಿಸಿ ಮುಂದುವರೆಯುವುದನ್ನು ಆಧಾರವಾಗಿ ಬಳಸುವುದಕ್ಕೆ ಜವಾಬ್ದಾರವಾಗಿದೆ.

ಕಂಪನಿಯ ಹಣಕಾಸು ವರದಿಗಾರಿಕೆ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡುವುದಕ್ಕೂ ಮಂಡಳಿ ನಿರ್ದೇಶಕರು ಜವಾಬ್ದಾರರಾಗಿದ್ದಾರೆ.

## 6. ಲೆಕ್ಕ ಪರಿಶೋಧಕರ ಜವಾಬ್ದಾರಿ

ಒಟ್ಟಾರೆಯಾಗಿ ಸ್ವತಂತ್ರ IndAS ಹಣಕಾಸಿನ ವಿವರಣಾ ಪಟ್ಟಿಗಳು ವಂಚನೆ ಅಥವಾ ದೋಷದಿಂದಾಗಿ ವಸ್ತುನಿಷ್ಠ ತಪ್ಪು ಹೇಳಿಕೆಯಿಂದ ಮುಕ್ತವಾಗಿವೆಯೇ ಎಂಬುದರ ಕುರಿತು ಸಮಂಜಸವಾದ ಭರವಸೆಯನ್ನು ಪಡೆಯುವುದು ಮತ್ತು ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವ ಲೆಕ್ಕ ಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶಗಳಾಗಿವೆ. ಸಮಂಜಸವಾದ ಭರವಸೆಯು ಉನ್ನತ ಮಟ್ಟದ ಭರವಸೆಯಾಗಿದೆ. ಆದರೆ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ನೀಡಿದ ಲೆಕ್ಕಪರಿಶೋಧನೆಯ ಮಾನದಂಡಗಳಿಗೆ ಅನುಸಾರವಾಗಿ ನಡೆಸಲಾದ ಲೆಕ್ಕಪರಿಶೋಧನೆ ಅಸ್ತಿತ್ವದಲ್ಲಿದ್ದಾಗ ಯಾವಾಗಲೂ ವಸ್ತುನಿಷ್ಠ ತಪ್ಪು ಹೇಳಿಕೆಯನ್ನು ಪತ್ತೆ ಮಾಡುತ್ತದೆ ಎಂಬುದಕ್ಕೆ ಖಾತರಿಯಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ದೋಷದಿಂದ ಉದ್ಭವಿಸಬಹುದು ಮತ್ತು ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ, ಈ ಸ್ವತಂತ್ರ IndAS ಹಣಕಾಸಿನ ವಿವರಣಾ ಪಟ್ಟಿಗಳ ಆಧಾರದ ಮೇಲೆ ತೆಗೆದುಕೊಳ್ಳುವ ಬಳಕೆದಾರರ ಆರ್ಥಿಕ ನಿರ್ಧಾರಗಳ ಮೇಲೆ ಅವು ಪ್ರಭಾವ ಬೀರುತ್ತವೆ ಎಂದು ಸಮಂಜಸವಾಗಿ ನಿರೀಕ್ಷಿಸಬಹುದು.

IndAS ಗಳಿಗೆ ಅನುಗುಣವಾಗಿ ಆಡಿಟ್‌ನ ಭಾಗವಾಗಿ, ನಾವು ಲೆಕ್ಕಪರಿಶೋಧನೆ ಉದ್ದಕ್ಕೂ ವೃತ್ತಿಪರ ತೀರ್ಮಾನ ಮತ್ತು ವೃತ್ತಿಪರ ಸಂದೇಹವನ್ನು ಪ್ರಯೋಗಿಸುತ್ತೇವೆ. ನಮ್ಮ ಅರ್ಹ ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ನಾವು ಪಡೆದ ಲೆಕ್ಕಪರಿಶೋಧನೆ ಪುರಾವೆಗಳು ಸಾಕಷ್ಟು ಮತ್ತು ಸೂಕ್ತವೆಂದು ನಾವು ನಂಬುತ್ತೇವೆ. ನಾವು ಕೂಡ:

6.1 ವಂಚನೆ ಅಥವಾ ದೋಷದ ಕಾರಣದಿಂದಾಗಿ ಹಣಕಾಸಿನ ವಿವರಣಾ ಪಟ್ಟಿ ವಸ್ತುನಿಷ್ಠ ತಪ್ಪು ಹೇಳಿಕೆಯ ಅಪಾಯಗಳನ್ನು ಗುರುತಿಸಿ ಮತ್ತು ನಿರ್ಣಯಿಸಿ, ಆ ಅಪಾಯಗಳಿಗೆ ಸ್ಪಂದಿಸುವ ಲೆಕ್ಕಪರಿಶೋಧನೆ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಿ ಮತ್ತು ನಿರ್ವಹಿಸಿ ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧನೆ ಪುರಾವೆಗಳನ್ನು ಪಡೆದುಕೊಳ್ಳುತ್ತೇವೆ. ವಂಚನೆ, ನಕಲಿ, ಉದ್ದೇಶಪೂರ್ವಕ ಲೋಪಗಳು, ತಪ್ಪು ನಿರೂಪಣೆಗಳು ಅಥವಾ ಆಂತರಿಕ ನಿಯಂತ್ರಣದ ಅತಿಕ್ರಮಣವನ್ನು

ಒಳಗೊಂಡಿರುವುದರಿಂದ ವಂಚನೆಯಿಂದ ಉಂಟಾಗುವ ವಸ್ತುನಿಷ್ಠ ತಪ್ಪು ಹೇಳಿಕೆಯನ್ನು ಕಂಡುಹಿಡಿಯದೇ ಇರುವ ಅಪಾಯವು ದೋಷದಿಂದ ಉಂಟಾಗುವುದಕ್ಕಿಂತ ಹೆಚ್ಚಾಗಿರುತ್ತದೆ.

6.2 ಕಂಪನಿಗಳ ಅಧಿನಿಯಮ, 2013 ರ ಸೆಕ್ಷನ್ 143ರ ಉಪ–ಸೆಕ್ಷನ್ (3) ರ ಷರತ್ತು (i)ರ ಅಡಿಯಲ್ಲಿ ಸೂಕ್ತವಾದ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಆಂತರಿಕ ನಿಯಂತ್ರಣದ ತಿಳುವಳಿಕೆಯನ್ನು ಪಡೆದುಕೊಳ್ಳುತ್ತೇವೆ. ಕಂಪನಿಯು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹೊಂದಿದೆಯೇ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿಯಾಗಿದೆಯೇ ಎಂಬುದರ ಕುರಿತು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಾವು ಜವಾಬ್ದಾರರಾಗಿರುತ್ತೇವೆ.

6.3 ಬಳಸಿದ ಲೆಕ್ಕಪತ್ರ ನೀತಿಗಳ ಸೂಕ್ತತೆ ಮತ್ತು ಲೆಕ್ಕ ಪರಿಶೋಧಕ ಅಂದಾಜುಗಳ ಸಮಂಜಸತೆ ಮತ್ತು ಆಡಳಿತವು ಮಾಡಿದ ಸಂಬಂಧಿತ ಪ್ರಕಟಣೆಗಳ ಮೌಲ್ಯಮಾಪನ ಮಾಡುತ್ತೇವೆ.

6.4 ಕಂಪನಿಯು ತನ್ನ ಹಣಕಾಸಿನ ಬಾಧ್ಯತೆಗಳನ್ನು ನಿಭಾಯಿಸಿ ಮುಂದುವರೆಯುವ ಆಧಾರದ ಮೇಲೆ ಲೆಕ್ಕ ಪತ್ರಗಳ ನಿಖರತೆಯನ್ನು ತೀರ್ಮಾನಿಸುತ್ತೇವೆ ಮತ್ತು ಪಡೆದ ಲೆಕ್ಕ ಪರಿಶೋಧನೆಯ ಪುರಾವೆಗಳ ಆಧಾರದ ಮೇಲೆ, ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದ ವಸ್ತುನಿಷ್ಠ ಅನಿಶ್ಚಿತತೆಯು ಅಸ್ತಿತ್ವದಲ್ಲಿದೆಯೇ, ಇದು ಕಂಪನಿಯು ತನ್ನ ಹಣಕಾಸಿನ ಬಾಧ್ಯತೆಗಳನ್ನು ನಿಭಾಯಿಸಿ ಮುಂದುವರೆಯುವ ಸಾಮರ್ಥ್ಯದ ಮೇಲೆ ಗಮನಾರ್ಹವಾದ ಅನುಮಾನವನ್ನು ಉಂಟುಮಾಡುತ್ತದೆಯೆ? ವಸ್ತುನಿಷ್ಠ ಅನಿಶ್ಚಿತತೆ ಅಸ್ತಿತ್ವದಲ್ಲಿದೆ ಎಂದು ನಾವು ತೀರ್ಮಾನಿಸಿದರೆ, ಸ್ವತಂತ್ರ Ind AS ಹಣಕಾಸಿನ ವಿವರಣಾ ಪಟ್ಟಿಗಳಲ್ಲಿನ ಸಂಬಂಧಿತ ಪ್ರಕಟಣೆಗಳಿಗೆ ಅಥವಾ ಅಂತಹ ಪ್ರಕಟಣೆಗಳು ಸಮರ್ಪಕವಾಗಿದ್ದರೆ, ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಲು ನಾವು ನಮ್ಮ ಲೆಕ್ಕ ಪರಿಶೋಧಕರ ವರದಿಯಲ್ಲಿ ಗಮನ ಸೆಳೆಯುವ ಅಗತ್ಯವಿದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕ ಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆಯಲಾಗಿರುವ ಲೆಕ್ಕಪರಿಶೋಧನೆಯ ಪುರಾವೆಗಳನ್ನು ಆಧರಿಸಿವೆ. ಆದಾಗ್ಯೂ, ಭವಿಷ್ಯದ ಘಟನಾವಳಿಗಳು ಷರತ್ತುಗಳು ಕಂಪನಿಯು ಕಂಪನಿಯು ತನ್ನ ಹಣಕಾಸಿನ ಬಾಧ್ಯತೆಗಳನ್ನು ನಿಭಾಯಿಸಿ ಮುಂದುವರಿಯುವುದನ್ನು ನಿಲ್ಲಿಸಲು ಕಾರಣವಾಗಬಹುದು.

6.5 ಪ್ರಕಟಣೆಗಳನ್ನು ಒಳಗೊಂಡಂತೆ ಸ್ವತಂತ್ರ IndAS ಹಣಕಾಸಿನ ವಿವರಣಾ ಪಟ್ಟಿಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಿಷಯವನ್ನು ಮೌಲ್ಯಮಾಪನ ಮಾಡಿ ಮತ್ತು ಸ್ವತಂತ್ರ IndAS ಹಣಕಾಸಿನ ವಿವರಣಾ ಪಟ್ಟಿಗಳ ನ್ಯಾಯಯುತ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಆಧಾರವಾಗಿರುವ ಈ ಕೆಳಗಿನ ವಹಿವಾಟುಗಳು ಮತ್ತು ಘಟನೆಗಳು ಪ್ರತಿನಿಧಿಸುತ್ತವೆಯೇ ಎನ್ನುವುದನ್ನು ಮೌಲ್ಯಮಾಪನ ಮಾಡುತ್ತೇವೆ.

ನಮ್ಮ ಲೆಕ್ಕ ಪರಿಶೋಧನೆಯ ಸಮಯದಲ್ಲಿ ನಾವು ಗುರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನತೆಗಳನ್ನು ಒಳಗೊಂಡಂತೆ, ಲೆಕ್ಕ ಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ, ಮತ್ತು ಗಮನಾರ್ಹವಾದ ನ್ಯೂನ್ಯತೆಗಳು, ಲೆಕ್ಕಪರಿಶೋಧನೆಯ ಆವಿಷ್ಕಾರಗಳ ಜೊತೆಗೆ, ಇತರ ವಿಷಯಗಳ ಕುರಿತು ಆಡಳಿತದ ಅಧಿಕಾರ ಹೊಂದಿರುವವರೊಂದಿಗೆ ನಾವು ಸಂವಹನ ನಡೆಸುತ್ತೇವೆ.

ನಾವು ಸ್ವಾತಂತ್ರ್ಯದ ಬಗ್ಗೆ ಸಂಬಂಧಿತ ನೈತಿಕ ಅವಶ್ಯಕತೆಗಳನ್ನು ಅನುಸರಿಸಿದ್ದೇವೆ ಎಂಬ ಹೇಳಿಕೆಯೊಂದಿಗೆ ಆಡಳಿತದ ಅಧಿಕಾರ ಹೊಂದಿದವರಿಗೆ ನಾವು ಹೇಳಿಕೆ ಒದಗಿಸುತ್ತೇವೆ ಮತ್ತು ನಮ್ಮ ಸ್ವಾತಂತ್ರ್ಯದ ಮೇಲೆ ಸಮಂಜಸವಾಗಿ ಭಾವಿಸಬಹುದಾದ ಎಲ್ಲಾ ಸಂಬಂಧಗಳು ಮತ್ತು ಇತರ ವಿಷಯಗಳು ಮತ್ತು ಅನ್ವಯಿಸುವ, ಸಂಬಂಧಿತ ಸುರಕ್ಷತೆಗಳ ಕುರಿತು ಅವರೊಂದಿಗೆ ಸಂವಹನ ಮಾಡುತ್ತೇವೆ.

## 7. ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಕುರಿತು ವರದಿ

1. ಕಾಯಿದೆಯ ಸೆಕ್ಷನ್ 143 ರ ಉಪ ವಿಭಾಗ (11) ರ ಪ್ರಕಾರ ಭಾರತದ ಕೇಂದ್ರ ಸರ್ಕಾರವು ಹೊರಡಿಸಿದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2020 ("ಆದೇಶ") ಕ್ಕೆ ಅಗತ್ಯವಿರುವಂತೆ, ಆದೇಶದ ಕಂಡಿಕೆ 3 ಮತ್ತು 4 ರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಕುರಿತು ನಾವು ಅನುಬಂಧ–ಎ ಯಲ್ಲಿ ಹೇಳಿಕೆ ನೀಡಿದ್ದೇವೆ.

- ಕಾಯಿದೆಯ ಸೆಕ್ಷನ್ 143(3) ರ ಪ್ರಕಾರ, ನಾವು ಇವುಗಳನ್ನು ವರದಿ ಮಾಡುತ್ತೇವೆ:

(ಎ) ನಾವು ಕೇಳಿದ್ದೇವೆ ಮತ್ತು ಅರ್ಹವಾದ ಅಭಿಪ್ರಾಯದ ಕಂಡಿಕೆಯನ್ನು ಹೊರತುಪಡಿಸಿ, ನಮ್ಮ ಲೆಕ್ಕ ಪರಿಶೋಧನೆಯ ಉದ್ದೇಶಗಳಿಗಾಗಿ ನಮಗೆ ತಿಳಿದಿರುವ ಮತ್ತು ನಂಬಿಕೆಯ ಅತ್ಯುತ್ತಮವಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಪಡೆದುಕೊಂಡಿದ್ದೇವೆ.

(ಬಿ) ಮೇಲಿನ ಅರ್ಹವಾದ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಲಾದ ವಿಷಯದ ಸಂಭವನೀಯ ಪರಿಣಾಮಗಳನ್ನು ಹೊರತುಪಡಿಸಿ ನಮ್ಮ ಅಭಿಪ್ರಾಯದಲ್ಲಿ, ನಮ್ಮ ಪರೀಕ್ಷೆಯಿಂದ ಕಂಡುಬಂದಂತೆ ಸರಿಯಾದ ಲೆಕ್ಕಪತ್ರ ಪುಸ್ತಕಗಳನ್ನು ಕಾನೂನಿನ ಪ್ರಕಾರ ಕಂಪನಿಯು ಇಲ್ಲಿಯವರೆಗೆ ನಿರ್ವಹಿಸಿದೆ, ಅದನ್ನು ನಿರ್ವಹಿಸುವ ವಿಧಾನವು ಸೂಕ್ತವಾಗಿದೆ ಮತ್ತು ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ನಾವು ಭೇಟಿ ನೀಡದ ಶಾಖೆಗಳಿಂದ ಸ್ವೀಕರಿಸಲಾದ ಸರಿಯಾದ ರಿಟರ್ನ್‌ಗಳ ಮಾಹಿತಿಯನ್ನು ನಮಗೆ ನೀಡಲಾಗಿದೆ.

(ಸಿ) ಈ ವರದಿಯಿಂದ ವ್ಯವಹರಿಸಲಾದ ಆರ್ಥಿಕ ವಿವರ ಪಟ್ಟಿ ಮತ್ತು ಲಾಭ ಮತ್ತು ನಷ್ಟದ ವಿವರಣಾ ಪಟ್ಟಿ ಹಾಗೂ ಹಣದ ಹರಿವಿನ ವಿವರಣಾ ಪಟ್ಟಿಗಳು ಲೆಕ್ಕಪುಸ್ತಿಕೆಗಳೊಂದಿಗೆ ಹೊಂದಾಣಿಕೆಯಲ್ಲಿದೆ.

(ಡಿ) ಮೇಲಿನ ಅರ್ಹವಾದ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಲಾದ ವಿಷಯದ ಸಂಭವನೀಯ ಪರಿಣಾಮಗಳನ್ನು ಹೊರತುಪಡಿಸಿ ನಮ್ಮ ಅಭಿಪ್ರಾಯದಲ್ಲಿ, ಮೇಲೆ ಹೇಳಿದ ಸ್ವತಂತ್ರ IndAS ಹಣಕಾಸಿನ ವಿವರಣಾ ಪಟ್ಟಿಗಳು ಕಂಪನಿಗಳು (IndAS) ನಿಯಮಗಳು, 2015, ಮೇಲಿನ ಅರ್ಹ ಅಭಿಪ್ರಾಯಕ್ಕೆ ತಕ್ಕಂತೆ ತಿದ್ದುಪಡಿಯೊಂದಿಗೆ ಓದಲಾದ ಕಾಯಿದೆಯ ಸೆಕ್ಷನ್ 133 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಭಾರತೀಯ ಲೆಕ್ಕ ಪರಿಶೋಧಕ ಮಾನದಂಡಗಳನ್ನು ಅನುಸರಿಸುತ್ತವೆ.

(ಇ) ಮೇಲಿನ ಅರ್ಹವಾದ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಲಾದ ವಿಷಯಗಳು, ನಮ್ಮ ಅಭಿಪ್ರಾಯದಲ್ಲಿ ಕಂಪನಿಯ ಕಾರ್ಯನಿರ್ವಹಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು.

(ಎಫ್) ನಿರ್ದೇಶಕರಿಂದ 31ನೇ ಮಾರ್ಚ್, 2023 ರಂತೆ ಸ್ವೀಕರಿಸಿದ ಲಿಖಿತ ಪ್ರಾತಿನಿಧ್ಯಗಳ ಆಧಾರದ ಮೇಲೆ,ಆಡಳಿತ ಮಂಡಳಿಯಿಂದ ದಾಖಲೆ ಪಡೆದುಕೊಂಡಂತೆ, ನಿರ್ದೇಶಕರ ಮಂಡಳಿಯು 31ನೇ ಮಾರ್ಚ್, 2023 ರಂತೆ ಕಾಯ್ದೆಯ ಸೆಕ್ಷನ್ 164 (2) ರಂತೆ ನಿರ್ದೇಶಕರಾಗಿ ಆಯ್ಕೆಯಾಗಲು ಯಾವುದೇ ನಿರ್ದೇಶಕರು ಅನರ್ಹರಾಗಿಲ್ಲ.

(ಜಿ) ಸೆಕ್ಷನ್ 143(3) (i) ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆ ಕುರಿತಂತೆ ಲೆಕ್ಕಪರಿಶೋಧಕರ ವರದಿಯನ್ನು ಈ ವರದಿಗೆ ಅನುಬಂಧ ಬಿ ನೀಡಲಾಗಿದೆ.

(ಹೆಚ್) ಕಂಪನಿಗಳ (ಲೆಕ್ಕಪರಿಶೋಧಣೆ ಮತ್ತು ಲೆಕ್ಕಪರಿಶೋಧಕರ) ನಿಯಮಗಳು, 2014ರ ನಿಯಮ 11ರ ಪ್ರಕಾರ ಲೆಕ್ಕ ಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ಇತರ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ನಮ್ಮ ಅತ್ಯುತ್ತಮ ಮಾಹಿತಿ ಮತ್ತು ವಿವರಣೆಗಳ ಪ್ರಕಾರ:

I. ಕಂಪನಿಯು ಇತ್ಯರ್ಥವಾಗದೇ ಉಳಿದಿರುವ ವ್ಯಾಜ್ಯಗಳನ್ನು ಹೊಂದಿದೆ, ತನ್ನ ಹಣಕಾಸಿನ ಸ್ಥಿತಿಯ ಮೇಲೆ ಬಾಕಿ ಉಳಿದಿರುವ ವ್ಯಾಜ್ಯಗಳ ಪ್ರಭಾವವನ್ನು ಸ್ವತಂತ್ರ Ind AS ಹಣಕಾಸಿನ ವಿವರಣಾ ಪಟ್ಟಿಗಳಲ್ಲಿ ಪ್ರಕಟಿಸಿದೆ. ಉಲ್ಲೇಖ **ಅನುಬಂಧ– ಡಿ.**

II. ಕಂಪನಿಯು ಯಾವುದೇ ವಸ್ತುನಿಷ್ಠ ನಿರೀಕ್ಷಿತ ನಷ್ಟಗಳಿರುವ ಉತ್ಪನ್ನ ಒಪ್ಪಂದಗಳನ್ನು ಒಳಗೊಂಡಂತೆ ಯಾವುದೇ ದೀರ್ಘಾವಧಿಯ ಒಪ್ಪಂದಗಳನ್ನು ಹೊಂದಿಲ್ಲ.

III. ಕಂಪನಿಯು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸಬೇಕಾದ ಯಾವುದೇ ಮೊತ್ತಗಳನ್ನು ಹೊಂದಿಲ್ಲ.

IV. (ಎ) ಆಡಳಿತವು ಪ್ರತಿನಿಧಿಸಿರುವುದೇನೆಂದರೆ, ತನ್ನ ಅತ್ಯುತ್ತಮ ತಿಳಿವಳಿಕೆ ಮತ್ತು ನಂಬಿಕೆಗೆ ಅನುಗುಣವಾಗಿ, ಕಂಪನಿಯಿಂದ ಅಥವಾ ಯಾವುದಕ್ಕೂ ಯಾವುದೇ ಹಣವನ್ನು ಮುಂಗಡ ಅಥವಾ ಸಾಲ ಅಥವಾ ಹೂಡಿಕೆ ಮಾಡಲಾಗಿಲ್ಲ (ಎರವಲು ಪಡೆದ ನಿಧಿಗಳು ಅಥವಾ ಷೇರು ಪ್ರೀಮಿಯಂ ಅಥವಾ ಯಾವುದೇ ಇತರ ಮೂಲಗಳು ಅಥವಾ ರೀತಿಯ ನಿಧಿಗಳಿಂದ) ವಿದೇಶಿ ಘಟಕಗಳು ("ಮಧ್ಯವರ್ತಿಗಳು") ಸೇರಿದಂತೆ ಇತರ ವ್ಯಕ್ತಿ ಅಥವಾ ಪ್ರಾಧಿಕಾರಗಳಿಂದ, ಲಿಖಿತವಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ದಾಖಲಿಸಿದ್ದರೂ, ಮಧ್ಯವರ್ತಿಯು ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ರೀತಿಯಲ್ಲಿ ಗುರುತಿಸಲಾದ ಇತರ ವ್ಯಕ್ತಿಗಳು ಅಥವಾ ಪ್ರಾಧಿಕಾರಗಳಿಗೆ ಸಾಲ ನೀಡಿಲ್ಲ ಅಥವಾ ಹೂಡಿಕೆ ಮಾಡಿಲ್ಲ. ಕಂಪನಿಯ ಪರವಾಗಿ ಅಥವಾ ಪರವಾಗಿ ("ಅಂತಿಮ ಫಲಾನುಭವಿಗಳು") ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಖಾತರಿ, ಭದ್ರತೆ ಅಥವಾ ಮುಂತಾದವುಗಳನ್ನು ಒದಗಿಸಿಲ್ಲ.

ಬಿ) ಆಡಳಿತವು ಪ್ರತಿನಿಧಿಸಿರುವುದೇನೆಂದರೆ, ಆಡಳಿತ ಮಂಡಳಿಯು ತನ್ನ ಅತ್ಯುತ್ತಮ ತಿಳಿವಳಿಕೆ ಮತ್ತು ನಂಬಿಕೆಗೆ ಅನುಗುಣವಾಗಿ, ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯಿಂದ, ವಿದೇಶಿ ಸಂಸ್ಥೆಗಳೂ (ಹಣಕಾಸು ಒದಗಿಸುವ ಪಕ್ಷಗಳು) ಸೇರಿದಂತೆ ಕಂಪನಿಯು ಯಾವುದೇ ಹಣವನ್ನು ಸ್ವೀಕರಿಸಿಲ್ಲ, ಲಿಖಿತವಾಗಿ ಅಥವಾ ಹೊರತಾಗಿ, ಕಂಪನಿಯು, ನೇರವಾಗಿ ಅಥವಾ ಪರೋಕ್ಷವಾಗಿ, ಯಾವುದೇ ರೀತಿಯಲ್ಲಿ ಗುರುತಿಸಲಾದ ಇತರ ವ್ಯಕ್ತಿಗಳು ಅಥವಾ ಘಟಕಗಳಿಗೆ ಸಾಲ ನೀಡುವುದು ಅಥವಾ ಹೂಡಿಕೆ ಮಾಡುವುದು ಹಣಕಾಸು ಒದಗಿಸುವ ಪಕ್ಷಗಳ ಪರವಾಗಿ (Funding Party) ("ಅಂತಿಮ ಫಲಾನುಭವಿಗಳು") ಅಥವಾ ಯಾವುದೇ ಖಾತರಿ, ಭದ್ರತೆ ಅಥವಾ ಮುಂತಾದವುಗಳನ್ನು ಅಂತಿಮ ಫಲಾನುಭವಿಗಳ ಪರವಾಗಿ ಒದಗಿಸಿಲ್ಲ ಮತ್ತು

(ಸಿ) ಮೇಲಿನ ಸಂದರ್ಭಗಳಲ್ಲಿ ಸಮಂಜಸವಾದ ಮತ್ತು ಸೂಕ್ತವೆಂದು ಪರಿಗಣಿಸಲಾದ ಇಂತಹ ಲೆಕ್ಕಪರಿಶೋಧನೆ ಕಾರ್ಯವಿಧಾನಗಳ ಆಧಾರದ ಮೇಲೆ, ಉಪ–ಕಲಂ (ಎ) ಮತ್ತು (ಬಿ) ಅಡಿಯಲ್ಲಿನ ಪ್ರಾತಿನಿಧ್ಯಗಳು ಯಾವುದೇ ವಸ್ತುನಿಷ್ಠ ತಪ್ಪು ಹೇಳಿಕೆಯನ್ನು ಒಳಗೊಂಡಿವೆ ಎಂದು ನಾವು ನಂಬುವಂತೆ ನಮ್ಮ ಗಮನಕ್ಕೆ ಬಂದಿಲ್ಲ.

ಡಿ) ಕಂಪನಿಯು ಪಾವತಿಸಿದ ಅಂತಿಮ ಲಾಭಾಂಶ ಹಿಂದಿನ ವರ್ಷಕ್ಕೆ ಘೋಷಿಸಲಾದ ಅದೇ ವರ್ಷದ ಪರಿಶೀಲನೆಯು ಲಾಭಾಂಶದ ಪಾವತಿಗೆ ಅನ್ವಯಿಸುವ ಮಟ್ಟಿಗೆ ಕಾಯಿದೆಯ ಸೆಕ್ಷನ್ 123 ರ ಅನುಸಾರವಾಗಿದೆ. ಕಾಯಿದೆಯ ಸೆಕ್ಷನ್ 123 ರ ಪ್ರಕಾರ ವರ್ಷದಲ್ಲಿ ಮತ್ತು ಈ ಲೆಕ್ಕಪರಿಶೋಧನೆ ವರದಿಯ ದಿನಾಂಕದವರೆಗೆ ಕಂಪನಿಯು ಯಾವುದೇ ಮಧ್ಯಂತರ ಲಾಭಾಂಶವನ್ನು ಘೋಷಿಸಿಲ್ಲ ಮತ್ತು ಪಾವತಿಸಿಲ್ಲ.

(ಎ) ಕಂಪನಿ ಅಧಿನಿಯಮ, 2013 ಸೆಕ್ಷನ್ 143(5)ಗೆ ಅಗತ್ಯವಿರುವಂತೆ ಭಾರತದ ನಿಯಂತ್ರಕರು ಮತ್ತು ಮಹಾ ಲೇಖಪಾಲರು ನೀಡಿದ ನಿರ್ದೇಶನಗಳಂತೆ ಹೇಳಲಾದ ಕಂಪನಿಗೆ **ಅನುಬಂಧ–ಸಿ** ವಿವರಣಾ ಪಟ್ಟಿ ನೀಡುತ್ತಿದ್ದೇವೆ.

(ಬಿ) ಕಂಪನಿಗಳ (ಲೆಕ್ಕಪತ್ರ) ನಿಯಮಗಳು, 2014ರ ನಿಯಮ 3(1) ರ ನಿಬಂಧನೆ, ಏಪ್ರಿಲ್ 1, 2023ರಿಂದ ಜಾರಿಗೆ ಬರುವಂತೆ ಆಡಿಟ್ ಟ್ರಯಲ್ (ಎಡಿಟ್ ಲಾಗ್) ಸೌಲಭ್ಯ ಹೊಂದಿರುವ ಲೆಕ್ಕಪತ್ರ ಪುಸ್ತಕಗಳನ್ನು ಲೆಕ್ಕಪತ್ರ ತಂತ್ರಾಂಶ(ಸಾಫ್ಟ್‌ವೇರ್) ಬಳಸಿ ಮಾಡಬೇಕೆಂಬುದು ಅನ್ವಯವಾಗುತ್ತದೆ ಮತ್ತು ಅದರಂತೆ, ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರ) ನಿಯಮಗಳು, 2014ರ ನಿಯಮ 11(ಜಿ) ಅಡಿಯಲ್ಲಿ ವರದಿ ಮಾಡಬೇಕೆಂಬುದು ಮಾರ್ಚ್ 31, 2023ರಂದು ಕೊನೆಗೊಂಡ ಹಣಕಾಸು ವರ್ಷಕ್ಕೆ ಅನ್ವಯವಾಗುವುದಿಲ್ಲ.

**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ, ಪರವಾಗಿ**
**ಲೆಕ್ಕಪರಿಶೋಧಕರು**
**ಸಂಸ್ಥೆ ನೋಂದಣಿ: 000580S/S200066**

**ಸಹಿ/–**
**ಸಿಎ ಮಣಿಕುಮಾರ್ ಡಿ.**
**ಪಾಲುದಾರ ಸದಸ್ಯತ್ವ ಸಂಖ್ಯೆ: 212544**
**ಯುಡಿಐಎನ್: 23212544BGQHGD8753**

ಸ್ಥಳ: ಬೆಂಗಳೂರು
ದಿನಾಂಕ: 16–11–2023

## ನಮ್ಮ ಸಮ ದಿನಾಂಕದ ವರದಿಯ "ಇತರ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಕುರಿತು ವರದಿ" ಶೀರ್ಷಿಕೆಯಡಿಯಲ್ಲಿ ಪ್ಯಾರಾಗ್ರಾಫ್1 ರಲ್ಲಿ ಉಲ್ಲೇಖಿಸಲಾದ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ "ಎ"

ನಾವು ಕೋರಿದ ಮತ್ತು ಕಂಪನಿಯು ನೀಡಿದ ಮಾಹಿತಿ ಮತ್ತು ವಿವರಣೆಗಳು ಮತ್ತು ಲೆಕ್ಕ ಪರಿಶೋಧನೆಯ ಸಾಮಾನ್ಯ ಪ್ರಕ್ರಿಯೆಯಲ್ಲಿ ನಾವು ಪರಿಶೀಲಿಸಿದ ಲೆಕ್ಕ ಪುಸ್ತಕಗಳು ಮತ್ತು ದಾಖಲೆಗಳ ವಿಷಯದಲ್ಲಿ ಮತ್ತು ನಮ್ಮ ತಿಳಿವಳಿಕೆ ಮತ್ತು ನಂಬಿಕೆಗೆ ಅನುಗುಣವಾಗಿ ನಾವು ಹೀಗೆ ಹೇಳುತ್ತೇವೆ:

i. (ಎ) ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆ ಪ್ರಕಾರ ಕಂಪನಿಯು ಸ್ವತ್ತು/ಆಸ್ತಿಯ ಪ್ರಮಾಣದ ವಿವರಗಳನ್ನೂ ಒಳಗೊಂಡಂತೆ, ಸ್ಥಳ ಮತ್ತು ಸ್ವತ್ತು, ಸ್ಥಾವರ ಮತ್ತು ಉಪಕರಣ("ಪಿಪಿಇ")ಗಳೂ ಸೇರಿದಂತೆ ಮುಕ್ತ ಹಿಡುವಳಿ/ ಗುತ್ತಿಗೆ ಹಿಡುವಳಿ ಭೂಮಿಗಳ ವರ್ಗೀಕರಣಗಳ , ಹಣಕಾಸು ವಿವರಣಾ ಪಟ್ಟಿಗಳ (ಎಫ್‌ಎಸ್)ನ ಅನೇಕ ಅಡಿಬರಹಗಳಲ್ಲೂ ವಿವರಿಸಿರುವಂತೆ ಕ್ರೋಢೀಕೃತ ವ್ಯವಸ್ಥೆ (ಕೋಡಿಂಗ್ ಸಿಸ್ಟಮ್)ಯೂ ಸೇರಿದಂತೆ ವಿವರಗಳನ್ನು ತೋರಿಸುವ ಪರ್ಯಾಪ್ತ ದಾಖಲೆಗಳನ್ನು ನಿರ್ವಹಿಸಿಲ್ಲ. ಭೂ ದಾಖಲೆಗಳನ್ನು ಕಂದಾಯ ಪ್ರಾಧಿಕಾರಗಳ ಪ್ರಕಾರದ ದಾಖಲೆಗಳೊಂದಿಗೆ ಹೊಂದಾಣಿಕೆ ಮಾಡಬೇಕಿರುವುದು ಬಾಕಿ ಇದ್ದು ಈ ವಿಚಾರದ ಮೇಲೆ ವರದಿ ಮಾಡುವುದು ನಮಗೆ ಸಾಧ್ಯವಾಗಿಲ್ಲ. ಸ್ವತ್ತು, ಸ್ಥಾವರ ಮತ್ತು ಉಪಕರಣಗಳನ್ನು ಗುರುತಿಸಲಿಕ್ಕಾಗಿ ಕ್ರೋಡೀಕೃತಗೊಳಿಸಿಲ್ಲ. ಜಮಾಖರ್ಚು ಪಟ್ಟಿ (ಬ್ಯಾಲೆನ್ಸ್‌ಶೀಟ್) ದಿನಾಂಕದಂದು ಅಸ್ತಿತ್ವದಲ್ಲಿದ್ದ ಅಮೂರ್ತ ಸ್ವತ್ತುಗಳ ಯಾವುದೇ ವಿವರಗಳನ್ನು ಕಂಪನಿ ಹೊಂದಿಲ್ಲ.

(ಬಿ) ನಿಯಮಿತ ಪರಿಶೀಲನಾ ಕಾರ್ಯಕ್ರಮಕ್ಕೆ ಅನುಗುಣವಾಗಿ ಆಡಳಿತ ಮಂಡಳಿಯಿಂದ ಆರ್ಥಿಕ ವರ್ಷದಲ್ಲಿ ಆಸ್ತಿ, ಘಟಕ ಮತ್ತು ಉಪಕರಣಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿದೆ. ಆದಾಗ್ಯೂ, ಅಂತಹ ಸ್ವತ್ತುಗಳ ತಖ್ತೆಗಳ ಪ್ರಕಾರ ಮತ್ತು ಭೌತಿಕ ಪರಿಶೀಲನೆಯ ಹೊಂದಾಣಿಕೆಗೊಳಪಡಿಸಿದ ಸೂಕ್ತ ದಾಖಲೆಗಳುಇಲ್ಲ. ಹೀಗಾಗಿ, ಆಸ್ತಿ, ಘಟಕ ಮತ್ತು ಸಲಕರಣೆಗಳೊಂದಿಗೆ ಅಸ್ತಿತ್ವದಲ್ಲಿರುವ ಯಾವುದೇ ವಸ್ತುನಿಷ್ಠ ವ್ಯತ್ಯಾಸಗಳ ಕುರಿತು ನಾವು ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಿಲ್ಲ.

(ಸಿ) ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಅನ್ವಯ, ಹಣಕಾಸು ವಿವರಣಾ ಪಟ್ಟಿಗಳ ಟಿಪ್ಪಣಿ 2.i ರಿಂದ 2.v ಉಲ್ಲೇಖ ಕಂದಾಯ ಪ್ರಾಧಿಕಾರಗಳ ಹಕ್ಕು ಪತ್ರ (ಟೈಟಲ್ ಡೀಡ್ಸ್) ಮತ್ತು ದಾಖಲೆಗಳೊಂದಿಗೆ ಕಂಪನಿಯ ದಾಖಲೆಗಳ ಪ್ರಕಾರ ಭೂ ದಾಖಲೆಗಳೊಂದಿಗೆ ಮಾನ್ಯಮಾಡಿಲ್ಲ/ಊರ್ಜಿತಗೊಳಿಸಿಲ್ಲ ಮತ್ತು ಅದರಂತೆ, ಕಂಪನಿಯ ಸ್ಥಿರಾಸ್ತಿಗಳ ಹಕ್ಕು ಪತ್ರಗಳು ಕಂಪನಿಯ ಹೆಸರಲ್ಲಿ ಹೊಂದಲಾಗಿದೆಯೇ ಎಂಬುದರ ಕುರಿತು ವ್ಯಾಖ್ಯಾನಿಸಲು ನಮಗೆ ಸಾಧ್ಯವಾಗಿಲ್ಲ. ಅದರಂತೆ, ಆದೇಶ 3 (i)(c) ಪ್ರಕಾರ ನಾವು ಅಗತ್ಯ ದಾಖಲೆಗಳನ್ನು ಒದಗಿಸಲು ನಾವು ಅಸಮರ್ಥರಾಗಿದ್ದೇವೆ. ಆಡಳಿತ ಮಂಡಳಿ ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಎಲ್ಲಾ ಸ್ಥಿರಾಸ್ತಿಗಳ ಹಕ್ಕು ಪತ್ರ (ಟೈಟಲ್ ಡೀಡ್) ಗಳನ್ನು ಕಂಪನಿಯ ಹೆಸರಿನಲ್ಲಿದೆ.

(ಡಿ) ಕಂಪನಿಯು 31 ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ ತನ್ನ ಆಸ್ತಿ, ಘಟಕ ಮತ್ತು ಉಪಕರಣಗಳು ಅಥವಾ ಅಮೂರ್ತ ಸ್ವತ್ತುಗಳನ್ನು ಮರುಮೌಲ್ಯಮಾಪನ ಮಾಡಿಲ್ಲ.

(ಇ) ಬೇನಾಮಿ ಆಸ್ತಿ ವಹಿವಾಟುಗಳ ನಿಷೇಧ ಕಾಯಿದೆ, 1988 ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಕಂಪನಿಯ ವಿರುದ್ಧ ಯಾವುದೇ ಬೇನಾಮಿ ಆಸ್ತಿಯನ್ನು ಹೊಂದಿರುವ ಕುರಿತು ಯಾವುದೇ ಕ್ರಮ ಜರುಗಿಸಲಾಗಿಲ್ಲ ಅಥವಾ ಬಾಕಿ ಇರುವುದಿಲ್ಲ.

ii. (ಎ) ಆರ್ಥಿಕ ವರ್ಷದಲ್ಲಿ ಆಡಳಿತ ಮಂಡಳಿಯಿಂದ ನೇಮಕಗೊಂಡ ಸಮಿತಿಯು ದಾಸ್ತಾನುಗಳನ್ನು ಭೌತಿಕವಾಗಿ ಪರಿಶೀಲಿಸಿದೆ. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳು ಮತ್ತು ನಮಗೆ ನೀಡಿದ ನಿರೂಪಣೆಗಳನ್ನು ಆಧರಿಸಿ ವರ್ಷದ ಕೊನೆಯಲ್ಲಿ ಕಂಪನಿಯು ದಾಸ್ತಾನುಗಳನ್ನು ಭೌತಿಕವಾಗಿ ಪರಿಶೀಲಿಸಿದೆ. ನಮ್ಮ ಅಭಿಪ್ರಾಯದಲ್ಲಿ, ಅಂತಹ ದಾಸ್ತಾನುಗಳನ್ನು ಕ್ರೋಢೀಕೃತಗೊಳಿಸುವುದು, ದಾಸ್ತಾನುಗಳ ಸಾಗಾಣೆ, ಜಾಡು ಪತ್ತೆ ಮಾಡುವುದು ಮತ್ತು ದಾಸ್ತಾನು ದಾಖಲೆಗಳ ತಕ್ಷಣ ಆದ್ಯತನಗೊಳಿಸುವುದಕ್ಕೆ (ಇಂದಿನವರೆಗೆ ಪೂರ್ತಿ ಮಾಡುವುದು/ಅಪ್‌ಡೇಷನ್) ಸಂಬಂಧಿಸಿದಂತೆ ಅಂತಹ ಪರಿಶೀಲನೆಯ ವ್ಯಾಪ್ತಿ ಮತ್ತು ಪದ್ಧತಿಯನ್ನು ಬಲಪಡಿಸಬೇಕು.

ನ್ಯೂನ್ಯತೆಗಳ ಸ್ಪಷ್ಟ ದಾಖಲಾತಿಗಳ ಗೈರಿನಲ್ಲಿ, ಯಾವುದಾದರೂ ಇದ್ದಲ್ಲಿ, ಅಂತಹ ಪರಿಶೀಲನೆ ಸಮಯದಲ್ಲಿ ಗಮನಿಸಿದಲ್ಲಿ ಲೆಕ್ಕಪುಸ್ತಕಗಳಲ್ಲಿ ಅದನ್ನು ಸರಿಯಾಗಿ ನಿರ್ವಹಿಸಲಾಗಿದೆಯೇ ಎಂಬುದನ್ನು ವ್ಯಾಖ್ಯಾನಿಸಲು ನಮಗೆ ಸಾಧ್ಯವಾಗುವುದಿಲ್ಲ.

ಮೂರನೇ ಪಕ್ಷಗಳ ಬಳಿ ಇರುವ ದಾಸ್ತಾನುಗಳನ್ನು ಅವರು ವರ್ಷಾಂತ್ಯದಲ್ಲಿ ದೃಢಪಡಿಸಿಲ್ಲ. ನಮಗೆ ಒದಗಿಸಿದ ವಿವರಣೆಯ ಆಧಾರದ ಮೇಲೆ, ಹಿಂದಿನ ವರ್ಷಗಳಿಗೆ ಸಂಬಂಧಿಸಿದಂತೆ ನಿಧಾನವಾಗಿ ಮಾರಾಟವಾಗುವ ಮತ್ತು ಮಾರಾಟವಾಗದ ಪ್ಯಾಕಿಂಗ್ ಸಾಮಗ್ರಿಗಳ ದಾಸ್ತಾನುಗಳು ಡಿಪೋಗಳಲ್ಲಿವೆ. Ind AS 2 "ದಾಸ್ತಾನು" ನಿಬಂಧನೆಗಳನ್ನು ಅನುಪಾಲಿಸಲು ಅಂತಹ

ಮಾರಾಟವಾಗುವ/ ಮಾರಾಟವಾಗದ ದಾಸ್ತಾನು (ಸ್ಟಾಕ್) ವಸ್ತುಗಳ (ಐಟಂಗಳ) ನಿವ್ವಳ ನೈಜ ಮೌಲ್ಯವನ್ನು ಮೌಲ್ಯಮಾಪನ ಮಾಡಲು ಆಡಳಿತವು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿಲ್ಲ.

(ಬಿ) ಕಂಪನಿಯ ದಾಸ್ತಾನುಗಳ ಭದ್ರತೆಯ ಆಧಾರದ ಮೇಲೆ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ಗಳಿಂದ ಒಟ್ಟಾರೆಯಾಗಿ 5 ಕೋಟಿ ರೂ.ಗೂ ಹೆಚ್ಚಿನ ದುಡಿಯುವ ಬಂಡವಾಳದ ಮಿತಿಗಳನ್ನು ಮಂಜೂರು ಮಾಡಿಲ್ಲ. ಅದರಂತೆ ಆದೇಶದ ಷರತ್ತು 3 (ii) (ಬಿ) ನಲ್ಲಿ ವರದಿ ಮಾಡುವ ಅವಶ್ಯಕತೆಯು ಕಂಪನಿಗೆ ಅನ್ವಯಿಸುವುದಿಲ್ಲ.

iii. (ಎ) ಆರ್ಥಿಕ ವರ್ಷದಲ್ಲಿ ಕಂಪನಿಯು ಕಂಪನಿಗಳು, ಸಂಸ್ಥೆಗಳು, ಸೀಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಇತರ ಯಾವುದೇ ಪಕ್ಷಗಳಿಗೆ ಸಾಲಗಳನ್ನು, ಸಾಲಗಳ ಸ್ವರೂಪದಲ್ಲಿ ಮುಂಗಡಗಳನ್ನು ಒದಗಿಸಿಲ್ಲ. ಖಾತರಿ ಅಥವಾ ಭದ್ರತೆಯನ್ನು ಒದಗಿಸಿಲ್ಲ. ಅಂತೆಯೇ, ಆದೇಶದ ಷರತ್ತು 3 (iii) (ಎ) ನಲ್ಲಿ ವರದಿ ಮಾಡುವ ಅವಶ್ಯಕತೆಯು ಕಂಪನಿಗೆ ಅನ್ವಯಿಸುವುದಿಲ್ಲ.

(ಬಿ) ಆರ್ಥಿಕ ವರ್ಷದಲ್ಲಿ ಕಂಪನಿಯ ಹಿತಾಸಕ್ತಿಗೆ ಧಕ್ಕೆಯಾಗುವಂತಹ ಯಾವುದೇ ಹೂಡಿಕೆಗಳು, ಯಾವುದೇ ಖಾತರಿ ಅಥವಾ ಭದ್ರತೆಯನ್ನು ಒದಗಿಸಿಲ್ಲ. ಅದರಂತೆ, ಕಂಡಿಕೆ 3(iii)(b) ನಿಬಂಧನೆಗಳು ಅನ್ವಯವಾಗುವುದಿಲ್ಲ.

(ಸಿ) ಕಂಪನಿಯು ಕಂಪನಿಗಳು, ಸಂಸ್ಥೆಗಳು, ಸೀಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಯಾವುದೇ ಇತರ ಪಾರ್ಟಿಗಳಿಗೆ ಸಾಲ ಅಥವಾ ಸಾಲದ ಸ್ವರೂಪದಲ್ಲಿ ಮುಂಗಡಗಳನ್ನು ನೀಡಿಲ್ಲ. ಅಂತೆಯೇ, ಆದೇಶದ ಷರತ್ತು 3(iii)(ಸಿ) ನಿಂದ 3(iii)(ಎಫ್) ವರೆಗೆ ವರದಿ ಮಾಡುವ ಅವಶ್ಯಕತೆಯು ಕಂಪನಿಗೆ ಅನ್ವಯಿಸುವುದಿಲ್ಲ ಮತ್ತು ಆದ್ದರಿಂದ ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿಲ್ಲ.

iv. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಗಳ ಕಾಯಿದೆ 2013 ರ ಸೆಕ್ಷನ್ 185 ಮತ್ತು 186 ರ ನಿಬಂಧನೆಗಳು ನಿರ್ದೇಶಕರಿಗೆ ಹಾಗೂ ಅವರು ಆಸಕ್ತಿ ಹೊಂದಿರುವ ಸಂಸ್ಥೆಗಳನ್ನು ಒಳಗೊಂಡಂತೆ ನೀಡಿದ ಸಾಲಗಳು ಮತ್ತು ಮುಂಗಡಗಳ ಬಗ್ಗೆ, ಮಾಡಿದ ಹೂಡಿಕೆಗಳು ಮತ್ತು ನೀಡಿರುವ ಖಾತರಿಗಳು ಮತ್ತು ಭದ್ರತೆಗಳ ವಿಚಾರದಲ್ಲಿ ಕಂಪನಿಯು ಅಗತ್ಯ ನಿಯಮಗಳನ್ನು ಅನುಪಾಲಿಸಿದೆ.

v. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿ ಸ್ವೀಕರಿಸಿಲ್ಲ ಅಥವಾ ಕಂಪನಿ ಕಾಯ್ದೆ 2013 ರ ಸೆಕ್ಷನ್ 73 ಮತ್ತು 76 ರ ಅನುಸಾರ ಆರ್ಥಿಕ ವರ್ಷದಲ್ಲಿ ಠೇವಣಿ ಎಂದು ಪರಿಗಣಿಸಲಾದ ಯಾವುದೇ ಮೊತ್ತವನ್ನು ಸ್ವೀಕರಿಸಿಲ್ಲ. ಅದರಂತೆ ನಿಯಮದ ಅನುಚ್ಛೇದ 3(v) ಕಂಪನಿಗೆ ಅನ್ವಯವಾಗುವುದಿಲ್ಲ.

vi ಕಂಪನಿಯ ನಿರ್ದಿಷ್ಟ ಉತ್ಪನ್ನಗಳ ತಯಾರಿಕೆಗೆ ಸಂಬಂಧಿಸಿದ ಕಂಪನಿ ಕಾಯ್ದೆ, 2013 ರ ಸೆಕ್ಷನ್ 148(1) ರ ಅಡಿಯಲ್ಲಿ ವೆಚ್ಚದ ದಾಖಲೆಗಳ ನಿರ್ವಹಣೆಗಾಗಿ ಕೇಂದ್ರ ಸರ್ಕಾರವು ಮಾಡಿದ ನಿಯಮಗಳಿಗೆ ಅನುಸಾರವಾಗಿ ಕಂಪನಿಯು ನಿರ್ವಹಿಸುವ ಲೆಕ್ಕಪತ್ರ ಪುಸ್ತಕಗಳನ್ನು ನಾವು ವಿವರವಾಗಿ ಪರಿಶೀಲಿಸಿದ್ದೇವೆ. ನಿರ್ದಿಷ್ಟಪಡಿಸಿದ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ಮಾಡಲಾಗಿದೆ ಮತ್ತು ನಿರ್ವಹಿಸಲಾಗಿದೆ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ಹೀಗಾಗಿ ಅವುಗಳು ಸಮರ್ಪಕವಾಗಿದೆಯೇ ಅಥವಾ ಪೂರ್ಣವಾಗಿದೆಯೇ ಎಂಬುದನ್ನು ನಾವು ವಿವರವಾದ ಪರೀಕ್ಷೆಯನ್ನು ಮಾಡಿಲ್ಲ.

vii. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ನಮ್ಮ ಪರೀಕ್ಷೆಯ ಆಧಾರದ ಮೇಲೆ, ಕಂಪನಿಯು ವರ್ಷದ ಕೊನೆಯಲ್ಲಿ ಅವುಗಳ ಪಾವತಿಯ ಕೊನೆಯ ದಿನಾಂಕದಿಂದ ಆರು ತಿಂಗಳಿಗೂ ಹೆಚ್ಚಿನ ಅವಧಿಗೆ ಸಂಬಂಧಿಸಿದ ಪ್ರಾಧಿಕಾರಗಳಿಗೆ ಕೆಳಗಿನ ಬಾಕಿಗಳನ್ನು ಹೊರತಾಗಿ ಆದಾಯ ತೆರಿಗೆ, ಮಾರಾಟ ತೆರಿಗೆ, ಅಬಕಾರಿ ಸುಂಕ, ಮೌಲ್ಯವರ್ಧಿತ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಸೆಸ್ ಸೇರಿದಂತೆ ಭವಿಷ್ಯ ನಿಧಿ, ವೃತ್ತಿ ತೆರಿಗೆ ಮತ್ತು ಇತರ ನಿರ್ವಿವಾದವಾದ ಶಾಸನಬದ್ಧ ಬಾಕಿಗಳನ್ನು ಕಂಪನಿಯು ನಿಯಮಿತವಾಗಿ ಠೇವಣಿ ಮಾಡಿದೆ.

| ಕ್ರ. ಸಂ | ಬಾಕಿ ಸ್ವರೂಪ | ಮೊತ್ತ, ರೂ.ಗಳಲ್ಲಿ |
|---|---|---|
| 1. | ಪಿಎಫ್ ಟ್ರಸ್ಟ್ | 1,62,106 |
| 2. | ಸಂಯುಕ್ತ ಸರಕು ಮತ್ತು ಮಾರಾಟ ತೆರಿಗೆಗಳು (ಐಜಿಎಸ್‌ಟಿ) | 64,20,97,841 |
| 3. | ಪಾವತಿಸಬೇಕಾದ ಕೇಂದ್ರ ಸೇವಾ ತೆರಿಗೆ (ಸಿಜಿಎಸ್‌ಟಿ) ಮತ್ತು ರಾಜ್ಯ ಸೇವಾ ತೆರಿಗೆ (ಎಸ್‌ಜಿಎಸ್‌ಟಿ) | 46,997 |
| 4. | ರಾಯಧನ (ರಾಯಲ್ಟಿ) | 3,47,185 |

ನೇರ ಮತ್ತು ಪರೋಕ್ಷ ತೆರಿಗೆಯ ಪ್ರಕಾರ ಬಾಕಿ ಇರುವ ವ್ಯಾಜ್ಯಗಳು, ದಾವೆಗಳ ವಿವರಗಳನ್ನು **ಅನುಬಂಧ–"ಇ"** ನಲ್ಲಿ ನೀಡಲಾಗಿದೆ.

viii. ಆದಾಯ ತೆರಿಗೆ ಕಾಯಿದೆ, 1961 ರ ಅಡಿಯಲ್ಲಿ ತೆರಿಗೆ ಮೌಲ್ಯಮಾಪನಗಳಲ್ಲಿ ಈ ಹಿಂದೆ ಲೆಕ್ಕಪತ್ರ ಪುಸ್ತಕಗಳಲ್ಲಿ ದಾಖಲಾಗದ ಯಾವುದೇ ವಹಿವಾಟನ್ನು ಆರ್ಥಿಕ ವರ್ಷದಲ್ಲಿ ಆದಾಯವಾಗಿ ಕಂಪನಿಯು ಒಪ್ಪಿಸಿಲ್ಲ ಅಥವಾ ಬಹಿರಂಗಪಡಿಸಿಲ್ಲ. ಅಂತೆಯೇ, ಆದೇಶದ ಷರತ್ತು 3 (viii) ನಲ್ಲಿ ವರದಿ ಮಾಡುವ ಅವಶ್ಯಕತೆಯು ಕಂಪನಿಗೆ ಅನ್ವಯಿಸುವುದಿಲ್ಲ.

**ix.** ಎ. ಕಂಪನಿಯು ಸಾಲಗಳ ಮರುಪಾವತಿ ಅಥವಾ ಇತರ ಸಾಲಗಳ ಮರುಪಾವತಿಯಲ್ಲಿ ಅಥವಾ ಯಾವುದೇ ಸಾಲದಾತನಿಗೆ ಅದರ ಮೇಲಿನ ಬಡ್ಡಿಯನ್ನು ಪಾವತಿಸುವಲ್ಲಿ ವಿಫಲವಾಗಿಲ್ಲ.

ಬಿ. ಯಾವುದೇ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆ ಅಥವಾ ಸರ್ಕಾರ ಅಥವಾ ಯಾವುದೇ ಸರ್ಕಾರಿ ಪ್ರಾಧಿಕಾರದಿಂದ ಕಂಪನಿಯು ಉದ್ದೇಶಪೂರ್ವಕ ಸುಸ್ತಿದಾರ ಎಂದು ಘೋಷಿಸಲಾಗಿಲ್ಲ.

ಸಿ. ಕಂಪನಿಯು ಆರ್ಥಿಕ ವರ್ಷದಲ್ಲಿ ಯಾವುದೇ ಅವಧಿ ಸಾಲ (ಟರ್ಮ್ ಲೋನ್)ಗಳನ್ನು ಹೊಂದಿರಲಿಲ್ಲ, ಆದ್ದರಿಂದ ಆದೇಶದ ಷರತ್ತು (ix) (ಸಿ) ನಲ್ಲಿ ವರದಿ ಮಾಡುವ ಅವಶ್ಯಕತೆಯ ಕಂಪನಿಗೆ ಅನ್ವಯಿಸುವುದಿಲ್ಲ.

ಡಿ. ಕಂಪನಿಯು ಆರ್ಥಿಕ ವರ್ಷದಲ್ಲಿ ಯಾವುದೇ ನಿಧಿಗಳನ್ನು (ಫಂಡ್ಸ್) ಸಂಗ್ರಹಿಸಲಿಲ್ಲ, ಆದ್ದರಿಂದ ಆದೇಶದ ಷರತ್ತು (ix) (ಡಿ) ಮೇಲೆ ವರದಿ ಮಾಡುವ ಅವಶ್ಯಕತೆಯ ಕಂಪನಿಗೆ ಅನ್ವಯಿಸುವುದಿಲ್ಲ.

ಇ. ಕಂಪನಿಯ ಹಣಕಾಸಿನ ವಿವರಣ ಪಟ್ಟಿಗಳ ಒಟ್ಟಾರೆ ಪರೀಕ್ಷೆಯಲ್ಲಿ, ಕಂಪನಿಯು ತನ್ನ ಅಂಗಸಂಸ್ಥೆಗಳು, ಸಹವರ್ತಿಗಳು ಅಥವಾ ಜಂಟಿ ಉದ್ಯಮಗಳ ಜವಾಬ್ದಾರಿಗಳನ್ನು ಪೂರೈಸಲು ಅಥವಾ ಯಾವುದೇ ಘಟಕ ಅಥವಾ ವ್ಯಕ್ತಿಯಿಂದ ಯಾವುದೇ ಹಣವನ್ನು ತೆಗೆದುಕೊಂಡಿಲ್ಲ. ಆದ್ದರಿಂದ, ಆದೇಶದ ಷರತ್ತು (ix) (ಇ) ಕುರಿತು ವರದಿ ಮಾಡುವ ಅವಶ್ಯಕತೆಯು ಕಂಪನಿಗೆ ಅನ್ವಯಿಸುವುದಿಲ್ಲ.

ಎಫ್. ಕಂಪನಿಯು ತನ್ನ ಅಂಗಸಂಸ್ಥೆಗಳು, ಜಂಟಿ ಉದ್ಯಮಗಳು ಅಥವಾ ಸಹವರ್ತಿ ಕಂಪನಿಗಳಲ್ಲಿ ಹೊಂದಿರುವ ಭದ್ರತೆಗಳ ಅಡಮಾನದ ಮೇಲೆ ಆರ್ಥಿಕ ವರ್ಷದಲ್ಲಿ ಸಾಲಗಳನ್ನು ಸಂಗ್ರಹಿಸಿಲ್ಲ. ಆದ್ದರಿಂದ, ಆದೇಶದ ಷರತ್ತು (ix) (ಎಫ್) ನಲ್ಲಿ ವರದಿ ಮಾಡುವ ಅವಶ್ಯಕತೆಯು ಕಂಪನಿಗೆ ಅನ್ವಯಿಸುವುದಿಲ್ಲ.

**x.** (ಎ). ಆಡಳಿತ ಮಂಡಳಿ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಆರ್ಥಿಕ ವರ್ಷದಲ್ಲಿ ಕಂಪನಿಯು ಆರಂಭಿಕ ಸಾರ್ವಜನಿಕ ಕೊಡುಗೆ ಅಥವಾ ಮುಂದಿನ ಸಾರ್ವಜನಿಕ ಕೊಡುಗೆ (ಸಾಲ ಉಪಕರಣಗಳು ಸೇರಿದಂತೆ) ಮೂಲಕ ಯಾವುದೇ ಹಣ, ಅವಧಿ ಸಾಲಗಳನ್ನು ಸಂಗ್ರಹಿಸಿಲ್ಲ. ಅಂತೆಯೇ, ಆದೇಶದ ಪ್ಯಾರಾಗ್ರಾಫ್ 3 (ix) ಅಡಿಯಲ್ಲಿ ವರದಿ ಮಾಡುವುದು ಕಂಪನಿಗೆ ಅನ್ವಯಿಸುವುದಿಲ್ಲ ಮತ್ತು ಅದರ ಮೇಲೆ ವ್ಯಾಖ್ಯಾನಿಸಿಲ್ಲ.

ಬಿ. ಲೆಕ್ಕಪರಿಶೋಧನೆ ಪ್ರಕಾರ ಆರ್ಥಿಕ ವರ್ಷದಲ್ಲಿ ಯಾವುದೇ ಆದ್ಯತೆಯ ಹಂಚಿಕೆ ಅಥವಾ ಷೇರುಗಳ ಖಾಸಗಿ ನಿಯೋಜನೆ/ಸಂಪೂರ್ಣ ಅಥವಾ ಭಾಗಶಃ ಅಥವಾ ಐಚ್ಛಿಕವಾಗಿ ಪರಿವರ್ತಿಸಬಹುದಾದ ಸಾಲಪತ್ರ (ಡಿಬೆಂಚರ್) ಗಳನ್ನು ಹೊಂದಿಲ್ಲ ಮತ್ತು ಆದ್ದರಿಂದ, ಷರತ್ತು 3 (x) (ಬಿ) ನಲ್ಲಿ ವರದಿ ಮಾಡುವ ಅವಶ್ಯಕತೆಯ ಆದೇಶವು ಕಂಪನಿಗೆ ಅನ್ವಯಿಸುವುದಿಲ್ಲ.

**xi.** (ಎ) ನಮಗೆ ನೀಡಲಾದ ಮಾಹಿತಿ,ವಿವರಗಳು ಮತ್ತು ನಿರೂಪಿಸಿದಂತೆ ವರ್ಷದ ಅವಧಿಯಲ್ಲಿ ಕಂಪನಿಯಿಂದ ಯಾವುದೇ ವಂಚನೆ ಅಥವಾ ಕಂಪನಿಯ ಮೇಲೆ ಯಾವುದೇ ವಸ್ತು ವಂಚನೆ ಕಂಡುಬಂದಿಲ್ಲ ಅಥವಾ ವರದಿಯಾಗಿಲ್ಲ. ಅದರಂತೆ ಹೇಳಲಾದ ಆದೇಶದ ಕಂಡಿಕೆ 3(xi)(a) ಅನ್ವಯವಾಗುವುದಿಲ್ಲ.

(ಬಿ) ನಮಗೆ ಒದಗಿಸಲಾದ ಮಾಹಿತಿ ಮತ್ತು ನೀಡಲಾದ ವಿವರಣೆಗಳ ಪ್ರಕಾರ ವರ್ಷದ ಅವಧಿಯಲ್ಲಿ ಮತ್ತು ವರದಿಯ ಈ ದಿನಾಂಕದ ವರೆಗೆ ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 143 ರ ಉಪ-ಸೆಕ್ಷನ್ (12) ರ ಅಡಿಯಲ್ಲಿ ವೆಚ್ಚ ಲೆಕ್ಕ ಪರಿಶೋಧಕರು / ಕಾರ್ಯದರ್ಶಿ ಲೆಕ್ಕ ಪರಿಶೋಧಕರು ಅಥವಾ ನಾವು ಕೇಂದ್ರ ಸರ್ಕಾರದ ಕಂಪನಿಗಳ ನಿಯಮ 13 (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರಲ್ಲಿ ಹೇಳಿದಂತೆ ನಮೂನೆ ADT-4 ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿಲ್ಲ.

(ಸಿ) ನಮಗೆ ನೀಡಲಾದ ಮಾಹಿತಿ, ವಿವರಗಳು ಮತ್ತು ನಿರೂಪಿಸಿದಂತೆ ವರ್ಷದ ಅವಧಿಯಲ್ಲಿ ಜಾಗೃತಕರ (ರಟ್ಟುಗಾರರು / ಅಕ್ರಮಗಳ ಕುರಿತು ಮಾಹಿತಿದಾರರು) ಯಾವುದೇ ದೂರುಗಳನ್ನು ಕಂಪನಿಯಿಂದ ಸ್ವೀಕರಿಸಲಾಗಿಲ್ಲ. ಅದರ ಕುರಿತಾಗಿ ಕಂಪನಿಯು ಯಾವುದೇ ಅಂಕಿ ಅಂಶಗಳನ್ನು ಒದಗಿಸದೇ ಇರುವುದರಿಂದ ಹೇಳಲಾದ ಆದೇಶದ 3(xi)(c) ವರದಿಗಾರಿಕೆ ಮೇಲೆ ವ್ಯಾಖ್ಯಾನಿಸಲು ನಮಗೆ ಸಾಧ್ಯವಾಗಿಲ್ಲ.

**xii.** ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ನಿಧಿ ಕಂಪನಿಯಲ್ಲ. ಆದ್ದರಿಂದ, ಆದೇಶದ ಷರತ್ತು 3(xii) (ಎ) ನಿಂದ (ಸಿ) ವರೆಗಿನ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ ಮತ್ತು ಆದ್ದರಿಂದ ಈ ಕುರಿತು ನಾವು ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ.

**xiii.** ಆಡಳಿತ ಮಂಡಳಿಯು ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಸಂಬಂಧಿತ ಪಕ್ಷಗಳ ಜತೆಗಿನ ವಹಿವಾಟುಗಳು ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 177 ಮತ್ತು 188ರಂತೆ ಎಲ್ಲೆಲ್ಲಿ ಅನ್ವಯಿಸುವುದೋ ಅಲ್ಲಿ ಅನುಪಾಲನೆಯಾಗಿದೆ ಮತ್ತು IndAS ಗೆ ಅಗತ್ಯವಿರುವಂತೆ ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳಲ್ಲಿ ವಿವರಗಳನ್ನು ಪ್ರಕಟಿಸಲಾಗಿದೆ.

**xiv.** (ಎ) ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಯಂತೆ, ಕಂಪನಿಯು ತನ್ನ ಆಂತರಿಕ ಲೆಕ್ಕಪರಿಶೋಧನೆಯನ್ನು ನೆರವೇರಿಸಿದ ಪರೀಕ್ಷೆ ಮತ್ತು ಹೆಚ್ಚಿದ ಕಣ್ತಪ್ಪುಗಳ ಮೇಲೆ ಶಾಖೆಗಳ ಲೆಕ್ಕಪರಿಶೋಧನೆ ವರದಿಗಳಿಗೆ ಸಂಬಂಧಿಸಿದಂತೆ ಕೇಂದ್ರ ಕಚೇರಿಯಿಂದ ಟಿಪ್ಪಣಿಗಳ ಮೇಲೆ ಆಂತರಿಕ ಲೆಕ್ಕಪರಿಶೋಧನೆಯನ್ನು ಬಲಪಡಿಸುವುದರ ಹೊರತಾಗಿ ತನ್ನ ವ್ಯವಹಾರದ ಗಾತ್ರ ಮತ್ತು ಸ್ವರೂಪಕ್ಕೆ ಅನುಗುಣವಾಗಿ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಹೊಂದಿದೆ.

ಬಿ. ಲೆಕ್ಕ ಪರಿಶೋಧನಾ ವರದಿಯ ದಿನಾಂಕದವರೆಗೆ ನೀಡಲಾದ ಕಂಪನಿಯ ಆಂತರಿಕ ಲೆಕ್ಕ ಪರಿಶೋಧನಾ ವರದಿಗಳು, ಲೆಕ್ಕಪರಿಶೋಧನೆಯ ಅಡಿಯಲ್ಲಿ ಅವಧಿಗೆ ನಾವು ಪರಿಗಣಿಸಿದ್ದೇವೆ.

**xv.** ಆಡಳಿತ ಮಂಡಳಿಯು ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿ ಅಧಿನಿಯಮ, 2013ರ ಸೆಕ್ಷನ್ 192ರಲ್ಲಿ ಉಲ್ಲೇಖಿಸಿರುವಂತೆ ಕಂಪನಿಯು ನಿರ್ದೇಶಕರು ಅಥವಾ ಅವರೊಂದಿಗೆ ಸಂಪರ್ಕ ಹೊಂದಿದ ವ್ಯಕ್ತಿಗಳೊಂದಿಗೆ ಯಾವುದೇ ನಗದು–ಹೊರತಾದ ವಹಿವಾಟುಗಳನ್ನು ಮಾಡಿಲ್ಲ.

**xvi.** ಎ. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅಧಿನಿಯಮ, 1934ರ ಸೆಕ್ಷನ್ 45-IA ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

ಬಿ. ಕಂಪನಿಯು ಯಾವುದೇ ಬ್ಯಾಂಕಿಂಗ್ ಅಲ್ಲದ ಹಣಕಾಸು ಅಥವಾ ವಸತಿ ಹಣಕಾಸು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿಲ್ಲ. ಅಂತೆಯೇ, ಆದೇಶದ ಅನುಚ್ಛೇದ (xvi) (ಬಿ)ನಲ್ಲಿ ವರದಿ ಮಾಡುವ ಅವಶ್ಯಕತೆಯು ಕಂಪನಿಗೆ ಅನ್ವಯಿಸುವುದಿಲ್ಲ.

ಸಿ. ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಮಾಡಿದ ನಿಯಮಗಳಲ್ಲಿ ವ್ಯಾಖ್ಯಾನಿಸಿರುವ ಕೋರ್ ಇನ್ವೆಸ್ಟ್‌ಮೆಂಟ್ ಕಂಪನಿ ಅಲ್ಲ. ಅಂತೆಯೇ, ಆದೇಶದ ಅನುಚ್ಛೇದ 3(xvi) ಕುರಿತು ವರದಿ ಮಾಡುವ ಅವಶ್ಯಕತೆಯು ಕಂಪನಿಗೆ ಅನ್ವಯಿಸುವುದಿಲ್ಲ.

ಡಿ ಕಂಪನಿಯು ಗುಂಪು ಅಥವಾ ಗುಂಪಿನ ಭಾಗವಾಗಿ ಒಂದಕ್ಕಿಂತ ಹೆಚ್ಚು CIC ಹೊಂದಿಲ್ಲ, ಆದ್ದರಿಂದ, ಅನುಚ್ಛೇದ 3(xvi) (ಡಿ) ನಲ್ಲಿ ವರದಿ ಮಾಡುವ ಅವಶ್ಯಕತೆಯ ಆದೇಶವು ಕಂಪನಿಗೆ ಅನ್ವಯಿಸುವುದಿಲ್ಲ.

**xvii.** ಕಂಪನಿಯು ಪ್ರಸಕ್ತ ಆರ್ಥಿಕ ವರ್ಷದ ಮತ್ತು ತಕ್ಷಣದ ಹಿಂದಿನ ಹಣಕಾಸು ವರ್ಷದಲ್ಲಿ ನಗದು ನಷ್ಟವನ್ನು ಅನುಭವಿಸಿಲ್ಲ.

**xviii.** ಆರ್ಥಿಕ ವರ್ಷದಲ್ಲಿ ಯಾವುದೇ ಶಾಸನಬದ್ಧ ಲೆಕ್ಕ ಪರಿಶೋಧಕರು ರಾಜೀನಾಮೆ ನೀಡಿಲ್ಲ ಮತ್ತು ಅದರ ಪ್ರಕಾರ ಆದೇಶದ ಅನುಚ್ಛೇದ 3 (xviii) ನಲ್ಲಿ ವರದಿ ಮಾಡುವ ಅವಶ್ಯಕತೆಯು ಕಂಪನಿಗೆ ಅನ್ವಯಿಸುವುದಿಲ್ಲ.

**xix.** ಹಣಕಾಸಿನ ಹೇಳಿಕೆಗಳ ಟಿಪ್ಪಣಿಗಳಲ್ಲಿ ಪ್ರಕಟಿಸಿದ ಹಣಕಾಸಿನ ಅನುಪಾತಗಳ ಆಧಾರದ ಮೇಲೆ, ಕಂಪನಿಯ ಸ್ವೀಕೃತಿಯಾಗಬೇಕಾದ ಲೆಕ್ಕಗಳ ಮೇಲೆ ಯಾವುದೇ ಅಕ್ರಮ/ಅವ್ಯವಹಾರ ಮೌಲ್ಯ ಮಾಡುವುದು ಮತ್ತು ಪತ್ತೆ ಮಾಡುವುದು (ಏಜಿಂಗ್) ಮತ್ತು ನಿರೀಕ್ಷಿತ ದಿನಾಂಕಗಳಂದು ಹಣಕಾಸಿನ ಸ್ವತ್ತುಗಳ ನಗದೀಕರಣದ ಮತ್ತು ಪೂರ್ವಾಪೇಕ್ಷಿತ ಪಾವತಿ, ಹಣಕಾಸು ವಿವರಣಾ ಪಟ್ಟಿಗಳೊಂದಿಗೆ ಇತರ ಮಾಹಿತಿ, ನಿರ್ದೇಶಕರ ಮಂಡಳಿ ಮತ್ತು ನಿರ್ವಹಣಾ ಯೋಜನೆಗಳು ನಮ್ಮ ತಿಳುವಳಿಕೆ ಮತ್ತು ನಮ್ಮ ಪರೀಕ್ಷೆಯ ಆಧಾರದ ಮೇಲೆ ಊಹೆಗಳನ್ನು ಬೆಂಬಲಿಸುವ ಪುರಾವೆಗಳು, ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ. ಇದು ಲೆಕ್ಕ ಪರಿಶೋಧನಾ ವರದಿಯ ದಿನಾಂಕದಂದು ಯಾವುದೋ ವಸ್ತುನಿಷ್ಠ ಅನಿಶ್ಚಿತತೆಯು ಅಸ್ತಿತ್ವದಲ್ಲಿದೆ ಮತ್ತು ಜಮಾ ಖರ್ಚು ಪಟ್ಟಿಯ (ಬ್ಯಾಲೆನ್ಸ್‌ಶೀಟ್) ದಿನಾಂಕದಂದು ಮತ್ತು ಬ್ಯಾಲೆನ್ಸ್ ಶೀಟ್ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಅದು ಬಾಕಿ ಇದ್ದಾಗ, ಕಂಪನಿಯು ತನ್ನ ಬಾಧ್ಯತೆಗಳನ್ನು ಪೂರೈಸಲು ಸಮರ್ಥವಾಗಿಲ್ಲ ಎಂದು ನಾವು ನಂಬುವಂತೆ ಮಾಡುತ್ತದೆ. ಆದಾಗ್ಯೂ, ಕಂಪನಿಯ ಭವಿಷ್ಯದ ಕಾರ್ಯಸಾಧ್ಯತೆಯ ಬಗ್ಗೆ ಇದು ಭರವಸೆ ಅಲ್ಲ ಎಂದು ನಾವು ಹೇಳುತ್ತೇವೆ. ನಮ್ಮ ವರದಿಯು ಲೆಕ್ಕಪರಿಶೋಧನೆ ವರದಿಯ ದಿನಾಂಕದವರೆಗಿನ ಸತ್ಯಗಳನ್ನು ಆಧರಿಸಿದೆ ಮತ್ತು ಬ್ಯಾಲೆನ್ಸ್ ಶೀಟ್ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಬೀಳುವ ಎಲ್ಲಾ ಬಾಧ್ಯತೆಗಳನ್ನು ಕಂಪನಿಯು ಬಿಡುಗಡೆ ಮಾಡುತ್ತದೆ ಎಂಬುದಕ್ಕೆ ನಾವು ಯಾವುದೇ ಖಾತರಿ ಅಥವಾ ಯಾವುದೇ ಭರವಸೆಯನ್ನು ನೀಡುವುದಿಲ್ಲ ಎಂದು ನಾವು ಹೇಳುತ್ತೇವೆ.

**xx.** (ಎ) ಚಾಲ್ತಿಯಲ್ಲಿರುವ ಯೋಜನೆಗಳ ಹೊರತಾಗಿ, ಕಂಪನಿಗಳ ಕಾಯ್ದೆ (ಆಕ್ಟ್) ಶೆಡ್ಯೂಲ್ VII ರಲ್ಲಿ ನಿರ್ದಿಷ್ಟಪಡಿಸಿದ, ಕಾಯ್ದೆಯ ಸೆಕ್ಷನ್ 135ರ ಉಪ–ಸೆಕ್ಷನ್ 5ರ ಎರಡನೇ ನಿಬಂಧನೆಗೆ ಅನುಗುಣವಾಗಿ ನಿಧಿಗೆ ವರ್ಗಾಯಿಸಬೇಕಾದ ಯಾವುದೇ ಖರ್ಚು ಮಾಡದ ಮೊತ್ತಗಳಿಲ್ಲ. ಈ ವಿಷಯವನ್ನು ಹಣಕಾಸಿನ ವಿವರಣ ಪಟ್ಟಿಗಳ ಟಿಪ್ಪಣಿಗಳಲ್ಲಿ ಪ್ರಕಟಿಸಲಾಗಿದೆ.

(ಬಿ) ಕಂಪನಿಗಳ ಅಧಿನಿಯಮ ಸೆಕ್ಷನ್ 135ರ ಉಪ– ವಿಭಾಗ (5)ರ ಅಡಿಯಲ್ಲಿ, ಯಾವುದೇ ಚಾಲ್ತಿಯಲ್ಲಿರುವ ಯೋಜನೆಗೆ ಅನುಸಾರವಾಗಿ, ಖರ್ಚು ಮಾಡದ ಎಲ್ಲ ಮೊತ್ತಗಳನ್ನು ಸದರಿ ಕಾಯ್ದೆಯ ಸೆಕ್ಷನ್ 135ರ ಉಪ–ಸೆಕ್ಷನ್ (6) ರ ನಿಬಂಧನೆಗಳ ಅನುಸಾರವಾಗಿ ವಿಶೇಷ ಖಾತೆಗೆ ವರ್ಗಾಯಿಸಲಾಗಿದೆ. ಈ ವಿಷಯವನ್ನು ಹಣಕಾಸಿನ ವಿವರಣ ಪಟ್ಟಿಗಳ ಟಿಪ್ಪಣಿಗಳಲ್ಲಿ ಪ್ರಕಟಿಸಲಾಗಿದೆ.

**xxi.** ಆದೇಶದ ಪರಿಚ್ಛೇದ 3(xxi)ರ ಕಂಪನಿಯ ಸಂಯೋಜನೆಗಳು ಮತ್ತು ಅಧೀನ ಸಂಸ್ಥೆಗಳನ್ನು ಪರಿಗಣಿಸದೇ ಪ್ರತ್ಯೇಕ ಸಂಸ್ಥೆಯಾಗಿ ಅದರ ಹಣಕಾಸು ಸಾಧನೆ, ಸ್ಥಾನ ಹಾಗೂ ಹಣಕಾಸಿನ ಹರಿವು, ಮೊದಲಾದವನ್ನು ನೀಡುವ ಹಣಕಾಸು ವಿವರಣಾ ಪಟ್ಟಿಯ ಲೆಕ್ಕಪರಿಶೋಧನೆ ಅನ್ವಯವಾಗುವುದಿಲ್ಲ. ಅದರಂತೆ, ಈ ವರದಿಯಡಿಯಲ್ಲಿ ಆ ಪರಿಚ್ಛೇದಕ್ಕೆ ಸಂಬಂಧಿಸಿದಂತೆ ಯಾವುದೇ ಟಿಪ್ಪಣಿ ಮಾಡಲಾಗಿಲ್ಲ.

**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ, ಪರವಾಗಿ**

**ಲೆಕ್ಕಪರಿಶೋಧಕರು**
**ಸಂಸ್ಥೆ ನೋಂದಣಿ: 000580S/S200066**

**ಸಹಿ/–**
**ಸಿಎ ಮಣಿಕುಮಾರ್ ಡಿ.**
**ಪಾಲುದಾರ ಸದಸ್ಯತ್ವ ಸಂಖ್ಯೆ: 212544**
**ಯುಡಿಐಎನ್: 23212544BGQHGD8753**

ಸ್ಥಳ: ಬೆಂಗಳೂರು
ದಿನಾಂಕ: 16–11–2023

## ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್‌ನ ಹಣಕಾಸಿನ ವಿವರಣಾ ಪಟ್ಟಿಗಳ ಸಮ ದಿನಾಂಕದ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ–ಬಿ

**ಕಂಪನಿಗಳ ಅಧಿನಿಯಮ 2013 ("ಕಾಯ್ದೆ")ರ ಸೆಕ್ಷನ್ 143ರ ಉಪ–ಸೆಕ್ಷನ್ 3 ರ ಅನುಚ್ಛೇದ (i) ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ವರದಿ**

31ನೇ ಮಾರ್ಚ್ 2023 ರಂತೆ ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್‌ನ ("ಕಂಪನಿ") ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳನ್ನು ನಾವು ಆ ದಿನಾಂಕದಂದು ಕೊನೆಗೊಂಡ ವರ್ಷದ ಕಂಪನಿಯ ಹಣಕಾಸಿನ ವಿವರಣಾ ಪಟ್ಟಿಗಳ ನಮ್ಮ ಲೆಕ್ಕಪರಿಶೋಧನೆಯ ಸಮನ್ವಯದೊಂದಿಗೆ ಲೆಕ್ಕಪರಿಶೋಧನೆ ಮಾಡಿದ್ದೇವೆ.

### ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿ

ಕಂಪನಿಯು ಸ್ಥಾಪಿಸಿದ ಹಣಕಾಸು ವರದಿ ಮಾನದಂಡಗಳ ಮೇಲಿನ ಆಂತರಿಕ ನಿಯಂತ್ರಣದ ಆಧಾರದ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಕಂಪನಿಯ. ಕಂಪನಿಯ ಆಡಳಿತ ಮಂಡಳಿಯು ಜವಾಬ್ದಾರವಾಗಿದೆ ಇದು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ICAI) ಪ್ರಕಟಿಸಿರುವ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕ ಪರಿಶೋಧನೆಯ ಆಧಾರದ ಮೇಲೆ ಮಾರ್ಗದರ್ಶಿ ಟಿಪ್ಪಣಿಯಲ್ಲಿ ಹೇಳಲಾದ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸುತ್ತದೆ. ಈ ಜವಾಬ್ದಾರಿಗಳಲ್ಲಿ ಕಂಪನಿಯ ನೀತಿಗಳ ಅನುಸರಣೆ, ಅದರ ಸ್ವತ್ತುಗಳ ರಕ್ಷಣೆ, ವಂಚನೆಗಳು ಮತ್ತು ದೋಷಗಳ ತಡೆಗಟ್ಟುವಿಕೆ ಮತ್ತು ಪತ್ತೆಹಚ್ಚುವಿಕೆ ಸೇರಿದಂತೆ ಅದರ ವ್ಯವಹಾರದ ಕ್ರಮಬದ್ಧ ಮತ್ತು ಪರಿಣಾಮಕಾರಿ ನಡವಳಿಕೆಯನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ, ಲೆಕ್ಕಪತ್ರ ದಾಖಲೆಗಳ ನಿಖರತೆ ಮತ್ತು ಸಂಪೂರ್ಣತೆ ಮತ್ತು ಕಂಪನಿಗಳ ಅಧಿನಿಯಮ, 2013 ರ ಅಡಿಯಲ್ಲಿ ಅಗತ್ಯವಿರುವಂತೆ ವಿಶ್ವಾಸಾರ್ಹ ಹಣಕಾಸು ಮಾಹಿತಿಯನ್ನು ಸಮಯೋಚಿತವಾಗಿ ಸಿದ್ಧಪಡಿಸುವುದು ಸೇರಿವೆ.

### ಲೆಕ್ಕ ಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕ ಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ICAI ಜಾರಿ ಮಾಡಿರುವ ಮತ್ತು ಕಂಪನಿಗಳ ಅಧಿನಿಯಮ ಸೆಕ್ಷನ್ 143(10) ಅಡಿಯಲ್ಲಿ ಸೂಚಿಸಲಾಗಿದೆ ಎಂದು ಪರಿಗಣಿಸಲಾದ ಹಣಕಾಸು ವರದಿ ("ಮಾರ್ಗದರ್ಶನ ಟಿಪ್ಪಣಿ") ಮತ್ತು ಲೆಕ್ಕ ಪರಿಶೋಧನೆಯ ಮೇಲಿನ ಮಾನದಂಡಗಳ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕ ಪರಿಶೋಧನೆಯ ಮಾರ್ಗದರ್ಶಿ ಟಿಪ್ಪಣಿಗೆ ಅನುಗುಣವಾಗಿ ನಾವು ನಮ್ಮ ಲೆಕ್ಕ ಪರಿಶೋಧನೆಯನ್ನು ನಡೆಸಿದ್ದೇವೆ. ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕ ಪರಿಶೋಧನೆಗೆ ಕಂಪನಿಗಳ ಅಧಿನಿಯಮ, 2013 ಮತ್ತು ಭಾರತದ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆ ಪ್ರಕಟಿಸಿದ ಮಾರ್ಗದರ್ಶನ ಟಿಪ್ಪಣಿ ಎರಡಕ್ಕೂ ಅನ್ವಯಿಸುತ್ತದೆ. ಆ ಮಾನದಂಡಗಳು ಮತ್ತು ಮಾರ್ಗದರ್ಶನದ ಟಿಪ್ಪಣಿಗೆ ನಾವು ನೈತಿಕ ಅವಶ್ಯಕತೆಗಳನ್ನು ಅನುಪಾಲಿಸುವ ಅಗತ್ಯವಿದೆ ಮತ್ತು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳ ಮಿತಿಯನ್ನು ಮೀರಿದ ಆರ್ಥಿಕ ವರದಿಯನ್ನು ಸ್ಥಾಪಿಸಲಾಗಿದೆಯೇ ಮತ್ತು ನಿರ್ವಹಿಸಲಾಗಿದೆಯೇ ಮತ್ತು ಅಂತಹ ನಿಯಂತ್ರಣಗಳು ಎಲ್ಲಾ ವಸ್ತುನಿಷ್ಠ ವಿಷಯಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದೆಯೇ ಎಂಬುದರ ಕುರಿತು ಸಮಂಜಸವಾದ ಭರವಸೆಯನ್ನು ಪಡೆಯಲು ಲೆಕ್ಕ ಪರಿಶೋಧನೆಯನ್ನು ಯೋಜಿಸಬೇಕು ಮತ್ತು ನಿರ್ವಹಿಸಬೇಕು.

ನಮ್ಮ ಲೆಕ್ಕ ಪರಿಶೋಧನೆಯು ಹಣಕಾಸಿನ ವರದಿ ಮತ್ತು ಅವುಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯ ಸಮರ್ಪಕತೆಯ ಬಗ್ಗೆ ಆಡಿಟ್ ಪುರಾವೆಗಳನ್ನು ಪಡೆಯುವ ಕಾರ್ಯವಿಧಾನಗಳನ್ನು ಒಳಗೊಂಡಿರುತ್ತದೆ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ನಮ್ಮ ಲೆಕ್ಕ ಪರಿಶೋಧನೆಯು ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ತಿಳುವಳಿಕೆಯನ್ನು ಪಡೆಯುವುದು, ವಸ್ತು ದೌರ್ಬಲ್ಯವು ಅಸ್ತಿತ್ವದಲ್ಲಿದೆ ಎಂಬ ಅಪಾಯವನ್ನು ನಿರ್ಣಯಿಸುವುದು ಮತ್ತು ಮೌಲ್ಯಮಾಪನ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ಪರೀಕ್ಷಿಸುವುದು ಮತ್ತು ಮೌಲ್ಯಮಾಪನ ಮಾಡುವುದು ಸೇರಿದೆ. ಆಯ್ಕೆ ಮಾಡಲಾದ ಕಾರ್ಯವಿಧಾನಗಳು ಲೆಕ್ಕ ಪರಿಶೋಧಕರ ತೀರ್ಮಾನದ ಮೇಲೆ ಅವಲಂಬಿತವಾಗಿದೆ. ವಂಚನೆ ಅಥವಾ ದೋಷದಿಂದಾಗಿ ಹಣಕಾಸಿನ ವಿವರಣಾ ಪಟ್ಟಿಗಳ ವಸ್ತು ತಪ್ಪು ಹೇಳಿಕೆಯ ಅಪಾಯಗಳ ಮೌಲ್ಯಮಾಪನವನ್ನು ಒಳಗೊಂಡಿರುತ್ತದೆ.

ನಾವು ಪಡೆದ ಲೆಕ್ಕ ಪರಿಶೋಧನೆಯ ಪುರಾವೆಗಳು ಹಣಕಾಸಿನ ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯಲ್ಲಿ ನಮ್ಮ ಲೆಕ್ಕ ಪರಿಶೋಧನೆಯ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸಾಕಷ್ಟಿವೆ ಮತ್ತು ಸೂಕ್ತವೆಂದು ನಾವು ನಂಬುತ್ತೇವೆ.

### ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅರ್ಥ

ಹಣಕಾಸಿನ ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಪತ್ರ ತತ್ವಗಳಿಗೆ ಅನುಗುಣವಾಗಿ ಹಣಕಾಸಿನ ವರದಿಯ ವಿಶ್ವಾಸಾರ್ಹತೆ ಮತ್ತು ಬಾಹ್ಯ ಉದ್ದೇಶಗಳಿಗಾಗಿ ಹಣಕಾಸಿನ ವಿವರಣಾ ಪಟ್ಟಿ ತಯಾರಿಕೆಯ ಬಗ್ಗೆ ಸಮಂಜಸವಾದ ಭರವಸೆಯನ್ನು ಒದಗಿಸಲು ವಿನ್ಯಾಸಗೊಳಿಸಲಾದ ಪ್ರಕ್ರಿಯೆಯಾಗಿದೆ. ಹಣಕಾಸಿನ ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣವು ಆ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಒಳಗೊಂಡಿರುತ್ತದೆ. (1) ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದ, ಸಮಂಜಸವಾದ ವಿವರಗಳಲ್ಲಿ, ಕಂಪನಿಯ ಸ್ವತ್ತುಗಳ ವಹಿವಾಟುಗಳು ಮತ್ತು ವಿಲೇವಾರಿಗಳನ್ನು ನಿಖರವಾಗಿ ಮತ್ತು ತಕ್ಕಮಟ್ಟಿಗೆ ಪ್ರತಿಬಿಂಬಿಸುತ್ತದೆ; (2) ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಪತ್ರ ತತ್ವಗಳಿಗೆ ಅನುಗುಣವಾಗಿ ಹಣಕಾಸಿನ ವಿವರಣಾ ಪಟ್ಟಿಗಳನ್ನು ತಯಾರಿಸಲು ಅನುಮತಿ ನೀಡಲು ಅಗತ್ಯವಿರುವಂತೆ ವಹಿವಾಟುಗಳನ್ನು ದಾಖಲಿಸಲಾಗಿದೆ ಎಂದು ಸಮಂಜಸವಾದ ಭರವಸೆಯನ್ನು ಒದಗಿಸಿ, ಮತ್ತು ಕಂಪನಿಯ ರಸೀದಿಗಳು ಮತ್ತು ವೆಚ್ಚಗಳನ್ನು ನಿರ್ವಹಣೆ

ಮತ್ತು ಕಂಪನಿಯ ನಿರ್ದೇಶಕರ ಅಧಿಕಾರಕ್ಕೆ ಅನುಗುಣವಾಗಿ ಮಾತ್ರ ಮಾಡಲಾಗುತ್ತದೆ; ಮತ್ತು (3) ಹಣಕಾಸಿನ ವಿವರಣಾ ಪಟ್ಟಿ ಮೇಲೆ ವಸ್ತುನಿಷ್ಠ ಪರಿಣಾಮ ಬೀರಬಹುದಾದ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನ, ಬಳಕೆ ಅಥವಾ ವಿಲೇವಾರಿ ತಡೆಗಟ್ಟುವಿಕೆ ಅಥವಾ ಸಮಯೋಚಿತ ಪತ್ತೆಗೆ ಸಂಬಂಧಿಸಿದಂತೆ ಸಮಂಜಸವಾದ ಭರವಸೆಯನ್ನು ಒದಗಿಸುತ್ತದೆ.

### ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಮಿತಿಗಳು

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅಂತರ್ಗತ ಮಿತಿಗಳ ಕಾರಣದಿಂದಾಗಿ, ನಿಯಂತ್ರಣಗಳ ಹೊಂದಾಣಿಕೆ ಅಥವಾ ಅಸಮರ್ಪಕ ನಿರ್ವಹಣೆಯ ಅತಿಕ್ರಮಣದ ಸಾಧ್ಯತೆಯನ್ನು ಒಳಗೊಂಡಂತೆ, ದೋಷ ಅಥವಾ ವಂಚನೆಯಿಂದಾಗಿ ವಸ್ತುನಿಷ್ಠ ತಪ್ಪು ಹೇಳಿಕೆಗಳು ಸಂಭವಿಸಬಹುದು ಮತ್ತು ಪತ್ತೆ ಹಚ್ಚಲಾಗುವುದಿಲ್ಲ. ಅಲ್ಲದೆ, ಭವಿಷ್ಯದ ಅವಧಿಗಳಿಗೆ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನದ ಮುನ್ನೂಹೆಗಳು ಬದಲಾವಣೆಯ ಪರಿಸ್ಥಿತಿಗಳಿಂದಾಗಿ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಅಸಮರ್ಪಕವಾಗಬಹುದು ಅಥವಾ ನೀತಿಗಳ ಕಾರ್ಯವಿಧಾನಗಳ ಅನುಪಾಲನೆಯು ಅಥವಾ ಪದ್ಧತಿಯು ಹದಗೆಡಬಹುದು.

### ಅರ್ಹ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ನಮ್ಮ ಲೆಕ್ಕ ಪರಿಶೋಧನೆಯ ಆಧಾರದ ಮೇಲೆ, ಮಾರ್ಚ್ 31, 2023 ರಂತೆ ಹಣಕಾಸು ವರದಿಯ ಮೇಲಿನ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವದಲ್ಲಿ ಈ ಕೆಳಗಿನ ವಸ್ತುನಿಷ್ಠ ದೌರ್ಬಲ್ಯಗಳನ್ನು ಗುರುತಿಸಲಾಗಿದೆ.

ಎ. ಕಂಪನಿಯು ಕೇಂದ್ರೀಕೃತ ರೀತಿಯಲ್ಲಿ ಬುಕ್ ಕೀಪಿಂಗ್ ವ್ಯವಸ್ಥೆಯನ್ನು ಹೊಂದಿಲ್ಲ. ಪ್ರಧಾನ ಕಛೇರಿಯು ಶಾಖೆಗಳು ಹಂಚಿಕೊಂಡ ಮಾಹಿತಿಯನ್ನು ಅವಲಂಬಿಸಿದೆ. ಪ್ರಧಾನ ಕಚೇರಿಯ ಹಣಕಾಸು ಮತ್ತು ಲೆಕ್ಕಪತ್ರ ತಂಡವು ಶಾಖೆಯ ಲೆಕ್ಕಪತ್ರ ಕಾರ್ಯಾಚರಣೆಯ ಕಣ್ತಪ್ಪನ್ನು ಮೇಲ್ವಿಚಾರಣೆ ನಡೆಸುವುದಿಲ್ಲ.

ಬಿ ಅಂತರ–ಶಾಖೆ ವಹಿವಾಟುಗಳ ಹೊಂದಾಣಿಕೆ ಶಿಲ್ಕುಗಳ ಹೊಂದಾಣಿಕೆ ಮತ್ತು ದಾಸ್ತಾನು ಮೌಲ್ಯಮಾಪನಕ್ಕಾಗಿ ಕಂಪನಿಯು ಹೊಂದಾಣಿಕೆಯ ಸೂಕ್ತ ವ್ಯವಸ್ಥೆಯನ್ನು ಹೊಂದಿಲ್ಲ.

ಸಿ. ಕಂಪನಿಯು ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಉಪಯುಕ್ತತೆಯ ಅವಧಿಯನ್ನು ಪರೀಕ್ಷಿಸಲು ಹಾಗೂ ಆಸ್ತಿ. ಸ್ಥಾವರ ಮತ್ತು ಉಪಕರಣಗಳ ದೌರ್ಬಲ್ಯವನ್ನು ಪರೀಕ್ಷಿಸಲು ಯಾವುದೇ ಆಂತರಿಕ ನೀತಿಯನ್ನು ಹೊಂದಿಲ್ಲ.

ಡಿ. ಸರ್ಕಾರಿ ಮಾರ್ಗದರ್ಶಿಗಳ ಅನುಪಾಲನೆಗೆ ಕಂಪನಿಯು ಸಮರ್ಪಕವಾದ ಆಂತರಿಕ ನಿಯಂತ್ರಣವನ್ನು ಕಚ್ಚಾ ವಸ್ತುಗಳ ಸಂಗ್ರಹಣೆಯಲ್ಲಿ ಹೊಂದಿಲ್ಲ.

ಇ. ಮೇಲ್ಮನವಿ ಅಡಿಯಲ್ಲಿರುವುದೂ ಸೇರಿದಂತೆ ಕಂಪನಿಯು ಆದಾಯ ತೆರಿಗೆಗೆ ಸಂಬಂಧಿಸಿದಂತೆ ತನ್ನ ಬಾಕಿ ಹೊಂದಾಣಿಕೆಯನ್ನು ಅನುರೂಪವಾದ ಹೊಣೆಗಾರಿಕೆಯೊಂದಿಗೆ ಜೊತೆಗೆ ಮುಂಗಡ ತೆರಿಗೆ/ವಾಪಸ್ಸಾತಿ/ವಿವಾದಿತ ತೆರಿಗೆಗಳು ಮತ್ತು ಇವುಗಳನ್ನು ಹಣಕಾಸು ವಿವರಣಾ ಪಟ್ಟಿಯಲ್ಲಿ ಸೂಕ್ತವಾಗಿ ವರ್ಗೀಕರಿಸಿಲ್ಲ.

ಭೌತಿಕ ದೌರ್ಬಲ್ಯವು ನ್ಯೂನ್ಯತೆಯಾಗಿದೆ, ಅಥವಾ ನ್ಯೂನ್ಯತೆಗಳ ಸಂಯೋಜನೆಯಾಗಿದೆ. ಹಣಕಾಸಿನ ವರದಿಗಾರಿಕೆ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳಲ್ಲಿನ ಕೊರತೆ ಅಥವಾ ಕೊರತೆಗಳ ಸಂಯೋಜನೆಯಾಗಿದೆ, ಅಂದರೆ ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಹಣಕಾಸಿನ ವಿವರಣ ಪಟ್ಟಿಗಳ ವಸ್ತುನಿಷ್ಠ ತಪ್ಪು ಹೇಳಿಕೆಯನ್ನು ತಡೆಯಲಾಗುವುದಿಲ್ಲ ಅಥವಾ ಸಮಯಕ್ಕೆ ಸರಿಯಾಗಿ ಪತ್ತೆಹಚ್ಚಲಾಗುವುದಿಲ್ಲ.

ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣ ಮಾನದಂಡಗಳ ಗುರಿಗಳ ಸಾಧನೆಯ ಮೇಲೆ ವಿವರಿಸಿದ ವಸ್ತುನಿಷ್ಠ ದೌರ್ಬಲ್ಯದ ನಿಮ್ಮ ಪರಿಣಾಮಗಳು/ ಸಂಭವನೀಯ ಪರಿಣಾಮಗಳನ್ನು ಹೊರತುಪಡಿಸಿ, ಕಂಪನಿಯು ಎಲ್ಲಾ ವಸ್ತು ವಿಷಯಗಳಲ್ಲಿ, ಹಣಕಾಸಿನ ವರದಿಯ ಮೇಲೆ ಸಾಕಷ್ಟು ಆಂತರಿಕ ಹಣಕಾಸಿನ ನಿಯಂತ್ರಣಗಳು ಮತ್ತು ಹಣಕಾಸು ವರದಿಯ ಮೇಲಿನ ನಿಯಂತ್ರಣಗಳನ್ನು ನಿರ್ವಹಿಸಿದೆ. ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಜಾರಿಗೊಳಿಸಿರುವ ಮಾರ್ಗದರ್ಶಿ ಟಿಪ್ಪಣಿಯಲ್ಲಿ ಹೇಳಲಾದ ಆಂತರಿಕ ನಿಯಂತ್ರಣಗಳ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿಯು ಸ್ಥಾಪಿಸಿದ ಹಣಕಾಸು ವರದಿ ಮಾನದಂಡಗಳ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಆಧಾರದ ಮೇಲೆ ಮಾರ್ಚ್ 31, 2023 ರಂತೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಕಂಪನಿಯ 2023 ರ ಮಾರ್ಚ್ 31 ರ ನಮ್ಮ ಲೆಕ್ಕ ಪರಿಶೋಧನೆಯಲ್ಲಿ ಅನ್ವಯಿಸಲಾದ ಆಡಿಟ್ ಪರೀಕ್ಷೆಗಳ ಸ್ವರೂಪ, ಸಮಯ ಮತ್ತು ವ್ಯಾಪ್ತಿಯನ್ನು ನಿರ್ಧರಿಸುವಲ್ಲಿ ನಾವು ಗುರುತಿಸಿದ ಮತ್ತು ಮೇಲೆ ವರದಿ ಮಾಡಿದ ವಸ್ತು ದೌರ್ಬಲ್ಯವನ್ನು ಪರಿಗಣಿಸಿದ್ದೇವೆ. ಈ ವಸ್ತುನಿಷ್ಠ ದೌರ್ಬಲ್ಯಗಳು ಹಣಕಾಸಿನ ವಿವರಣಾ ಪಟ್ಟಿ ಮೇಲಿನ ನಮ್ಮ ಅಭಿಪ್ರಾಯದ ಮೇಲೆ ಪರಿಣಾಮ ಬೀರಿದೆ. ಕಂಪನಿ ಮತ್ತು ನಾವು ಹಣಕಾಸಿನ ವಿವರಣಾ ಪಟ್ಟಿ ಬಗ್ಗೆ ಅರ್ಹವಾದ ಅಭಿಪ್ರಾಯವನ್ನು ನೀಡಿದ್ದೇವೆ.

**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ, ಪರವಾಗಿ**
**ಲೆಕ್ಕಪರಿಶೋಧಕರು**
**ಸಂಸ್ಥೆ ನೋಂದಣಿ: 000580S/S200066**

**ಸಹಿ/–**
**ಸಿಎ ಮಣಿಕುಮಾರ್ ಡಿ.**
**ಪಾಲುದಾರ ಸದಸ್ಯತ್ವ ಸಂಖ್ಯೆ: 212544**
**ಯುಡಿಐಎನ್: 23212544BGQHGD8753**

ಸ್ಥಳ: ಬೆಂಗಳೂರು
ದಿನಾಂಕ: 16–11–2023

## ಅನುಬಂಧ "ಸಿ"

## ಮಾರ್ಚ್ 31, 2023ಕ್ಕೆ ಕೊನೆಗೊಂಡ ವರ್ಷಕ್ಕೆ ಕಂಪನಿಗಳ ಅಧಿನಿಯಮ,2013 ರ ಸೆಕ್ಷನ್ 143(5) ಅನುಸಾರ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

| ಕ್ರ. ಸಂ | ನಿರ್ದೇಶನಗಳು | ಷರಾ |
|---|---|---|
| 1. | ಎಲ್ಲಾ ಲೆಕ್ಕಪತ್ರ ವಹಿವಾಟುಗಳನ್ನು ಐಟಿ ವ್ಯವಸ್ಥೆ ಮೂಲಕ ಪ್ರಕ್ರಿಯೆಗೊಳಿಸಲು ಕಂಪನಿಯು ವ್ಯವಸ್ಥೆಯನ್ನು ಹೊಂದಿದೆಯೇ? ಹೌದಾದರೆ, ಐಟಿ ವ್ಯವಸ್ಥೆಯ ಹೊರಗಿನ ಲೆಕ್ಕ ಪರಿಶೋಧಕ ವಹಿವಾಟುಗಳ ಪ್ರಕ್ರಿಯೆಯ ಪರಿಣಾಮಗಳನ್ನು ಲೆಕ್ಕಪತ್ರಗಳ ಸಮಗ್ರತೆಯ ಮೇಲೆ ಹಣಕಾಸಿನ ಪರಿಣಾಮಗಳ ಜೊತೆಗೆ ಯಾವುದಾದರೂ ಇದ್ದರೆ, ತಿಳಿಸಬೇಕು. | ಹೌದು, ಐಟಿ ವ್ಯವಸ್ಥೆಯ ಹೊರಗಡೆ ನಡೆಸಲಾಗುವ ವೇತನದಾರರು,ಮಾನವ ಸಂಪನ್ಮೂಲ (ಹೆಚ್ಆರ್),ದಾಸ್ತಾನು ಮೌಲ್ಯಮಾಪನ, ಕಾರ್ಯಾದೇಶ/ಖರೀದಿ ಆರ್ಡರ್‌ಗಳನ್ನು ಸಂಗ್ರಹಿಸುವುದು, ಸರಬರಾಜುದಾರರ ಉಲ್ಲೇಖಗಳ ಮೌಲ್ಯಮಾಪನ, ಚೆಕ್ ಮುದ್ರಣ, ರಶೀದಿಗಳು ಇತ್ಯಾದಿಗಳಂತಹ ಲೆಕ್ಕ ಪರಿಶೋಧಕ ವಹಿವಾಟುಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಹೊರತಾಗಿ ಕಂಪನಿಯು ಎಲ್ಲಾ ಲೆಕ್ಕಪತ್ರ ವ್ಯವಹಾರಗಳನ್ನೂ ಐಟಿ ವ್ಯವಸ್ಥೆ ಮೂಲಕ ನಿರ್ವಹಿಸುತ್ತಿದೆ. ಮೇಲಾಗಿ, ಅಧಿಕೃತ ದಾಖಲೆಗಳೂ ಸೇರಿದಂತೆ ಕಂಪನಿಯು ಲೆಕ್ಕಾಚಾರ ಮತ್ತು ವರದಿಗಾರಿಕೆಗೆ ಮೈಕ್ರೋಸಾಫ್ಟ್ ಎಕ್ಸೆಲ್ ಅನ್ವಯಗಳನ್ನು (ಅಪ್ಲಿಕೇಷನ್) ಅಪಾರ ಪ್ರಮಾಣದಲ್ಲಿ ಬಳಕೆ ಮಾಡುತ್ತಿದೆ. ಕಂಪನಿಯು ಸಮಗ್ರ ಇಪಿಆರ್ ವ್ಯವಸ್ಥೆಯನ್ನು ಸಂಪಾದಿಸಲು ಮತ್ತು ಅಳವಡಿಸಲು ಯೋಜಿಸುತ್ತಿದೆ ಎಂದು ಅರಿತುಕೊಂಡಿದ್ದೇವೆ. |
| 2. | ಅಸ್ತಿತ್ವದಲ್ಲಿರುವ ಸಾಲದ ಯಾವುದೇ ಪುನರ್‌ರಚನೆ ಅಥವಾ ಸಾಲ/ಸಾಲಗಳು/ಬಡ್ಡಿ ಇತ್ಯಾದಿಗಳಿಗೆ ಮನ್ನಾ/ರೈಟ್ ಆಫ್ ಪ್ರಕರಣಗಳು, ಸಾಲವನ್ನು ಮರುಪಾವತಿಸಲು ಕಂಪನಿಯ ಅಸಮರ್ಥತೆಯಿಂದಾಗಿ ಕಂಪನಿಗೆ ಸಾಲದಾತರಿಂದ ಮಾಡಲ್ಪಟ್ಟಿದೆಯೆ? ಹೌದು ಎಂದಾದರೆ, ಹಣಕಾಸಿನ ಪ್ರಭಾವವನ್ನು ಹೇಳಬಹುದು. ಅಂತಹ ಪ್ರಕರಣಗಳನ್ನು ಸರಿಯಾಗಿ ಪರಿಗಣಿಸಲಾಗಿದೆಯೇ? (ಒಂದು ವೇಳೆ, ಸಾಲದಾತನು ಸರ್ಕಾರಿ ಕಂಪನಿಯಾಗಿದ್ದರೆ, ಈ ನಿರ್ದೇಶನವು ಸಾಲದಾತ ಕಂಪನಿಯ ಶಾಸನಬದ್ಧ ಲೆಕ್ಕ ಪರಿಶೋಧಕರಿಗೂ ಅನ್ವಯಿಸುತ್ತದೆ). | ಇಲ್ಲ, ಮಾರ್ಚ್ 31, 2023ರಂತೆ ಬಾಕಿ ಇರುವ ಯಾವುದೇ ಹೊಣೆಗಾರಿಕೆಗಳಿಲ್ಲ. |
| 3. | ಕೇಂದ್ರ/ ರಾಜ್ಯ ಸರ್ಕಾರ ಅಥವಾ ಅದರ ಏಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಹಣ (ಅನುದಾನಗಳು/ ಸಬ್ಸಿಡಿ ಇತ್ಯಾದಿ) ಸ್ವೀಕರಿಸಲಾಗಿದೆಯೇ ಅಥವಾ ಅದರ ನಿಯಮಗಳು ಮತ್ತು ಷರತ್ತುಗಳಿಗೆ ಸರಿಯಾಗಿ ಲೆಕ್ಕ ಹಾಕಲಾಗಿದೆಯೇ/ಬಳಸಲಾಗಿದೆಯೇ? ಉಲ್ಲಂಘನೆಯ/ ಅಡ್ಡದಾರಿಯ ಪ್ರಕರಣಗಳನ್ನು ಪಟ್ಟಿ ಮಾಡಿ. | ಮಾರ್ಚ್ 31,2023 ಕ್ಕೆ ಕೊನೆಗೊಂಡ ಅವಧಿಯಲ್ಲಿ ಕೇಂದ್ರ / ರಾಜ್ಯ ಸರ್ಕಾರ ಅಥವಾ ಅದರ ಏಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಯಾವುದೇ ಹಣವನ್ನು ಸ್ವೀಕರಿಸಿಲ್ಲ / ಸ್ವೀಕರಿಸಲಾಗುವುದಿಲ್ಲ.<br>ಒದಗಿಸಿದ ಮಾಹಿತಿಯ ಪ್ರಕಾರ ಮತ್ತು ಸಾಮಾನ್ಯ ಲೆಕ್ಕ ಪರಿಶೋಧನೆಯ ಸಮಯದಲ್ಲಿ ನಾವು ಪರಿಶೀಲಿಸಿದ ಲೆಕ್ಕ ಪುಸ್ತಕಗಳು ಮತ್ತು ಇತರ ದಾಖಲೆಗಳ ಪರಿಶೀಲನೆಯ ಪ್ರಕಾರ, ಉತ್ತಮ ತಿಳುವಳಿಕೆಯ ಪ್ರಕಾರ, ನಿರ್ದಿಷ್ಟ ಸ್ವೀಕರಿಸಿದ/ಸ್ವೀಕರಿಸಬಹುದಾದ ನಿಧಿಗಳಿಗೆ ಮತ್ತು ಅದರ ಬಳಕೆಗೆ ಸಂಬಂಧಿಸಿದಂತೆ ಯಾವುದೇ ಉಲ್ಲಂಘನೆಯ ಪ್ರಕರಣಗಳು ಕಂಡುಬಂದಿಲ್ಲ. |

## ಕಂಪನಿಯ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು

| ಕ್ರ.ಸಂ | ನಿರ್ದಿಷ್ಟ ನಿರ್ದೇಶನಗಳು | ಷರಾ |
|---|---|---|
| 1. | **ಅನುಬಂಧ–1**ರ ಪ್ರಕಾರ ನಗದು ಮತ್ತು ಬ್ಯಾಂಕ್ ಶಿಲ್ಕುಗಳಿಗೆ ಸಂಬಂಧಿಸಿದಂತೆ ಎಲ್ಲಾ ಐಟಂಗಳನ್ನು ಪರಿಶೀಲಿಸಬೇಕು ಮತ್ತು ನಿರ್ದಿಷ್ಟ ಅನುಪಾಲನೆಯಾಗದ ಪ್ರಕರಣಗಳನ್ನು ವರದಿ ಮಾಡಬೇಕು. ಸಂದೇಹಾಸ್ಪದ ಲೆಕ್ಕದ ಅಡಿಯಲ್ಲಿ ನಿರ್ವಹಿಸಲಾದ ವಿವರಿಸಲಾಗದ ಶಿಲ್ಕು / ಶಿಲ್ಕುಗಳ ವಿವರಗಳನ್ನು ಸಹ ಪರೀಕ್ಷಿಸಬೇಕು. | ಹೌದು – ಶಿಲ್ಕು ದೃಢೀಕರಣವನ್ನು ಒದಗಿಸದಿರುವ ಬೆಂಗಳೂರು ಶಾಖೆಯಲ್ಲಿನ ಎರಡು ಬ್ಯಾಂಕ್ ಖಾತೆಗಳನ್ನು ಹೊರತುಪಡಿಸಿ ನಗದು ಮತ್ತು ಬ್ಯಾಂಕ್ ಶಿಲ್ಕುಗಳಿಗೆ ಸಂಬಂಧಿಸಿದಂತೆ ಎಲ್ಲಾ ಐಟಂಗಳನ್ನು ಪರಿಶೀಲಿಸಲಾಗಿದೆ:<br>i. ಕಾರ್ಪೊರೇಶನ್ ಬ್ಯಾಂಕ್ ಖಾತೆ (526):2,72,004/–<br>ii. ಕಾರ್ಪೊರೇಶನ್ ಬ್ಯಾಂಕ್ ಖಾತೆ (560):4,05,500/–<br>iii. ಕೆನರಾ ಬ್ಯಾಂಕ್ ಕಲೆಕ್ಷನ್ ಅಕೌಂಟ್ –ಶಿವಮೊಗ್ಗ–1,000/–<br>ನಾವು ಪಡೆದ ವಿವರಣೆಯ ಆಧಾರದ ಮೇಲೆ, ಮೇಲಿನ ಖಾತೆಗಳು ಬ್ಯಾಂಕ್ ಖಾತೆಗಳಲ್ಲ ಮತ್ತು ನೆಟ್ ಬ್ಯಾಂಕಿಂಗ್ ಬರುವ ಮೊದಲು ನಿಯಂತ್ರಿಸುತ್ತಿದ್ದ ಖಾತೆಗಳಾಗಿವೆ. |
| 2. | ಸ್ಥಾಪಿತ ಸಾಮರ್ಥ್ಯಕ್ಕೆ ಅನುಗುಣವಾಗಿ ಆರ್ಥಿಕ ವರ್ಷದಲ್ಲಿ ಸ್ಥಾವರ ಮತ್ತು ಯಂತ್ರೋಪಕರಣಗಳ ಬಳಕೆಯ ಪ್ರಮಾಣವನ್ನು ತಿಳಿಸಿ. | ನಮಗೆ ಒದಗಿಸಿದ ವಿವರಣೆಯ ಆಧಾರದ ಮೇಲೆ, ಘಟಕ ಮತ್ತು ಯಂತ್ರೋಪಕರಣಗಳನ್ನು ವರ್ಷದಲ್ಲಿ ಸಂಪೂರ್ಣವಾಗಿ ಬಳಸಲಾಗಿದೆ.<br>**ವಿಭಾಗ** – **ಬಳಕೆ %**<br>ಸಾಬೂನುಗಳು – 78.38<br>ಮಾರ್ಜಕಗಳು – 42.63<br>ಪ್ರಸಾದನಗಳು – 5.52<br>ಆಡಳಿತ ಮಂಡಳಿಯು ಅವುಗಳ ದುರ್ಬಲತೆ ಪರೀಕ್ಷೆಯನ್ನು ನಡೆಸಿಲ್ಲ. |
| 3. | ಯಾವುದೇ ಮೊತ್ತವನ್ನು ಸೇವೆಗೆ ಒಳಪಡದ/ ದೀರ್ಘಾವಧಿಯಿಂದ ದಾಸ್ತನಿರುವ ಅಥವಾ ಬಳಕೆಯಾಗದ ಕಚ್ಚಾ ವಸ್ತುಗಳಲ್ಲಿ ಸಿಲುಕಿಕೊಂಡಿದೆಯೇ (ಲಾಕ್) ಮತ್ತು ಕೆಲಸ ಪ್ರಗತಿಯಲ್ಲಿದೆಯೇ ಮತ್ತು ಹಾಗಿದ್ದಲ್ಲಿ ' ಖಾತೆಗಳ ಮೇಲೆ ಪರಿಣಾಮವೇನು? | ನೀಡಲಾದ ವಿವರಣೆ ಮತ್ತು ಮಾಹಿತಿ ಆಧರಿಸಿ ದಾಸ್ತಾನು ಮೊತ್ತ ರೂ.8.35 ಲಕ್ಷದ ಸೇವೆಗೆ ಒಳಪಡದ/ದೀರ್ಘಾವಧಿಯಿಂದ ದಾಸ್ತನಿರುವ ಅಥವಾ ಬಳಕೆಯಾಗದ ಕಚ್ಚಾ ಕಚ್ಚಾ ವಸ್ತು (ರಾಸಯನಿಕಗಳು) ಅಲ್ಲಿದ್ದವು, ಮತ್ತು ದಾಸ್ತನನ್ನು ಮೌಲ್ಯ ಮಾಡುವಾಗ ಅದನ್ನು ಕಡಿಮೆ ಮಾಡಲಾಗಿದೆ. ಲೆಕ್ಕಪತ್ರದ ಮೇಲೆ ಪರಿಣಾಮ ರೂ.8.35ಲಕ್ಷ.ಆದಾಗ್ಯೂ, ಭೌತಿಕ ಪರೀಕ್ಷೆ ವೇಳೆ ಕಾರ್ಖಾನೆಯಲ್ಲಿ ನಿಶ್ಚಲ ಪ್ಯಾಕಿಂಗ್ ಸಾಮಗ್ರಿಗಳನ್ನು ಗಮನಿಸಲಾಯಿತು. ಸಾಕಷ್ಟು ಮತ್ತು ಸೂಕ್ತವಾದ ಪುರಾವೆಗಳು ಇಲ್ಲದ ಕಾರಣ ಅದರ ಪರಿಣಾಮವನ್ನು ಪ್ರಮಾಣೀಕರಿಸಲು ಸಾಧ್ಯವಿಲ್ಲ. |
| 4. | ಕಂಪನಿಯು ಅಂತರ–ಶಾಖೆ ವಹಿವಾಟುಗಳಿಗೆ ಹೊಂದಾಣಿಕೆಯ ಸರಿಯಾದ ವ್ಯವಸ್ಥೆಯನ್ನು ಹೊಂದಿದೆಯೇ, ಸಾಲಗಾರರು ಮತ್ತು ಸಾಲಗಾರರೊಂದಿಗೆ ಸಮತೋಲನಗಳ ಹೊಂದಾಣಿಕೆ ಮತ್ತು ದಾಸ್ತಾನು ಮೌಲ್ಯಮಾಪನ ಮಾಡಲಾಗಿದೆಯೆ? | i. ನಿಯಮಿತ ಮಧ್ಯಂತರಗಳಲ್ಲಿ ಅಂತರ–ಶಾಖೆ ವಹಿವಾಟುಗಳ ಹೊಂದಾಣಿಕೆಗಾಗಿ ಕಂಪನಿಯು ಯಾವುದೇ ಕಾರ್ಯವಿಧಾನ ಹೊಂದಿಲ್ಲ. ಹಣಕಾಸಿನ ವಿವರಣಾ ಪಟ್ಟಿಗಳನ್ನು ಸಿದ್ಧಪಡಿಸುವ ಸಲುವಾಗಿ ಲೆಕ್ಕಪತ್ರ ತಜ್ಞರಿಂದ ಅಂತರ– ಶಾಖೆ ಸಮನ್ವಯವನ್ನು ಮಾಡಲಾಗಿದೆ.<br>ii. ಸಾಲಗಾರರು ಅಥವಾ ಪಾವತಿದಾರರು (ಡೆಟ್ಟರ್ಸ್ & ಕ್ರೆಡಿಟರ್ಸ್) / ಸಾಲಗಾರರೊಂದಿಗೆ ಬಾಕಿಗಳ ಹೊಂದಾಣಿಕೆಗೆ ಸಂಬಂಧಿಸಿದಂತೆ, ಕಂಪನಿಯು ಬಾಕಿ ದೃಢೀಕರಣ ಮತ್ತು ಅವುಗಳ ಮರುಹೊಂದಾಣಿಕೆಗೆ ಯಾವುದೇ ಔಪಚಾರಿಕ ವ್ಯವಸ್ಥೆ ಹೊಂದಿಲ್ಲ.<br>iii. ದಾಸ್ತಾನು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ, ಆಡಳಿತ ಮಂಡಳಿಯು ಅದರ ಮೌಲ್ಯಮಾಪನದಲ್ಲಿ ಸರಿಯಾದ ವ್ಯವಸ್ಥೆಯನ್ನು ಹೊಂದಿದೆ. ಆದಾಗ್ಯೂ ಇದು ಸ್ವಯಂಚಾಲಿತವಾಗಿಲ್ಲ ಮತ್ತು ಅದನ್ನು ಎಕ್ಸೆಲ್ ಸ್ಪ್ರೆಡ್‌ಶೀಟ್‌ನಲ್ಲಿ ಮಾಡಲಾಗುತ್ತಿದೆ. |

| | | |
|---|---|---|
| 5. | ಕಂಪನಿಯ ಬೆಲೆ ನಿಗದಿ ನೀತಿಯು ಎಲ್ಲಾ ನಿಗದಿತ ಮತ್ತು ವ್ಯತ್ಯಯವಾಗಬಹುದಾದ ಉತ್ಪಾದನಾ ವೆಚ್ಚವನ್ನು ಹಾಗೂ ಮೇಲ್ವೆಚ್ಚಗಳ ಹಂಚಿಕೆಯನ್ನು ಒಳಗೊಳ್ಳುತ್ತದೆಯೇ? | ಹೌದು, ಕಂಪನಿಯ ಬೆಲೆ ನಿಗದಿ ನೀತಿಯು ಎಲ್ಲಾ ನಿಗದಿತ ಮತ್ತು ವ್ಯತ್ಯಯವಾಗಬಹುದಾದ ಉತ್ಪಾದನಾ ವೆಚ್ಚವನ್ನು ಹಾಗೂ ಮೇಲ್ವೆಚ್ಚಗಳ ಹಂಚಿಕೆಯನ್ನು ಒಳಗೊಳ್ಳುತ್ತದೆ. |
| 6. | ದುರುಪಯೋಗ, ವಂಚನೆ ಪ್ರಕರಣಗಳ ನಿಭಾವಣೆಗೆ ಕಂಪನಿಯು ಪರಿಣಾಮಕಾರೀ ವ್ಯವಸ್ಥೆ ಹೊಂದಿದೆಯೇ ಮತ್ತು ಯಾವುದಾದದರೂ ನಷ್ಟಗಳು, ಯಾವುದೇ ಇದ್ದಲ್ಲಿ ಲೆಕ್ಕಪತ್ರ ಪುಸ್ತಕದಲ್ಲಿ ಸೂಕ್ತವಾಗಿ ಲೆಕ್ಕಾಚಾರ ಮಾಡಲಾಗಿದೆಯೇ? | ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆ ಮತ್ತು ನಮಗೆ ಪ್ರತಿನಿಧಿಸಿದ್ದರ ಪ್ರಕಾರದುರುಪಯೋಗ, ವಂಚನೆ ಪ್ರಕರಣಗಳ ನಿಭಾವಣೆಗೆ ಕಂಪನಿಯು ಪರಿಣಾಮಕಾರೀ ವ್ಯವಸ್ಥೆ ಹೊಂದಿದೆ. ವರ್ಷದ ಅವಧಿಯಲ್ಲಿ ಕಂಪನಿ ಅಥವಾ ಕಂಪನಿ ಮೇಲೆ ಯಾವುದೇ ವಂಚನೆ ಪ್ರಕರಣ ಗಮನಿಸಿಲ್ಲ ಅವಾ ವರದಿ ಮಾಡಿಲ್ಲ. ಇದನ್ನು ಅನುಬಂಧ 1ರ 11 (ಎ) ನಲ್ಲಿ ಹೇಳಲಾಗಿದೆ. |

**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ, ಪರವಾಗಿ**
**ಲೆಕ್ಕಪರಿಶೋಧಕರು**
**ಸಂಸ್ಥೆ ನೋಂದಣಿ: 000580S/S200066**

**ಸಹಿ/–**
**ಸಿಎ ಮಣಿಕುಮಾರ್ ಡಿ.**
**ಪಾಲುದಾರ ಸದಸ್ಯತ್ವ ಸಂಖ್ಯೆ: 212544**
**ಯುಡಿಐಎನ್: 23212544BGQHGD8753**

ಸ್ಥಳ: ಬೆಂಗಳೂರು
ದಿನಾಂಕ: 16–11–2023

## ಅನುಬಂಧ–1

| ಕ್ರ.ಸಂ | ಪರಿಶೀಲನಾ ಪಟ್ಟಿಯಲ್ಲಿನ ಅಂಶಗಳು | ಷರಾ |
|---|---|---|
| 1. | ಬ್ಯಾಂಕ್‌ಗಳಲ್ಲಿ ಎಲ್ಲಾ ಬ್ಯಾಂಕ್ ಖಾತೆಗಳು/ಸ್ಥಿರ ಠೇವಣಿಗಳನ್ನು ಸೂಕ್ತವಾದ ಅಧಿಕಾರ ಪತ್ರ ಹೊಂದಿಯೇ ಮತ್ತು ಮೇಲೆ ಹೇಳಲಾದ ಅಧಿಕಾರದ ಹಂಚಿಕೆಯಂತೆ ಅನುಮತಿಗಳನ್ನು ಹೊಂದುವ ಮೂಲಕ ತೆರೆಯಲಾಗಿದೆಯೇ ? | ಹೌದು. |
| 2. | ಬ್ಯಾಂಕ್ ಹೊಂದಾಣಿಕೆ ಹೇಳಿಕೆಗಳನ್ನು ಸಿದ್ಧಪಡಿಸುವ ನಿಯತಕಾಲಿಕ ವ್ಯವಸ್ಥೆ ಇದೆಯೇ ಮತ್ತು ಇವುಗಳನ್ನು ಲೆಕ್ಕಪರಿಶೋಧನೆಗಾಗಿ ನೀಡಲಾಗಿದೆಯೇ? | ಹೌದು, ಆದಾಗ್ಯೂ ಶಾಖೆಗಳಲ್ಲಿ ಮಾಸಿಕವಾರು ಬ್ಯಾಂಕ್ ಹೊಂದಾಣಿಕೆಗಳನ್ನು ಸಿದ್ಧಪಡಿಸಲಾಗಿಲ್ಲ ಮತ್ತು ಸಹಿ ಮಾಡಿಲ್ಲ. |
| 3. | ಮುಖ್ಯ ಖಾತೆ ಮತ್ತು ಹೆಚ್ಚುವರಿ ಬ್ಯಾಂಕ್ ಖಾತೆಗಳ ಬ್ಯಾಂಕ್ ಹೊಂದಾಣಿಕೆಗಳನ್ನು ಮಾಡಲಾಗಿದೆಯೇ? | ಹೌದು. |
| 4. | ಸ್ಥಿರ ಠೇವಣಿಯ ಬಡ್ಡಿ ಸಂಪೂರ್ಣ ಅವಧಿಗೆ ಲೆಕ್ಕಪತ್ರ ಪುಸ್ತಿಕೆಯಲ್ಲಿ ದಾಖಲಿಸಲಾಗಿದೆಯೇ? | ಹೌದು. |
| 5. | ಬ್ಯಾಂಕ್ ಖಾತೆಗಳ ನಿರ್ವಹಣೆಗೆ ಒಬ್ಬರು ಸಹಿದಾರರಿಗೆ ಅಧಿಕಾರ ನೀಡಲಾಗಿದೆಯೇ? | ಇಲ್ಲ. ವ್ಯವಸ್ಥಾಪಕ ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪಕ (ಹಣಕಾಸು) ಅವರಿಗೆ ಜಂಟಿಯಾಗಿ ಸಹಿ ಮಾಡುವ ಅಧಿಕಾರ ವಹಿಸಲಾಗಿದೆ. |
| 6. | ನಗದಿನ ಭೌತಿಕ ಪರಿಶೀಲನೆ ನಿಯತಕಾಲಿಕವಾಗಿ ನಡೆಸಲಾಗಿದೆಯೇ? | ಹೌದು. |
| 7. | ಹಣಕಾಸು ವಿವರ ಪಟ್ಟಿಯಲ್ಲಿ (ಬ್ಯಾಲನ್ಸ್‌ಶೀಟ್‌ನಲ್ಲಿ ತೋರಿಸಲಾಗಿರುವ ಕೈಯ್ಯಲ್ಲಿರುವ ನಗದು (ಕ್ಯಾಶ್ ಇನ್ ಹ್ಯಾಂಡ್) ನಗದು ಪರಿಶೀಲನಾ ಪ್ರಮಾಣ ಪತ್ರಕ್ಕೆ ಹೊಂದಾಣಿಕೆ ಆಗುತ್ತಿದೆಯೇ? | ಹೌದು. |
| 8. | ಮುಕ್ತಾಯಗೊಳ್ಳುವ (ಮೆಚ್ಯುರಿಟಿ) ದಿನಾಂಕ, ಬಡ್ಡಿ ದರ ಮತ್ತು ಬಡ್ಡಿ ದರ ದಿನಾಂಕಗಳನ್ನು ದೃಢಪಡಿಸುವ ಸ್ಥಿರ ಠೇವಣಿ ಮೊತ್ತಗಳನ್ನು ತೋರಿಸುವ ದಾಖಲಾತಿ ಪುಸ್ತಕ ಇದೆಯೇ? | ಹೌದು. |
| 9. | ಸ್ಥಿರ ಠೇವಣಿ ಮೇಲಿನ ಬಡ್ಡಿಯನ್ನು ಅಂತಿಮ ದಿನಾಂಕದಲ್ಲಿ ಸ್ವೀಕೃತಿಯನ್ನು ಖಾತರಿಪಡಿಸಲು ಅನುಸರಿಸುವ ವ್ಯವಸ್ಥೆ ಇದೆಯೇ? | ಹೌದು. |
| 10. | ಅವಧಿ ಮುಗಿದ (ಮೆಚ್ಯೂರ್ಡ್) ಸ್ಥಿರ ಠೇವಣಿ ಯಾವುದೇ ವಿಳಂಬವಿಲ್ಲದೇ ವರ್ಗಾವಣೆ ಆಗುತ್ತಿದೆ ಎಂಬುದನ್ನು ಖಾತರಿಪಡಿಸಲು ಅನುಸರಣಾ ವ್ಯವಸ್ಥೆ ಇದೆಯೇ? | ಹೌದು. |
| 11. | ಉಳಿತಾಯ ಖಾತೆ, ಚಾಲ್ತಿ ಖಾತೆ ಮತ್ತು ಸ್ಥಿರ ಠೇವಣಿ ಮೊದಲಾದ ಬ್ಯಾಂಕ್‌ನ ಎಲ್ಲಾ ಖಾತೆಗಳ ಶಿಲ್ಕುಗಳ ಬ್ಯಾಂಕ್ ಖಾತರಿಗಳನ್ನು ನಿಯತಕಾಲಿಕವಾಗಿ ಪಡೆಯಲಾಗುತ್ತಿದೆಯೇ? | ಹೌದು. |
| 12. | ಎಲ್ಲಾ ಬ್ಯಾಂಕ್ ಶಿಲ್ಕುಗಳ ದೃಢೀಕರಣವು ಬ್ಯಾಂಕ್ ವಿವರಣಾ ಪಟ್ಟಿಯೊಂದಿಗೆ ತಾಳೆಯಾಗುತ್ತಿದೆಯೇ? | ಹೌದು. |
| 13. | ಸ್ಥಿರ ಠೇವಣಿಗಳು ಮತ್ತು ಬಡ್ಡಿಗಳು ಸ್ಥಿರ ದಾಖಲಾತಿ ಪುಸ್ತಕದಂತೆ ಬ್ಯಾಂಕ್ ನೀಡಿರುವ ದೃಢೀಕರಣ ಪ್ರಮಾಣಪತ್ರದೊಂದಿಗೆ ತಾಳೆಯಾಗುತ್ತಿದೆಯೇ? | ಹೌದು. |
| 14. | ಬ್ಯಾಂಕ್‌ಗಳಿಂದ ಸ್ವೀಕರಿಸಲಾಗಿರುವ ದೃಢೀಕರಣ ಹೇಳಿಕೆಗಳು ಪ್ರಮಾಣೀಕರಣಗೊಂಡಿವೆಯೇ ಮತ್ತು ಬ್ಯಾಂಕ್‌ಗಳ ಮುದ್ರಿತ ಶೀರ್ಷಿಕೆ ಪತ್ರ (ಲೆಟರ್‌ಹೆಡ್)ನಲ್ಲಿದೆಯೇ? | ಹೌದು. |
| 15. | ಮೇಲಿನ ಪರಿಶೀಲನೆಯಲ್ಲಿ ಯಾವುದೇ ವ್ಯತ್ಯಾಸಗಳನ್ನು ಗಮನಿಸಿದಲ್ಲಿ, ನಂತರದ ವರ್ಷದಲ್ಲಿ ಅದನ್ನು ಹೊಂದಾಣಿಕೆ ಮಾಡಲಾಗಿದೆಯೇ? | ಅಂತಹ ಪ್ರಕರಣಗಳಿಲ್ಲ |
| 16. | ಬಾಹ್ಯ ದೃಢೀಕರಣವನ್ನು ಬ್ಯಾಂಕ್‌ಗಳಿಂದ ಪಡೆಯಲಾಗಿದೆಯೇ? ಹಾಗಿದ್ದಲ್ಲಿ ಅವರ ವಿವರಗಳು. | ಎಲ್ಲ ಬ್ಯಾಂಕ್ ಖಾತೆಗಳಿಗೆ ಬಾಹ್ಯ ದೃಢೀಕರಣವನ್ನು ಪಡೆಯಲಾಗಿದೆ ನಿರ್ದಿಷ್ಟ ನಿರ್ದೇಶನಗಳಿಗೆ ಟಿಪ್ಪಣಿಯಲ್ಲಿ ಚರ್ಚಿಸಲಾದ ಕೆಲವೊಂದು ವಿಷಯಗಳ ಹೊರತಾಗಿ |
| 17. | ಮೇಲೆ ಹೇಳಲಾಗಿರುವ ಯಾವುದೇ ನ್ಯೂನ್ಯತೆಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಆಂತರಿಕ ಹಣಕಾಸು ನಿಯಂತ್ರಣ ವರದಿಯಲ್ಲಿ ನಮೂದಿಸಲಾಗಿದೆಯೇ ಇಲ್ಲವಾದಲ್ಲಿ ಲೆಕ್ಕಪರಿಶೋಧನೆ ವಿಚಾರಣೆ ನೀಡಲಾಗಿದೆಯೇ? | ಅಂತಹ ಪ್ರಕರಣಗಳಿಲ್ಲ |

## ಅನಬಂಧ–ಡಿ

## ಬಾಕಿ ಇರುವ ದಾವೆಗಳ ಪ್ರಭಾವ

1. ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ಹಾಗೂ ಕಂಪನಿಯ ದಾಖಲೆಗಳ ಪರಿಶೀಲನೆ ಆಧಾರದ ಮೇಲೆ ಕಂಪನಿಯು ವಾಸ್ತವಿಕ ಶಾಸನಬದ್ಧ ಬಾಕಿಗಳು ಒಳಗೊಂಡಂತೆ ವಿವಾದರಹಿತ ಶಾಸನಬದ್ಧ ಬಾಕಿಗಳಾದ ಆದಾಯ ತೆರಿಗೆ, ಮಾರಾಟ ತೆರಿಗೆ, ಕಸ್ಟಮ್ಸ್ ಸುಂಕ, ಮೌಲ್ಯವರ್ಧಿತ ತೆರಿಗೆ (ವ್ಯಾಟ್), ಸರಕು ಮತ್ತು ಸೇವಾ ತೆರಿಗೆ, ಸೆಸ್, ಭವಿಷ್ಯ ನಿಧಿ, ವೃತ್ತಿಪರ ತೆರಿಗೆ, ಹಾಗೂ ಇತರೆ ಸಕ್ಷಮ ಪ್ರಾಧಿಕಾರಗಳಲ್ಲಿ ನಿಯಮಿತವಾಗಿ ಠೇವಣಿ ಮಾಡುತ್ತಿದೆ. ಆದರೆ ನೇರ ಮತ್ತು ಪರೋಕ್ಷ ತೆರಿಗೆಗೆ ಸಂಬಂಧಿಸಿದಂತೆ ಬಾಕಿ ಮೊಕದ್ದಮೆಗಳಿದ್ದು ಈ ಕುರಿತಂತೆ ಸ್ಥಿತಿಯ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ :

   ಅ. ಆದಾಯ ತೆರಿಗೆ ಕಾಯ್ದೆಯಡಿಯಲ್ಲಿ ಮೇಲ್ಮನವಿ ಪ್ರಾಧಿಕಾರದ ಮುಂದೆ ಬಾಕಿ ಇರುವ ಪ್ರಕರಣಗಳನ್ನು **ಅನುಬಂಧ–ಇ** ನಲ್ಲಿ ನೀಡಲಾಗಿದೆ.

2. ಹಣಕಾಸಿನ ಅಕ್ರಮಗಳಲ್ಲಿ ತೊಡಗಿದ್ದ ಅಂದಿನ ಉಪ ಪ್ರಧಾನ ವ್ಯವಸ್ಥಾಪಕ (ಹಣಕಾಸು) ಪಿ. ರವಿ ವಿರುದ್ಧ ಇಲಾಖಾ ತನಿಖೆ ಆರಂಭಿಸಲಾಯಿತು. ಅವರನ್ನು ಅಮಾನತಿನಲ್ಲಿಡಲಾಯಿತು. ಬಳಿಕ ವಿಚಾರಣಾ ವರದಿಯನ್ನು ಸ್ವೀಕರಿಸಿದ ನಂತರ ಕಂಪನಿಯು ಶ್ರೀ ಪಿ. ರವಿ ಅವರನ್ನು ಸೇವೆಯಿಂದ ವಜಾಗೊಳಿಸಿತು. ವಿಷಯಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಸಮಿತಿಯೊಂದನ್ನು ಸರ್ಕಾರ ರಚನೆ ಮಾಡಿತು.

   ಈ ಉದ್ದೇಶಕ್ಕಾಗಿ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿಯವರನ್ನು ನೇಮಕ ಮಾಡಲಾಯಿತು. ನಂತರ ನಿವೃತ್ತ ನ್ಯಾಯಮೂರ್ತಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದರು. ವರದಿಯ ಫಲಿತಾಂಶ ಏನೆಂಬುದು ಕಂಪನಿಗೆ ಇನ್ನಷ್ಟೇ ತಿಳಿಯಬೇಕಿದೆ. ಮುಂದುವರೆದು, ಮೆ॥ ಬಾಲಾಜಿ ಫುಡ್ ಪ್ರೊಸೆಸಿಂಗ್ ಇಂಡಸ್ಟ್ರೀ ಮಾಲೀಕರಿಂದ ಬರಬೇಕಾದ ಬಾಕಿ ವಸೂಲಿಗೆ ಕಂಪನಿ ಕ್ರಮಗೊಂಡಿದೆ.

   ಸರಬರಾಜುದಾರರು ಮತ್ತು ಅವರೊಂದಿಗೆ ಸಂಪರ್ಕ ಹೊಂದಿದವರ ವಿರುದ್ಧ ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣ ದಾಖಲಿಸಲಾಗಿದೆ. ಹಣವನ್ನು ವಸೂಲು ಮಾಡಲು ಕಾನೂನು ಕ್ರಮ ಕೈಗೊಂಡಿದ್ದು ಪ್ರಕರಣವು ನ್ಯಾಯಾಲಯದ ಮುಂದಿದ್ದು ಸೆಪ್ಟೆಂಬರ್ 1, 2023 ರಂದು ಮುಂದಿನ ವಿಚಾರಣೆ ನಿಗದಿಪಡಿಸಿದೆ.

| ಮೊಕದ್ದಮೆ ಸಂಖ್ಯೆ | ನ್ಯಾಯಾಲಯ | ದಾವೆ |
|---|---|---|
| Com.O.S-8856/2015 | 1389-CCH-LXXXII ACCS | ವಸೂಲಿ ದಾವೆ |
| Com.O.S-8857/2015 | 1389-CCH-LXXXII ACCS | ವಸೂಲಿ ದಾವೆ |
| Com.O.S-8863/2015 | 1389-CCH-LXXXII ACCS | ವಸೂಲಿ ದಾವೆ |

O.S 8856/2015 & O.S 8863/2015ಗೆ ಸಂಬಂಧಿಸಿದಂದಂತೆ ದಾವೆಯ ತೀರ್ಪು ಕಾರ್ಪರೇಷನ್ ಬ್ಯಾಂಕ್ ಮತ್ತು ಮೆ॥ ಬಾಲಾಜಿ ಫುಡ್ ಪ್ರೊಸೆಸಿಂಗ್ ವಿರುದ್ಧ, ಕೆಎಸ್&ಡಿಎಲ್ ಪರ ಆಯಿತು, ಇದೇ ವೇಳೆ ದಾವೆಯು ಭಾಗಶಃ ಕೆಎಸ್&ಡಿಎಲ್ ಪರವಾಗಿ ಕೇವಲ ಮೆ॥ ಬಾಲಾಜಿ ಫುಡ್ ಪ್ರೊಸೆಸಿಂಗ್ ಇಂಡಸ್ಟ್ರೀಸ್ ವಿರುದ್ಧವಾಗಿ ಆದೇಶವಾಯಿತು. ಕಂಪನಿಯು ತನ್ನ ನ್ಯಾಯವಾದಿಗಳ ಮೂಲಕ ಪ್ರತಿವಾದಿಗಳ ವಿರುದ್ಧ ಎಕ್ಸಿಕ್ಯೂಟಿವ್ ಪಿಟಿಷನ್‌ನ್ನು ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಪ್ರತಿವಾದಿಗಳ ವಿರುದ್ಧ ಸಲ್ಲಿಸುತ್ತಿದೆ. ಸಲ್ಲಿಕೆ ಬಳಿಕ ಮುಂದಿನ ದಿನಾಂಕ ತಿಳಿಯಲಿದೆ.

ಕಂಪನಿಯು ಆರೋಪಿಯಿಂದ ವಸೂಲಿ ಮಾಡಬೇಕಾದ 100% ಮೊತ್ತಕ್ಕೆ ಅವಕಾಶ ಮಾಡಿದೆ.

**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ, ಪರವಾಗಿ**
**ಲೆಕ್ಕಪರಿಶೋಧಕರು**
**ಸಂಸ್ಥೆ ನೋಂದಣಿ: 000580S/S200066**

**ಸಹಿ/–**
**ಸಿಎ ಮಣಿಕುಮಾರ್ ಡಿ.**
**ಪಾಲುದಾರ ಸದಸ್ಯತ್ವ ಸಂಖ್ಯೆ: 212544**
**ಯುಡಿಐಎನ್: 23212544BGQHGD8753**

ಸ್ಥಳ: ಬೆಂಗಳೂರು
ದಿನಾಂಕ: 16–11–2023

## ಅನುಬಂಧ – ಇ
## ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್
## 31.03.2023 ರಲ್ಲಿದ್ದಂತೆ ಆದಾಯ ತೆರಿಗೆಗೆ ಸಂಬಂಧಿಸಿದ ಬಾಕಿ ಪ್ರಕರಣಗಳ ವಿವರಗಳು

| ಕ್ರ. ಸಂ | ಅಧಿನಿಯಮದ ಹೆಸರು | ಬಾಕಿ ಸ್ವರೂಪ | ಮೊತ್ತ (ಕೋಟಿ ರೂಗಳಲ್ಲಿ) | ಮೊತ್ತ ಸಂಬಂಧಿಸಿದ ಅವಧಿ (ಮೌಲ್ಯಮಾಪನ ವರ್ಷ) | ಯಾವ ವೇದಿಕೆಗಳಲ್ಲಿ ಪ್ರಕರಣ ಬಾಕಿ ಇದೆ |
|---|---|---|---|---|---|
| 1 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 0.18 | 2002–03 | ಮೇಲ್ಮನವಿ ಪ್ರಾಧಿಕಾರ–ಆದಾಯ ತೆರಿಗೆ ಜಿಲ್ಲಾಧಿಕಾರಿ |
| 2 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 1.82 | 2003–04 | ಮೇಲ್ಮನವಿ ಪ್ರಾಧಿಕಾರ–ಆದಾಯ ತೆರಿಗೆ ಆಯುಕ್ತರು |
| 3 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 0.22 | 2008–09 | ಮೇಲ್ಮನವಿ ಪ್ರಾಧಿಕಾರ–ಆದಾಯ ತೆರಿಗೆ ಆಯುಕ್ತರು |
| 4 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 0.31 | 2009–10 | ಮೇಲ್ಮನವಿ ಪ್ರಾಧಿಕಾರ–ಆದಾಯ ತೆರಿಗೆ ಆಯುಕ್ತರು |
| 5 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 0.80 | 2010–11 | ಮೇಲ್ಮನವಿ ಪ್ರಾಧಿಕಾರ–ಆದಾಯ ತೆರಿಗೆ ಆಯುಕ್ತರು |
| 6 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 4.54 | 2013–14 | ಮೇಲ್ಮನವಿ ಪ್ರಾಧಿಕಾರ–ಆದಾಯ ತೆರಿಗೆ ಆಯುಕ್ತರು |
| 7 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 0.42 | 2004–05 | ಮೇಲ್ಮನವಿ ಪ್ರಾಧಿಕಾರ–ಆದಾಯ ತೆರಿಗೆ ಜಿಲ್ಲಾಧಿಕಾರಿ |
| 8 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 2.73 | 2016–17 | ಎಸಿಐಟಿ,ಎಲ್‌ಟಿಯು ವೃತ್ತ (4)(1) |
| 9 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 0.39 | 2017–18 | ಎಸಿಐಟಿ,ಎಲ್‌ಟಿಯು ವೃತ್ತ 1) |
| 10 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 0.05 | 2018–19 | ಡಿಸಿಐಟಿ,ಎಲ್‌ಟಿಯು ವೃತ್ತ (1) |
| 11 | ಆದಾಯ ತೆರಿಗೆ ಅಧಿನಿಯಮ | ಆದಾಯ ತೆರಿಗೆ | 18.58 | 2020–21 | ಮೇಲ್ಮನವಿ ಪ್ರಾಧಿಕಾರ–ಆದಾಯ ತೆರಿಗೆ ಆಯುಕ್ತರು |
| 12 | ಪರೋಕ್ಷ ತೆರಿಗೆ ಮತ್ತು ಸುಂಕಗಳ ಕೇಂದ್ರ ಮಂಡಳಿ | ಸರಕು ಮತ್ತು ಮಾರಾಟ ತೆರಿಗೆ | 9.61 | 2017–18 | ಎಸಿಐಟಿ,(ಲೆಕ್ಕಪರಿಶೋಧಣೆ) –2.6 |

ಪಿ. ಚಂದ್ರಶೇಖರ್ ಎಲ್‌ಎಲ್‌ಪಿ, ಪರವಾಗಿ
ಲೆಕ್ಕಪರಿಶೋಧಕರು
ಸಂಸ್ಥೆ ನೋಂದಣಿ: 000580S/S200066

ಸಹಿ/–
ಸಿಎ ಮಣಿಕುಮಾರ್ ಡಿ.
ಪಾಲುದಾರ ಸದಸ್ಯತ್ವ ಸಂಖ್ಯೆ: 212544
ಯುಡಿಐಎನ್: 23212544BGQHGD8753

ಸ್ಥಳ: ಬೆಂಗಳೂರು
ದಿನಾಂಕ: 16–11–2023

## ಅನುಪಾಲನಾ ಪ್ರಮಾಣ ಪತ್ರ

ನಾವು ದಿನಾಂಕ: 31.03.2023ಕ್ಕೆ ಕೊನೆಗೊಂಡ ವರ್ಷಾಂತ್ಯಕ್ಕೆ ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್‌ನ ಲೆಕ್ಕಪತ್ರದ ಲೆಕ್ಕಪರಿಶೋಧನೆಯನ್ನು 2013ರ ಕಂಪನಿಗಳ ಕಾಯ್ದೆಯ ಕಲಂ 143(5)ರಡಿ ಭಾರತದ ಮಹಾಲೇಖಪಾಲಕರು ಮತ್ತು ಲೆಕ್ಕಪರಿಶೋಧಕರುಗಳಿಂದ ನೀಡಲಾದ ನಿರ್ದೇಶನಗಳು / ಉಪ ನಿರ್ದೇಶನಗಳಿಗೆ ಅನುಗುಣವಾಗಿ ನಡೆಸಿದ್ದೇವೆ ಹಾಗೂ ನಮಗೆ ನೀಡಲಾದ ಎಲ್ಲಾ ನಿರ್ದೇಶನಗಳು / ಉಪ ನಿರ್ದೇಶನಗಳನ್ನು ನಾವು ಅನುಸರಿಸಿದ್ದೇವೆ ಎಂದು ಪ್ರಮಾಣೀಕರಿಸಿದ್ದೇವೆ.

**ಪಿ. ಚಂದ್ರಶೇಖರ್ ಎಲ್‌ಎಲ್‌ಪಿ, ಪರವಾಗಿ**
**ಲೆಕ್ಕಪರಿಶೋಧಕರು**
**ಸಂಸ್ಥೆ ನೋಂದಣಿ: 000580S/S200066**

**ಸಹಿ/–**
**ಸಿಎ ಮಣಿಕುಮಾರ್ ಡಿ.**
**ಪಾಲುದಾರ ಸದಸ್ಯತ್ವ ಸಂಖ್ಯೆ: 212544**
**ಯುಡಿಐಎನ್: 23212544BGQHGD8753**

ಸ್ಥಳ: ಬೆಂಗಳೂರು
ದಿನಾಂಕ: 16–11–2023

## ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್
## ಬೆಂಗಳೂರು - 560 055

# 31.03.2023ಕ್ಕೆ ಕೊನೆಗೊಂಡ ವರ್ಷದ ವಾರ್ಷಿಕ ಲೆಕ್ಕಪತ್ರಗಳು

## ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್

### 31.03.2023ರಂದು ಇದ್ದಂತೆ ಸ್ಥಿತಿ ವಿವರಣಾ ಪಟ್ಟಿ

(ಎಲ್ಲಾ ಮೊತ್ತಗಳು ಭಾರತೀಯ ಕರೆನ್ಸಿ ಕೋಟಿ ರೂಗಳಲ್ಲಿ)

| ಕ್ರ.ಸಂ. | ವಿವರಗಳು | ಟಿಪ್ಪಣಿ | 31.03.2023ರಲ್ಲಿದ್ದಂತೆ | 31.03.2022ರಲ್ಲಿದ್ದಂತೆ |
|---|---|---|---|---|
| I. | **ಆಸ್ತಿಗಳು** | | | |
| 1 | **ಚಾಲ್ತಿಯಲ್ಲಿಲ್ಲದ ಆಸ್ತಿಗಳು** | | | |
| | ಸ್ವತ್ತು, ಸ್ಥಾವರ ಪರಿಕರ | 2A | 1,277.73 | 1,280.44 |
| | ಬಂಡವಾಳ ಕಾಮಗಾರಿ-ಪ್ರಗತಿಯಲ್ಲಿರುವುದು | 2B | 0.27 | - |
| | ಹಣಕಾಸಿನ ಆಸ್ತಿಗಳು | | | |
| | i) ಠೇವಣಿಗಳು | 3 | 0.02 | 0.02 |
| | **ಒಟ್ಟು ಚಾಲ್ತಿಯೇತರ ಆಸ್ತಿಗಳು** | | **1,278.01** | **1,280.45** |
| 2 | **ಚಾಲ್ತಿ ಆಸ್ತಿಗಳು** | | | |
| | ದಾಸ್ತಾನುಗಳು | 4 | 140.71 | 125.72 |
| | ಹಣಕಾಸು ಆಸ್ತಿಗಳು | | | |
| | i) ವ್ಯಾಪಾರ ಸ್ವೀಕೃತಿಗಳು | 5 | 25.95 | 20.15 |
| | ii) ನಗದು ಮತ್ತು ನಗದು ಪರಿಕರಗಳು | 6 | 90.63 | 99.26 |
| | iii) ನಗದು ಹೊರತಾಗಿ ಬ್ಯಾಂಕ್ ಶಿಲ್ಕುಗಳು ಮತ್ತು ನಗದು | 7 | 850.09 | 650.19 |
| | iv) ಇತರ ಹಣಕಾಸು ಆಸ್ತಿಗಳು | 8 | 54.08 | 25.72 |
| | **ಒಟ್ಟು ಚಾಲ್ತಿಯಲ್ಲಿರುವ ಆಸ್ತಿಗಳು** | | **1,161.45** | **921.03** |
| | **ಒಟ್ಟು ಆಸ್ತಿಗಳು** | | **2,439.46** | **2,201.48** |
| II. | **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | |
| A | **ಈಕ್ವಿಟಿ** | | | |
| | ಈಕ್ವಿಟಿ ಷೇರು ಬಂಡವಾಳ | 9 | 31.82 | 31.82 |
| | ಇತರೆ ಈಕ್ವಿಟಿ | 10 | 1,912.54 | 1,771.41 |
| | **ಒಟ್ಟು ಈಕ್ವಿಟಿ** | | **1,944.36** | **1,803.24** |
| B | **ಹೊಣೆಗಾರಿಕೆಗಳು** | | | |
| 1 | **ಚಾಲ್ತಿಯಲ್ಲಿಲ್ಲದ ಹೊಣೆಗಾರಿಕೆ** | | | |
| | ಮುಂದೂಡಲ್ಪಟ್ಟ ತೆರಿಗೆ ಹೊಣೆಗಾರಿಕೆಗಳು | 11 | 129.73 | 158.77 |
| | ಮುನ್ನೇರ್ಪಾಡುಗಳು | 12 | 8.57 | 10.27 |
| | **ಒಟ್ಟು ಚಾಲ್ತಿಯೇತರ ಹೊಣೆಗಳು** | | **138.30** | **169.04** |
| 2 | **ಚಾಲ್ತಿಯಲ್ಲಿರುವ ಹೊಣೆಗಳು** | | | |
| | **ಹಣಕಾಸು ಹೊಣೆಗಳು** | | | |
| | i) ವ್ಯಾಪಾರ ಪಾವತಿಗಳು | 13 | | |
| | ಎ) ಅತಿಸಣ್ಣ ಮತ್ತು ಸಣ್ಣ ಉದ್ದಿಮೆಗಳಿಂದ ಒಟ್ಟು ಬಾಕಿ | | | |
| | ಬಿ) ಅತಿಸಣ್ಣ ಮತ್ತು ಸಣ್ಣ ಉದ್ದಿಮೆದಾರರನ್ನು ಹೊರತಾಗಿ ಸಾಲಗಾರರಿಂದ ಒಟ್ಟು ಬಾಕಿ | | 6.84 | 28.29 |
| | ii) ಇತರೆ ಚಾಲ್ತಿಯಲ್ಲಿರುವ ಆರ್ಥಿಕ ಹೊಣೆಗಳು | 14 | 101.32 | 53.11 |
| | iii) ಇತರೆ ಚಾಲ್ತಿಯಲ್ಲಿರುವ ಹೊಣೆಗಳು | 15 | 131.81 | 96.60 |
| | iv) ಮುನ್ನೇರ್ಪಾಡುಗಳು | 16 | 116.83 | 51.20 |
| | **ಒಟ್ಟು ಚಾಲ್ತಿ ಹೊಣೆಗಳು** | | **356.80** | **229.20** |
| | **ಒಟ್ಟು ಈಕ್ವಿಟಿ ಮತ್ತು ಹೊಣೆಗಳು** | | **2,439.46** | **2,201.48** |
| | **ಜೊತೆಗಿರುವ ನಿರ್ದಿಷ್ಟ ಲೆಕ್ಕಪತ್ರ ನೀತಿಗಳು ಹಣಕಾಸು ವಿವರಣಾ ಪಟ್ಟಿಗಳ ಅವಿಭಾಜ್ಯ ಅಂಗವಾಗಿದೆ.** | | | |
| | **ನಿರ್ದಿಷ್ಟ ಲೆಕ್ಕಪತ್ರ ನೀತಿಗಳು** | 1 | | |
| | **ಹಣಕಾಸು ವಿವರಣಾ ಪಟ್ಟಿ ಮೇಲಿನ ಟಿಪ್ಪಣಿಗಳು** | 2-38 | | |

ಆಡಳಿತ ಮಂಡಳಿ ಪರವಾಗಿ
ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

ಸಮಸಂಖ್ಯೆಯ ದಿನಾಂಕದ ವರದಿ ಪ್ರಕಾರ
ಪಿ. ಚಂದ್ರಶೇಖರ್ ಪರವಾಗಿ ಲೆಕ್ಕಪರಿಶೋಧಕರು
**FRN : 000580S/S200066**

| | | |
|---|---|---|
| ಸಹಿ/- | ಸಹಿ/- | ಸಹಿ/- |
| (ಡಾ. ಪ್ರಶಾಂತ್ ಪಿ.ಕೆ.ಎಂ, ಐಎಫ್ಎಸ್) | (ಎಂ.ಬಿ.ಪಾಟೀಲ) | (ಸಿ.ಎ.ಮಣಿಕುಮಾರ್ ಡಿ.) |
| ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು | ಪಾಲುದಾರರು |
| DIN : 10293189 | DIN : 02558869 | MEMBERSHIP N0 : 212544 |

ಸ್ಥಳ: ಬೆಂಗಳೂರು, ದಿನಾಂಕ: 22.09.2023

## ಮಾರ್ಚ್31 2023ಕ್ಕೆ ಕೊನೆಗೊಂಡ ವರ್ಷಕ್ಕೆ ಲಾಭ ಮತ್ತು ನಷ್ಟ ವಿವರಣ ಪಟ್ಟಿ

(ಎಲ್ಲಾ ಮೊತ್ತಗಳು ಭಾರತೀಯ ಕರೆನ್ಸಿ ಕೋಟಿ ರೂಗಳಲ್ಲಿ)

| ಕ್ರ ಸಂ | ವಿವರಗಳು | ಟಿಪ್ಪಣಿ | 31.03.2023ಕ್ಕೆ ಕೊನೆಗೊಂಡ ವರ್ಷಕ್ಕೆ | 31.03.2022ಕ್ಕೆ ಕೊನೆಗೊಂಡ ವರ್ಷಕ್ಕೆ |
|---|---|---|---|---|
| | **ಆದಾಯ** | | | |
| I. | ಕಾರ್ಯಾಚರಣೆಗಳಿಂದ ಆದಾಯ | 17 | 1,127.19 | 929.62 |
| II. | ಇತರೇ ಆದಾಯ | 18 | 51.45 | 26.83 |
| III. | **ಒಟ್ಟು ಆದಾಯ (I + II)** | | **1,178.64** | **956.45** |
| | **ವೆಚ್ಚಗಳು:** | | | |
| a | ಬಳಕೆ ಮಾಡಿದ ವಸ್ತುಗಳಿಗೆ ತಗಲಿದ ವೆಚ್ಚ | 19 | 642.31 | 516.30 |
| b | ವ್ಯವಹಾರದಲ್ಲಿ ಖರೀದಿಸಿದ ದಾಸ್ತಾನು | 20 | 8.19 | 3.54 |
| c | ಸಿದ್ಧಪಡಿಸಿದ ವಸ್ತುಗಳ ದಾಸ್ತಾನುಗಳಲ್ಲಿ ಬದಲಾವಣೆ, ವ್ಯವಹಾರದಲ್ಲಿ ದಾಸ್ತಾನು ಮತ್ತು ಪ್ರಗತಿಯಲ್ಲಿರುವ ಕಾಮಗಾರಿ | 21 | -6.19 | 15.81 |
| d | ನೌಕರರ ಸೌಲಭ್ಯ ವೆಚ್ಚ | 22 | 71.66 | 68.92 |
| e | ಸವಕಳಿ ಮತ್ತು ಇಳಿನಿಧಿಯ ವೆಚ್ಚ | 2 | 2.74 | 2.49 |
| f | ಇತರೇ ಖರ್ಚುಗಳು | 23 | 180.73 | 107.93 |
| IV | **ಒಟ್ಟು ಖರ್ಚು** | | **899.45** | **715.00** |
| V | **ತೆರಿಗೆಗೂ ಮುನ್ನ ಆದಾಯ** | | **279.19** | **241.45** |
| VI | **ತೆರಿಗೆ ವೆಚ್ಚ:** | | | |
| | (i) ಚಾಲ್ತಿ ತೆರಿಗೆ | | 122.07 | 84.50 |
| | (ii) ಮುಂದೂಡಿದ ತೆರಿಗೆ | | -29.96 | -1.56 |
| | (iii) ಮೊದಲಿನ ವರ್ಷಕ್ಕೆ ತೆರಿಗೆ | | 6.31 | 20.31 |
| | | | **98.42** | **103.25** |
| VII | **ತೆರಿಗೆ ನಂತರ ನಿವ್ವಳ ಲಾಭ (V-VI)** | | **180.77** | **138.20** |
| VIII | **ಇತರ ಸಮಗ್ರ ಆದಾಯ** | | | |
| A. | (i) ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಅಂಶಗಳು | | | |
| | (ii) ಲಾಭ ಅಥವಾ ನಷ್ಟಕ್ಕೆ ಮರುವರ್ಗೀಕರಿಸಲಾಗದ ಸಾಧನಗಳ ಸಂಬಂಧ ಆದಾಯ ತೆರಿಗೆ ನಂತರದ ಅವಧಿಗಳಲ್ಲಿ ಲಾಭ ಅಥವಾ ನಷ್ಟಕ್ಕೆ ಮರುವರ್ಗೀಕರಿಸದ ಐಟಂಗಳು | | | |
| | (iii) ಆಸ್ತಿಗಳ ನ್ಯಾಯೋಚಿತ ಮಾರುಕಟ್ಟೆ ಮೌಲ್ಯಮಾಪನದಲ್ಲಿ ನಿವ್ವಳ (ನಷ್ಟ)/ಲಾಭ | | | |
| | (iv) ವಿವರಿಸಲಾದ ಲಾಭದ ಯೋಜನೆಗಳಲ್ಲಿ ವಾಸ್ತವಿಕ ಲಾಭಗಳು (ನಷ್ಟಗಳು) | | 2.65 | -0.50 |
| | ಕಳೆಯಿರಿ: ಮೇಲ್ಕಂಡವುಗಳಿಗೆ ಆದಾಯ ತೆರಿಗೆ ಪರಿಣಾಮ | | -0.93 | 0.18 |
| VIII | **ಇತರೇ ಸಮಗ್ರ ಆದಾಯ** | | **1.72** | **-0.33** |
| IX | **ಅವಧಿಗೆ ಇತರೇ ಸಮಗ್ರ ಆದಾಯ (VII+VIII)** | | **182.49** | **137.88** |
| | **(ಇತರೇ ಸಮಗ್ರ ಆದಾಯ (ನಷ್ಟ) ಮತ್ತು ಅವಧಿಗೆ ಇತರೇ ಸಮಗ್ರ ಆದಾಯ)** | | | |
| X | **ಈಕ್ವಿಟಿ ಷೇರೊಂದಕ್ಕೆ ಗಳಿಕೆ :** | 24 | | |
| | ಮೂಲ &ವಿಲೀನಗೊಳಿಸಿದ (ರೂಗಳಲ್ಲಿ) | | 5,680.75 | 4,342.90 |
| | ಪ್ರತಿ ಷೇರಿಗೆ ಮುಖಬೆಲೆ (ರೂಗಳಲ್ಲಿ) | | 1,000.00 | 1,000.00 |
| | **ನಿರ್ದಿಷ್ಟ ಲೆಕ್ಕಪತ್ರ ನೀತಿಗಳು** | 1 | | |
| | **ಹಣಕಾಸು ವಿವರಣಾ ಪಟ್ಟಿ ಮೇಲಿನ ಟಿಪ್ಪಣಿಗಳು** | 2-38 | | |

ಆಡಳಿತ ಮಂಡಳಿ ಪರವಾಗಿ
ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

ಸಮಸಂಖ್ಯೆಯ ದಿನಾಂಕದ ವರದಿ ಪ್ರಕಾರ
ಪಿ. ಚಂದ್ರಶೇಖರ್ ಪರವಾಗಿ ಲೆಕ್ಕಪರಿಶೋಧಕರು
**FRN : 000580S/S200066**

ಸಹಿ/–
(ಡಾ. ಪ್ರಶಾಂತ್ ಪಿ.ಕೆ.ಎಂ, ಐಎಫ್ಎಸ್)
ವ್ಯವಸ್ಥಾಪಕ ನಿರ್ದೇಶಕರು
DIN : 10293189

ಸಹಿ/–
(ಎಂ.ಬಿ.ಪಾಟೀಲ)
ಅಧ್ಯಕ್ಷರು
DIN : 02558869

ಸಹಿ/–
(ಸಿ.ಎ.ಮಣಿಕುಮಾರ್ ಡಿ.)
ಪಾಲುದಾರರು
MEMBERSHIP N0 : 212544

ಸ್ಥಳ: ಬೆಂಗಳೂರು, ದಿನಾಂಕ: 22.09.2023

## ಮಾರ್ಚ್ 31 2023ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹರಿವಿನ ವಿವರಣ ಪಟ್ಟಿ

(ಎಲ್ಲಾ ಮೊತ್ತಗಳು ಭಾರತೀಯ ಕರೆನ್ಸಿ ಕೋಟಿ ರೂಗಳಲ್ಲಿ)

| | ವಿವರಗಳು | 31.03.2023ಕ್ಕೆ ಕೊನೆಗೊಂಡ ವರ್ಷಕ್ಕೆ | 31.03.2022ಕ್ಕೆ ಕೊನೆಗೊಂಡ ವರ್ಷಕ್ಕೆ |
|---|---|---|---|
| ಎ. | **ಕಾರ್ಯಾಚರಣೆಗಳಿಂದ ನಗದು ಹರಿವು** | | |
| | **ಲಾಭ ಮತ್ತು ನಷ್ಟದ ವಿವರಣಾ ಪಟ್ಟಿಯಂತೆ ತೆರಿಗೆಗೂ ಮೊದಲಿನ ನಿವ್ವಳ ಲಾಭ ಮತ್ತು ನಷ್ಟ** | 279.19 | 241.45 |
| | ಕೂಡಿರಿ/ಕಳೆಯಿರಿ : | | |
| | ಸವಕಳಿ, ಇಳುನಿಧಿ ಮತ್ತು ಹಾನಿ | 2.74 | 2.49 |
| | ವಿಲೇವಾರಿ/ಹಿಂದಿನ ಮನ್ನಾದ ಮರುಸೇರ್ಪಡೆ (ರಿಟನ್ ಬ್ಯಾಕ್) ಮೇಲೆ ಸವಕಳಿ, ಇಳುನಿಧಿ ಮತ್ತು ಹಾನಿ | -11.48 | -0.93 |
| | ಪಾವತಿಸಿದ ತೆರಿಗೆ | -128.38 | -104.63 |
| | ಬಡ್ಡಿ, ಲಾಭಾಂಶ ಆದಾಯ ಹಾಗೂ ಇತರೇ ಕಾರ್ಯಾಚರಣೆಯೇತರ ಆದಾಯ | -51.45 | -26.83 |
| | ಒಸಿಐ–ವಾಸ್ತವಿಕ ಲಾಭಗಳು | 2.65 | -0.50 |
| | ಪೂರ್ಣಾಂಕಕ್ಕೆ ತಂದಿರುವುದು | - | - |
| | **ದುಡಿಯುವ ಬಂಡವಾಳ ಬದಲಾವಣೆಗಳಿಗೂ ಮುನ್ನ ಕಾರ್ಯಾಚರಣೆ ಲಾಭ** | **93.27** | **111.06** |
| | **ಹಣಕಾಸಿನ ಹರಿವಿನ ಹೊಂದಾಣಿಕೆ:** | | |
| | ಚಾಲ್ತಿಯೇತರ ಠೇವಣಿ | - | -0.02 |
| | ವ್ಯಾಪಾರ ಸ್ವೀಕೃತಿಗಳು | -5.80 | -1.22 |
| | ದಾಸ್ತಾನುಗಳು | -14.99 | 32.66 |
| | ಇತರ ಹಣಕಾಸಿನ ಸ್ವತ್ತುಗಳು | -28.36 | 19.39 |
| | ವ್ಯಾಪಾರ ಸಂದಾಯಗಳು | -21.44 | 5.36 |
| | ಇತರೆ ಹಣಕಾಸಿನ ಹೊಣೆಗಾರಿಕೆಗಳು | 48.21 | 14.82 |
| | ಇತರೆ ಚಾಲ್ತಿ ಹೊಣೆಗಾರಿಕೆ | 35.21 | -11.98 |
| | ಚಾಲ್ತಿ ಅವಕಾಶಗಳು | 65.62 | 48.48 |
| | **ಕಾರ್ಯಾಚರಣೆಗಳಿಂದ ನಿವ್ವಳ ನಗದು ಹರಿವು** | **171.71** | **218.56** |
| ಬಿ. | **ಹೂಡಿಕೆ ಚಟುವಟಿಕೆಗಳಲ್ಲಿನ ನಿವ್ವಳ ನಗದು ಹರಿವು** | | |
| | ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಖರೀದಿ | -0.91 | -4.62 |
| | ಸ್ವತ್ತುಗಳು, ಸ್ಥಾವರ ಮತ್ತು ಉಪಕರಣಗಳ ಮಾರಾಟ | 12.10 | 1.02 |
| | ಬಡ್ಡಿ, ಲಾಭಾಂಶ ಆದಾಯ ಹಾಗೂ ಇತರೇ ಕಾರ್ಯಾಚರಣೆಯೇತರ ಆದಾಯ | 51.45 | 26.83 |
| | **ಹೂಡಿಕೆ ಚಟುವಟಿಕೆಗಳಲ್ಲಿನ ನಿವ್ವಳ ನಗದು** | **62.64** | **23.23** |
| ಅ. | **ಹಣಕಾಸು ಚಟುವಟಿಕೆಗಳಿಂದ ನಗದು ಹರಿವು** | | |
| | ದೀರ್ಘಾವಧಿ ಹೊಣೆಗಾರಿಕೆಗಳಲ್ಲಿ ಏರಿಕೆ (ಇಳಿಕೆ) | -1.71 | 1.67 |
| | ಲಾಭಾಂಶ & ಲಾಭಾಂಶದ ತೆರಿಗೆ ಪಾವತಿ | -41.36 | -22.80 |
| | **ಹಣಕಾಸು ಚಟುವಟಿಕೆಗಳಿಂದ ನಿವ್ವಳ ನಗದು** | **-43.07** | **-21.13** |
| | **ನಗದು ಮತ್ತು ನಗದು ಸಮಾನಗಳಲ್ಲಿ ನಿವ್ವಳ (ಇಳಿಕೆ).(ಎ+ಬಿ+ಸಿ)** | **191.28** | **220.66** |
| | ನಗದು ಮತ್ತು ನಗದು ಸಮಾನಗಳ ಆರಂಭಿಕ ಶಿಲ್ಕು | 749.45 | 528.79 |
| | **ನಗದು ಮತ್ತು ನಗದು ಸಮಾನಗಳ ಮುಕ್ತಾಯ ಶಿಲ್ಕು** | **940.71** | **749.45** |
| | **ನಗದು ಮತ್ತು ನಗದು ಸಮಾನಗಳ ಘಟಕಗಳು :** | | |
| | ಬಡ್ಡಿ ಹೊಂದಿರದ ಬ್ಯಾಂಕ್ ಶಿಲ್ಕು – ನಗದು ಮತ್ತು ನಗದು ಸಮಾನವಾದ ಬ್ಯಾಂಕ್ ಶಿಲ್ಕುಗಳು | 90.62 | 99.25 |
| | ಬಡ್ಡಿ ಹೊಂದಿರುವ ಬ್ಯಾಂಕ್ ಶಿಲ್ಕು – ಇತರೇ ಬ್ಯಾಂಕ್ ಶಿಲ್ಕುಗಳು | 850.09 | 650.19 |
| | ಕೈಯ್ಯಲ್ಲಿರುವ ನಗದು –ನಗದು ಶಿಲ್ಕುಗಳಲ್ಲಿ ನಗದು, ಮತ್ತು ನಗದು ಸಮಾನಗಳು | 0.01 | 0.01 |
| | **ಒಟ್ಟು ನಗದು, ನಗದು ಸಮಾನಗಳು ಹಾಗೂ ಇತರೇ ಬ್ಯಾಂಕ್ ಶಿಲ್ಕು** | **940.71** | **749.45** |

ಟಿಪ್ಪಣಿಗಳು: (i) ಕಂಪನಿ ಅಧಿನಿಯಮ 2013ರ ಸೆಕ್ಷನ್ 133ರ ಅಡಿಯಲ್ಲಿ ಸೂಚಿಸಲಾದ ಇಂಡ್ ಎಎಸ್–7ರ ನಗದು ಹರಿವಿನ ವಿವರಣೆಯಲ್ಲಿ ನಿಗದಿಪಡಿಸಿದಂತೆ ಮೇಲಿನ ಸ್ವತಂತ್ರ ನಗದು ಹರಿವಿನ ವಿವರಣೆಯನ್ನು ಪರೋಕ್ಷ ವಿಧಾನದಲ್ಲಿ ಸಿದ್ಧಪಡಿಸಲಾಗಿದೆ. (ii) ಇತರೇ ಬ್ಯಾಂಕ್ ಶಿಲ್ಕುಗಳನ್ನು ನಗದು ಮತ್ತು ಹಣದ ಹರಿವಿನ ಸಿದ್ಧತೆಯ ಉದ್ದೇಶಕ್ಕಾಗಿ ನಗದು ಮತ್ತು ಬ್ಯಾಂಕ್ ಶಿಲ್ಕು ಎಂದು ಪರಿಗಣಿಸಲಾಗಿದೆ. (iii) ಇತರೇ ಬ್ಯಾಂಕ್ ಶಿಲ್ಕುಗಳು ನಿರಖು ಠೇವಣಿ, ಲಾಭಾಂಶದ ಹಣ ಹಾಗೂ ತನ್ನ ಕಾರ್ಯಾಚರಣೆಗಳಿಗಾಗಿ ಕಂಪನಿಯು ಮುಕ್ತವಾಗಿ ಬಳಸದ ಯಾವುದೇ ಇತರ ಬ್ಯಾಂಕ್ ಶಿಲ್ಕು.

ಆಡಳಿತ ಮಂಡಳಿ ಪರವಾಗಿ
ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

**ಸಮಸಂಖ್ಯೆಯ ದಿನಾಂಕದ ವರದಿ ಪ್ರಕಾರ**
**ಪಿ. ಚಂದ್ರಶೇಖರ್ ಪರವಾಗಿ ಲೆಕ್ಕಪರಿಶೋಧಕರು**
**FRN : 000580S/S200066**

| | | |
|---|---|---|
| ಸಹಿ/– | ಸಹಿ/– | ಸಹಿ/– |
| (ಡಾ. ಪ್ರಶಾಂತ್ ಪಿ.ಕೆ.ಎಂ, ಐಎಫ್ಎಸ್) | (ಎಂ.ಬಿ.ಪಾಟೀಲ) | (ಸಿ.ಎ.ಮಣಿಕುಮಾರ್ ಡಿ.) |
| ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು | ಪಾಲುದಾರರು |
| DIN : 10293189 | DIN : 02558869 | MEMBERSHIP N0 : 212544 |

ಸ್ಥಳ: ಬೆಂಗಳೂರು, ದಿನಾಂಕ: 22.09.2023

## ಮಾರ್ಚ್ 31 2023ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಹಣಕಾಸು ವಿವರಣಾ ಪಟ್ಟಿಗೆ ಟಿಪ್ಪಣಿ

| ಎ. ಈಕ್ವಿಟಿ ಷೇರು ಬಂಡವಾಳ | |
|---|---|
| ವಿವರ | ಮೊತ್ತ |
| 01.04.2022ರಂತೆ ಶಿಲ್ಕು | 31.82 |
| ಈಕ್ವಿಟಿ ಷೇರು ಬಂಡವಾಳದಲ್ಲಿ ಬದಲಾವಣೆಗಳು (2022–23) | – |
| 31.03.2023ರಂತೆ ಶಿಲ್ಕು | 31.82 |

**(1) ಚಾಲ್ತಿ ವರದಿಗಾರಿಕೆ ಅವಧಿ**

| ಚಾಲ್ತಿ ವರದಿಗಾರಿಕೆ ಅವಧಿಯ ಆರಂಭದಲ್ಲಿ ಶಿಲ್ಕು | ಹಿಂದಿನ ಅವಧಿಯ ತಪ್ಪುಗಳಿಂದಾಗಿ ಈಕ್ವಿಟಿ ಷೇರು ಬಂಡವಾಳದಲ್ಲಿ ಬದಲಾವಣೆಗಳು | ಚಾಲ್ತಿ ವರದಿಗಾರಿಕೆ ಅವಧಿ ಆರಂಭದಲ್ಲಿ ಪುನರಾವರ್ತಿತ ಶಿಲ್ಕು | ಚಾಲ್ತಿ ವರ್ಷದಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿ ಬದಲಾವಣೆಗಳು | ಚಾಲ್ತಿ ವರದಿಗಾರಿಕೆ ಅವಧಿಯ ಕೊನೆಯಲ್ಲಿ ಶಿಲ್ಕು |
|---|---|---|---|---|
| 31.82 | – | 31.82 | – | 31.82 |

**(2) ಹಿಂದಿನ ವರದಿಗಾರಿಕೆ ಅವಧಿ**

| ಚಾಲ್ತಿ ವರದಿಗಾರಿಕೆ ಅವಧಿಯ ಆರಂಭದಲ್ಲಿ ಶಿಲ್ಕು | ಹಿಂದಿನ ಅವಧಿಯ ತಪ್ಪುಗಳಿಂದಾಗಿ ಈಕ್ವಿಟಿ ಷೇರು ಬಂಡವಾಳದಲ್ಲಿ ಬದಲಾವಣೆಗಳು | ಚಾಲ್ತಿ ವರದಿಗಾರಿಕೆ ಅವಧಿ ಆರಂಭದಲ್ಲಿ ಪುನರಾವರ್ತಿತ ಶಿಲ್ಕು | ಚಾಲ್ತಿ ವರ್ಷದಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿ ಬದಲಾವಣೆಗಳು | ಚಾಲ್ತಿ ವರದಿಗಾರಿಕೆ ಅವಧಿಯ ಕೊನೆಯಲ್ಲಿ ಶಿಲ್ಕು |
|---|---|---|---|---|
| 31.82 | – | 31.82 | – | 31.82 |

**ಬಿ.ಇತರೇ ಈಕ್ವಿಟಿ**
**(1) ಚಾಲ್ತಿ ವರದಿಗಾರಿಕೆ ಅವದಿ**

| | ಹಂಚಿಕೆಗೆ ಬಾಕಿ ಇರುವ ಷೇರು ಅರ್ಜಿ ಹಣ | ಸಂಯುಕ್ತ ಹಣಕಾಸು ಸಾಧನನದ ಈಕ್ವಿಟಿ ಭಾಗ | ಮೀಸಲು ಮತ್ತು ಹೆಚ್ಚುವರಿ | | | | ಇತರೇ ಸಮಗ್ರ ಆದಾಯ–ದಿಂದ ಸಾಲ ಸಾಧನಗಳು | ಇತರೇ ಸಮಗ್ರ ಆದಾಯ–ದಿಂದ ಈಕ್ವಿಟಿ ಸಾಧನಗಳು | ಹಣಕಾಸಿನ ಹರಿವಿನ ನಷ್ಟಗಳ ಪರಿಣಾ–ಮಕಾರಿ ಭಾಗ | ಮರು ಮೌಲ್ಯ ಮಾಪನ ಹೆಚ್ಚುವರಿ | ವಿದೇಶಿ ವ್ಯವಹಾರದ ಹಣಕಾಸಿನ ವಿವರಣಾ ಪಟ್ಟಿಯನ್ನು ಪರಿವರ್ತಿಸಿದಾಗ ವಿನಿಮಯ ವ್ಯತ್ಯಾಸಗಳು | ಇತರೇ ಸಮಗ್ರ ಆದಾಯದ ಇತರೇ ಅಂಶಗಳು (ಸ್ವಭಾವವನ್ನು ಹೆಸರಿಸಿ) | ಷೇರು ವಾರಂಟುಗಳಿಗೆ ಪ್ರತಿಯಾಗಿ ಸ್ವೀಕೃತಿಯಾದ ಹಣ | ಒಟ್ಟು |
|---|---|---|---|---|---|---|---|---|---|---|---|---|---|---|
| | | | ಬಂಡವಾಳ ಮೀಸಲು | ಸೆಕ್ಯುರಿಟೀಸ್‌ಗಳ ಪ್ರೀಮಿಯಂ ಮೀಸಲು | ಇತರೇ ಮೀಸಲು (ಪುನರ್ ಮೌಲ್ಯ–ಮಾಪನ ಮೀಸಲು) | ಉಳಿಕೆ–ಯಾದ ಗಳಿಕೆ | | | | | | | | |
| 31.03.2022ರಂತೆ ಶಿಲ್ಕು | – | – | – | – | 775.86 | 995.55 | – | – | – | – | – | – | – | 1,771.41 |
| ಹಣಕಾಸು ನೀತಿಯಲ್ಲಿ ಬದಲಾವಣೆಗಳು ಅಥವಾ ಹಿಂದಿನ ಅವಧಿಯ ತಪ್ಪುಗಳು | – | – | – | – | – | – | – | – | – | – | – | – | – | – |
| ವರದಿಗಾರಿಕೆ ಅವಧಿಯ ಆರಂಭದಲ್ಲಿ ಪುನರಾವರ್ತಿತ ಶಿಲ್ಕು | – | – | – | – | – | – | – | – | – | – | – | – | – | – |
| ಇತರೆ ಸಮಗ್ರ ಆದಾಯ | – | – | – | – | – | – | – | – | – | – | – | 1.72 | – | 1.72 |
| ಲಾಭಾಂಶಗಳು | – | – | – | – | – | 41.36 | – | – | – | – | – | – | – | 41.36 |
| ವರ್ಷಕ್ಕೆ ಲಾಭ/(ನಷ್ಟ) | – | – | – | – | – | 180.78 | – | – | – | – | – | – | – | 180.78 |
| ಬೇರೆ ಯಾವುದೇ ಬದಲಾವಣೆ (ಹೆಸರಿಸಿ) | – | – | – | – | – | | – | – | – | – | – | – | – | – |
| ಎಂಎಟಿ ಕ್ರೆಡಿಟ್ನ ರದ್ಧತಿ | | | | | | | | | | | | | | – |
| ಮುಂದೂಡಿದ ತೆರಿಗೆಯ ರದ್ಧತಿ | | | | | | | | | | | | | | – |
| 31.03.2023 ರಲ್ಲಿ ಶಿಲ್ಕು | – | – | – | – | 775.86 | 1,134.96 | – | – | – | – | – | 2 | – | 1,912.54 |

**ಬಿ.ಇತರ ಈಕ್ವಿಟಿ**
**(2) ಹಿಂದಿನ ವರದಿಗಾರಿಕೆ ಅವಧಿ**

| | ಹಂಚಿಕೆಗೆ ಬಾಕಿ ಇರುವ ಷೇರು ಅರ್ಜಿ ಹಣ | ಸಂಯುಕ್ತ ಹಣಕಾಸು ಸಾಧನನದ ಈಕ್ವಿಟಿ ಭಾಗ | ಮೀಸಲು ಮತ್ತು ಹೆಚ್ಚುವರಿ | | | | ಇತರೇ ಸಮಗ್ರ ಆದಾಯ-ದಿಂದ ಸಾಲ ಸಾಧನಗಳು | ಇತರೇ ಸಮಗ್ರ ಆದಾಯ-ದಿಂದ ಈಕ್ವಿಟಿ ಸಾಧನಗಳು | ಹಣಕಾಸಿನ ಹರಿವಿನ ನಷ್ಟಗಳ ಪರಿಣಾ-ಮಕಾರಿ ಭಾಗ | ಮರು ಮೌಲ್ಯ ಮಾಪನ ಹೆಚ್ಚುವರಿ | ವಿದೇಶಿ ವ್ಯವಹಾರದ ಹಣಕಾಸಿನ ವಿವರಣಾ ಪಟ್ಟಿಯನ್ನು ಪರಿವರ್ತಿಸಿದಾಗ ವಿನಿಮಯ ವ್ಯತ್ಯಾಸಗಳು | ಇತರೇ ಸಮಗ್ರ ಆದಾಯದ ಇತರೇ ಅಂಶಗಳು (ಸ್ವಭಾವವನ್ನು ಹೆಸರಿಸಿ) | ಷೇರು ವಾರಂಟುಗಳಿಗೆ ಪ್ರತಿಯಾಗಿ ಸ್ವೀಕೃತಿಯಾದ ಹಣ | ಒಟ್ಟು |
|---|---|---|---|---|---|---|---|---|---|---|---|---|---|---|
| | | | ಬಂಡವಾಳ ಮೀಸಲು | ಸೆಕ್ಯುರಿಟೀಸ್‌ಗಳ ಪ್ರೀಮಿಯಂ ಮೀಸಲು | ಇತರೇ ಮೀಸಲು (ಪುನರ್ ಮೌಲ್ಯ-ಮಾಪನ ಮೀಸಲು) | ಉಳಿಕೆ-ಯಾದ ಗಳಿಕೆ | | | | | | | | |
| 31.03.2021ರಂತೆ ಶಿಲ್ಕು | - | - | - | - | 775.86 | 880.47 | - | - | - | - | - | - | - | 1,656.33 |
| ಹಣಕಾಸು ನೀತಿಯಲ್ಲಿ ಬದಲಾವಣೆಗಳು ಅಥವಾ ಹಿಂದಿನ ಅವಧಿಯ ತಪ್ಪುಗಳು | - | - | - | - | - | - | - | - | - | - | - | - | - | - |
| ವರದಿಗಾರಿಕೆ ಅವಧಿಯ ಆರಂಭದಲ್ಲಿ ಪುನರಾವರ್ತಿತ ಶಿಲ್ಕು | - | - | - | - | - | - | - | - | - | - | - | - | - | - |
| ಇತರೆ ಸಮಗ್ರ ಆದಾಯ | - | - | - | - | - | -0.33 | - | - | - | - | - | - | - | -0.33 |
| ಲಾಭಾಂಶಗಳು | - | - | - | - | - | 22.80 | - | - | - | - | - | - | - | 22.80 |
| ವರ್ಷಕ್ಕೆ ಲಾಭ/ (ನಷ್ಟ) | - | - | - | - | - | 138.20 | - | - | - | - | - | - | - | 138.20 |
| ಬೇರೆ ಯಾವುದೇ ಬದಲಾವಣೆ (ಹೆಸರಿಸಿ) | - | - | - | - | - | - | - | - | - | - | - | - | - | - |
| ಎಂಎಟಿ ಕ್ರೆಡಿಟ್ನ ರದ್ಧತಿ | | | | | | | | | | | | | | - |
| ಮುಂದೂಡಿದ ತೆರಿಗೆಯ ರದ್ಧತಿ | | | | | | | | | | | | | | - |
| 31.03.2022 ರಲ್ಲಿ ಶಿಲ್ಕು | - | - | - | - | 775.86 | 995.55 | - | - | - | - | - | - | - | 1,771.41 |

## ಟಿಪ್ಪಣಿ 1 : ಮಹತ್ವವಾದ ಲೆಕ್ಕನಿರ್ವಹಣೆ ನೀತಿಗಳು

### 1.1 ಕಾರ್ಪೊರೇಟ್ ಮಾಹಿತಿ

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್‌ನ 09ನೇ ಜುಲೈ, 1980 ರಲ್ಲಿ ಸ್ಥಾಪನೆಯಾದ ಒಂದು ಸಾರ್ವಜನಿಕ ನಿಯಮಿತ ಕಂಪನಿಯಾಗಿದೆ. ಇದನ್ನು ರಾಜ್ಯ ಸರ್ಕಾರಿ ಕಂಪನಿಯೆಂದು ವರ್ಗೀಕರಿಸಲಾಗಿದ್ದು, ರಿಜಿಸ್ಟ್ರಾರ್ ಆಫ್ ಕಂಪನಿ, ಬೆಂಗಳೂರು ಇಲ್ಲಿ ನೋಂದಾಯಿತವಾಗಿದೆ. ಕಂಪನಿಯ ಅಧಿಕೃತ ಷೇರು ಬಂಡವಾಳವು ರೂ.350,000,000 ಆಗಿದ್ದು, ಇದರ ಪಾವತಿಸಿದ ಬಂಡವಾಳವು ರೂ.318,221,000 ಆಗಿದೆ. ಕಂಪನಿಯು ಮಾನವ ಆರೋಗ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್‌ನ ಕಾರ್ಪೊರೇಟ್ ಗುರುತಿನ ಸಂಖ್ಯೆ (ಸಿಐಎನ್) U85110KA1980SGC003871 ಮತ್ತು ಇದರ ನೋಂದಣಿ ಸಂಖ್ಯೆ 3871. ಮತ್ತು ಇದರ ನೊಂದಾಯಿತ ವಿಳಾಸ: ಪಿ.ಬಿ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560055, ಭಾರತ.

### 1.2 ಬ್ರಾಂಡ್ ಮಾಹಿತಿ

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ (ಕೆಎಸ್‌ಡಿಎಲ್)ನಲ್ಲಿ ತಯಾರಿಸಿದ ಸಾಬೂನಿನ ಬ್ರಾಂಡೆಡ್ ಹೆಸರು ಮೈಸೂರು ಸ್ಯಾಂಡಲ್ ಸೋಪ್.ಈ ಸಾಬೂನನ್ನು ಕ್ರಿ.ಶ. 1916ರಿಂದ ಅಂದರೆ, ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್, ಅವರು ಬೆಂಗಳೂರಿನಲ್ಲಿ ಸರ್ಕಾರಿ ಸಾಬೂನು ಕಾರ್ಖಾನೆಯನ್ನು ಸ್ಥಾಪಿಸಿದಾಗಿನಿಂದಲೂ ತಯಾರಿಸಲಾಗುತ್ತಿದೆ. ಮೈಸೂರು ಸಾಮ್ರಾಜ್ಯದಲ್ಲೇ ಯಥೇಚ್ಛವಾಗಿ ಲಭ್ಯವಿದ್ದ ಶ್ರೀಗಂಧವನ್ನು ಮೊದಲ ವಿಶ್ವ ಯುದ್ಧದ ಕಾರಣದಿಂದಾಗಿ ಯೂರೋಪಿಗೆ ಶ್ರೀಗಂಧದ ಮರಗಳನ್ನು ರಫ್ತು ಮಾಡಲಾಗದೆ ಇದ್ದುದು ಕಾರ್ಖಾನೆಯನ್ನು ಸ್ಥಾಪಿಸಲು ಮುಖ್ಯ ಪ್ರೇರಣೆಯಾಗಿತ್ತು. 1980ರಲ್ಲಿ ಸರ್ಕಾರಿ ಸಾಬೂನು ಕಾರ್ಖಾನೆಯನ್ನು ಶಿವಮೊಗ್ಗ ಮತ್ತು ಮೈಸೂರಿನಲ್ಲಿರುವ ಶ್ರೀಗಂಧದ ಎಣ್ಣೆ ಕಾರ್ಖಾನೆಗಳೊಂದಿಗೆ ವಿಲೀನಗೊಳಿಸಿ ಕೆಎಸ್‌ಡಿಎಲ್ ಕಂಪನಿಯಾಗಿ ಸ್ಥಾಪಿಸಲಾಯಿತು. ಮೈಸೂರು ಸ್ಯಾಂಡಲ್ ಸಾಬೂನು 100% ಶುದ್ಧ ಶ್ರೀಗಂಧದ ಎಣ್ಣೆಯಿಂದ ತಯಾರಿಸಿದ ವಿಶ್ವದ ಏಕೈಕ ಸಾಬೂನಾಗಿದೆ. ಕೆ.ಎಸ್.ಡಿ.ಎಲ್. ಮೈಸೂರು ಸ್ಯಾಂಡಲ್ ಸಾಬೂನಿನ ಭೌಗೋಳಿಕ ಗುರುತಿನ ಚಿಹ್ನೆ (ಜಿಯೋಗ್ರಾಫಿಕಲ್ ಇಂಡಿಕೇಷನ್ ಟ್ಯಾಗ್) (ಜಿ.ಐ.)ಯನ್ನು ಹೊಂದಿದೆ. ಈ ಚಿಹ್ನೆಯು ಬ್ರಾಂಡ್ ಹೆಸರನ್ನು ಬಳಸಲು ಬೌದ್ಧಿಕ ಆಸ್ತಿ ಹಕ್ಕನ್ನು ಒದಗಿಸುತ್ತದೆ, ಗುಣಮಟ್ಟವನ್ನು ಖಚಿತಪಡಿಸುವಲ್ಲಿ ಮತ್ತು ಇತರೇ ಉತ್ಪಾದಕರಿಂದ ಅನಧಿಕೃತವಾಗಿ ಉತ್ಪಾದನೆಯನ್ನು ತಡೆಯಲು ಸಹಕಾರಿಯಾಗಿದೆ.

### 1.3 ತಯಾರಿಗೆ ಮೂಲ ಆಧಾರ

ಕಂಪನಿಯ (ಭಾರತೀಯ ಲೆಕ್ಕನಿರ್ವಹಣೆ ಮಾನದಂಡ) ನಿಯಮಗಳು, 2015ರ ಅಡಿಯಲ್ಲಿ ಅಧಿಸೂಚಿತವಾದ ಅನ್ವಯ ಮಾರ್ಚ್ 2018ರಿಂದ ಭಾರತೀಯ ಲೆಕ್ಕನಿರ್ವಹಣೆ ಮಾನದಂಡಗಳಿಗೆ (Ind AS) ಅನುಗುಣವಾಗಿ ಕಂಪನಿಯ ಹಣಕಾಸಿನ ವಿವರಣಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ನ್ಯಾಯೋಚಿತ ಮೌಲ್ಯದಲ್ಲಿ ಅಥವಾ ಪುನರ್ಮೌಲ್ಯ ಮಾಡಿದ ಮೊತ್ತದಲ್ಲಿ ಅಳೆಯಲ್ಪಟ್ಟ ಕೆಳಗಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಹೊರತುಪಡಿಸಿ, ಹಣಕಾಸು ಹೇಳಿಕೆಗಳನ್ನು ಐತಿಹಾಸಿಕ ವೆಚ್ಚದ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ:

i) ಭೂಮಿ

ii) ಲಭ್ಯವಿರುವ ಹಣಕಾಸಿನ ಸಾಧನಗಳು

iii) ನ್ಯಾಯೋಚಿತ ಮಾರುಕಟ್ಟೆ ಮೌಲ್ಯದಲ್ಲಿ ವರದಿ ಮಾಡಬೇಕಾದ ಕೆಲವು ಹಣಕಾಸಿನ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳು

iv) ನೌಕರರ ಅನುಕೂಲತೆಗಳಿಗೆ ಸಂಬಂಧಿಸಿದಂತೆ ಸೌಲಭ್ಯಗಳಾದ ಗ್ರಾಚ್ಯುಟಿ (ಉಪಧನ) ಮತ್ತು ರಜಾ ವೇತನಕ್ಕೆ ಸಂಬಂಧಿಸಿದ ಹೊಣೆಗಾರಿಕೆಗಳು.

ಜೊತೆಗೆ, ಗುರುತಿಸಲಾದ ಸ್ವತ್ತುಗಳ ಸವಕಳಿಯನ್ನು ಕಳೆದ ಮೂಲ ಮೊತ್ತಗಳು ಮತ್ತು ಹೊಣೆಗಾರಿಕೆಗಳನ್ನು ಸ್ವತ್ತು, ಹೊಣೆಗಾರಿಕೆ, ಬದ್ಧತೆ, ಅತೀ ಹೆಚ್ಚು ಸಾಧ್ಯತೆ ಇರುವ ವಹಿವಾಟು ಎಂದು ನ್ಯಾಯೋಚಿತ ಮೌಲ್ಯಗಳ ಮೇಲೆ ಪರಿಣಾಮ ಬೀರಬಹುದಾದ ವಿಧಾನದಲ್ಲಿ ಸೂಚಿಸಲಾಗಿದೆ ಇಲ್ಲದೇ ಹೋದರೆ ಸಂಕೀರ್ಣ ವೆಚ್ಚದಲ್ಲಿ ತೆಗೆದುಕೊಳ್ಳಬೇಕಿದ್ದು ಪರಿಣಾಮಕಾರಿ ನ್ಯಾಯೋಚಿತ ಮೌಲ್ಯದಲ್ಲಿ ವ್ಯತ್ಯಯವಾಗುವ ಅಪಾಯವಿದ್ದು ದಾಖಲೆಗಳ ಬದಲಾವಣೆಗೆ ಹೊಂದಾಣಿಕೆ ಮಾಡಲಾಗಿದೆ.

ಕಂಪನಿಯು ಕೇವಲ ಒಂದೇ ವ್ಯಾಪಾರ ವಿಭಾಗವನ್ನು ಹೊಂದಿದೆ ಮತ್ತು ಅದು ಭಾರತದಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಕಂಪನಿಯು ಭಾರತೀಯ ಲೆಕ್ಕನಿರ್ವಹಣೆ ಮಾನದಂಡ 108ರಲ್ಲಿ ತಿಳಿಸಿರುವಂತೆ ವಿಭಾಗ ಫಲಿತಾಂಶವನ್ನು ತೋರಿಸುವ ಅಗತ್ಯವಿಲ್ಲ (ವರದಿ ಮಾಡಬಹುದಾದ ವಿಭಾಗವನ್ನು ಗುರುತಿಸಲು ಸದರಿ ಮಾನದಂಡದ ಕಂಡಿಕೆ 12 ನೋಡಿ).

### ಚಾಲ್ತಿ ಮತ್ತು ಚಾಲ್ತಿಯೇತರ ವರ್ಗೀಕರಣ

ಕಾರ್ಪೊರೇಷನ್‌ನ ಸಾಮಾನ್ಯ ಕಾರ್ಯಾಚರಣೆ ಅವಧಿಯ ಪ್ರಕಾರ ಸ್ವತ್ತು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರವೆಂದು ವರ್ಗೀಕರಿಸಲಾಗಿದೆ ಮತ್ತು ಇತರೇ ಮಾನದಂಡಗಳನ್ನು ಕಂಪನಿ ಅಧಿನಿಯಮ 2013ರ ಪರಿಷ್ಕೃತ ಷೆಡ್ಯೂಲ್ III ರಲ್ಲಿ ನೀಡಲಾಗಿದೆ.

### ಕಾರ್ಯಾಚರಣೆಯಲ್ಲಿರುವ ಮತ್ತು ಪ್ರಸ್ತುತಪಡಿಸುವ ಕರೆನ್ಸಿ

ಹಣಕಾಸಿನ ವಿವರಣಾ ಪಟ್ಟಿಗಳನ್ನು ಭಾರತೀಯ ರೂಪಾಯಿಗಳಲ್ಲಿ ನೀಡಲಾಗಿದೆ, ಇದು ಕಾರ್ಪೊರೇಷನ್ ಕಾರ್ಯಾಚರಿಸುವ ಕರೆನ್ಸಿ ಆಗಿದೆ ಮತ್ತು ಕಾರ್ಪೊರೇಷನ್ ವ್ಯವಹರಿಸುವ ಪ್ರಾಥಮಿಕ ಆರ್ಥಿಕ ವಾತಾವರಣದ ಕರೆನ್ಸಿಯಾಗಿದೆ. ಸೂಚಿತವಾದುದನ್ನು ಹೊರತುಪಡಿಸಿ ಎಲ್ಲ ಮೌಲ್ಯಗಳನ್ನು ಎರಡು ದಶಮಾಂಶಗಳವರೆಗೆ ಹತ್ತಿರದ ಕೋಟಿ ರೂಗಳಿಗೆ ಪೂರ್ಣಾಂಕಗೊಳಿಸಲಾಗಿದೆ.

**1.4 ನಿರ್ದಿಷ್ಟವಾದ ಲೆಕ್ಕನಿರ್ವಹಣೆ ನೀತಿಗಳ ಸಾರಾಂಶ**

**ಎ) ಆದಾಯ ಗುರುತಿಸುವಿಕೆ :**

ಎ) ಸ್ಥಳೀಯ ಮಾರಾಟಗಳಲ್ಲಿ ಗ್ರಾಹಕರಿಗೆ ಸಿದ್ಧ ವಸ್ತುಗಳನ್ನು ರವಾನಿಸಲು ನಿಗದಿಪಡಿಸಿದ ಸ್ಥಳದಿಂದಲೇ ಮಾರಾಟವೆಂದು ಗಣನೆ ಮಾಡಲಾಗಿದೆ ಮತ್ತು ರಫ್ತು ಮಾರಾಟವನ್ನು ಸರಕು ತುಂಬಿದ ದಿನಾಂಕದಂದು ಲೆಕ್ಕಹಾಕಲಾಗಿದೆ.

ಬಿ) ಮಾರಾಟವು ತೆರಿಗೆಗಳು ಮತ್ತು ವಾಪಸಾತಿಯ ನಿವ್ವಳವಾಗಿದೆ.

**ಬಿ) ಗ್ರಾಚ್ಯುಟಿ ಮತ್ತು ರಜೆ ನಗದೀಕರಣ:**

ಗ್ರಾಚ್ಯುಟಿ ಮತ್ತು ರಜೆ ನಗದೀಕರಣವನ್ನು ವಿಮಾಗಣ ಮೌಲ್ಯಮಾಪನದ ಆಧಾರದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಪ್ರತ್ಯೇಕ ಗ್ರಾಚ್ಯುಟಿ ಫಂಡ್ ಸೃಜಿಸಲಾಗಿದೆ.

ಸೃಜಿಸಬೇಕಾದ ಬೇಡಿಕೆಯನ್ನು ನಿರ್ಧರಿಸಲು ಕಂಪನಿಯು ವಿಮಾಗಣನ ಮೌಲ್ಯಮಾಪಕರೊಬ್ಬರನ್ನು ತೊಡಗಿಸಿಕೊಳ್ಳುವುದು ಮತ್ತು ಅದರಿಂದ ಸ್ಥಾಪಿತವಾದ ಗ್ರಾಚ್ಯುಟಿ ಟ್ರಸ್ಟ್‌ಗೆ ಮುಂದಿನ ಸಾಲಿನ ಬೇಡಿಕೆಯನ್ನು ಪಾವತಿಸುವುದು.

**ಸಿ) ಜಾಹೀರಾತು, ಪ್ರಚಾರ ಮತ್ತು ಮಾರಾಟ ಪ್ರವರ್ಧನೆ ಖರ್ಚುಗಳು:**

ಕಂಪನಿಯ ಹಾಲಿ ಇರುವ ಉತ್ಪನ್ನಗಳ ಮೇಲೆ ವೆಚ್ಚವಾದ ಜಾಹೀರಾತು ಹಾಗೂ ಪ್ರಚಾರ ಮತ್ತು ಮಾರಾಟ ಪ್ರವರ್ಧನೆ ಹಾಗೂ ವಿತರಣಾ ಖರ್ಚುಗಳನ್ನು ಕಾರ್ಯಚಟುವಟಿಕೆಗೆ ಸಂಬಂಧಿಸಿದ ವರ್ಷದ ಲಾಭಕ್ಕೆ ಪ್ರತಿಯಾಗಿ ಖರ್ಚು ಹಾಕಲಾಗುತ್ತದೆ.

**ಡಿ) ಸ್ಥಿರಾಸ್ತಿಗಳು:**

ಎ. ಸ್ಥಿರಾಸ್ತಿಗಳನ್ನು ಅದರ ಗಳಿಕೆ ಬೆಲೆ ಅಥವಾ ನಿರ್ಮಾಣದ ಬೆಲೆಯಲ್ಲಿ, ಸವಕಳಿ ಕಳೆದುಕೊಂಡು ಸೂಚಿಸಲಾಗಿದೆ.

ಬಿ. ಸ್ಥಿರಾಸ್ತಿಗಳನ್ನು ರೂ. 5,000 ಮತ್ತು ಅದಕ್ಕೂ ಕಮ್ಮಿ ಬೆಲೆ ಬಾಳುವುದಿದ್ದರೆ ಆದಾಯಕ್ಕೆ ವಿಧಿಸಲಾಗುವುದು.

**ಇ) ಸವಕಳಿ:**

ಭೌತಿಕ ಸ್ವರೂಪದಲ್ಲಿರುವ ಸ್ಥಿರಾಸ್ಥಿಗಳ ಮೇಲಿನ ಸವಕಳಿಯನ್ನು, ಅವುಗಳನ್ನು ಸ್ಥಾಪನೆಗೊಳಿಸಿದ ಮತ್ತು ಬಳಕೆ ಆರಂಭಿಸಿದ ಬಳಿಕ (ಕಳೆದು) ಸ್ವತ್ತುಗಳ ಮೌಲ್ಯ ಅಮೂರ್ತವಾಗುವ ಮಾದರಿಯಲ್ಲಿ ಲೆಕ್ಕ ಮಾಡಲಾಗುವುದು. ಅವುಗಳ ಬಳಕೆ ಯೋಗ್ಯ ಕಾಲಮಾನವು ಕಂಪನಿಯ ಅಧಿನಿಯಮ –2013ರ ಪರಿಚ್ಛೇಧ -II ರಲ್ಲಿರುವಂತೆ . ಸವಕಳಿಯನ್ನು ಮಾಡುವ ವಿಧಾನ–ಪ್ರತೀ ವರ್ಷ ಸವಕಳಿಯಾಗುವ ನಿಗದಿತ ಮೊತ್ತದಂತೆ ಲೆಕ್ಕ ಮಾಡುವುದು.

**ಎಫ್) ಆಸ್ತಿಯ ಮೌಲ್ಯ ಕ್ಷೀಣಿಸುವುದು:**

ಆಸ್ತಿಗಳ ಮೌಲ್ಯ ಮರುಪಡೆಯಬಹುದಾದ ಮೌಲ್ಯಕ್ಕಿಂತ ಹೆಚ್ಚಾದಾಗ ಆ ಆಸ್ತಿಗಳನ್ನು ಕ್ಷೀಣಿಸಿದ ಆಸ್ತಿ ಎಂದು ಪರಿಗಣಿಸಲಾಗಿದೆ. ಕ್ಷೀಣತೆಯಿಂದ ಆದ ನಷ್ಟವನ್ನು, ಆಸ್ತಿಯು ಕ್ಷೀಣಿಸಿದೆ ಎಂಬುದಾಗಿ ಗುರುತಿಸಿದ ವರ್ಷದಲ್ಲಿ ಲಾಭ ಮತ್ತು ನಷ್ಟದ ತಖ್ತೆಗೆ ಹಾಕಲಾಗಿದೆ. ಹಿಂದಿನ ಲೆಕ್ಕ ನಿರ್ವಹಣೆ ಅವಧಿಗಳಲ್ಲಿ ಗಣನೆ ಮಾಡಿದ ಕ್ಷೀಣತೆ ನಷ್ಟವನ್ನು ಮರುಪಡೆಯಬಹುದಾದ ಅಂದಾಜು ಮೊತ್ತದಲ್ಲಿ ಯಾವುದೇ ಬದಲಾವಣೆಯಾಗಿದ್ದರೆ ಅದನ್ನು ಬದಲಾಯಿಸಲಾಗಿದೆ.

**ಜಿ) ತಪಶೀಲು ಪಟ್ಟಿ (ದಾಸ್ತಾನುಗಳು) :**

ಸರಕುಗಳನ್ನು ಕೆಳಕಂಡಂತೆ ಮೌಲ್ಯ ಮಾಡಲಾಗಿದೆ:

i) ದಾಸ್ತಾನಿನಲ್ಲಿರುವ ಕಚ್ಚಾ ಸಾಮಗ್ರಿಗಳು, ರಾಸಾಯನಿಕಗಳು, ಸುಗಂಧ ದ್ರವ್ಯಗಳು, ಪ್ಯಾಕಿಂಗ್ ವಸ್ತುಗಳು ಇಂಧನ, ಸರಕುಗಳು ಮತ್ತು ಬಿಡಿ ಭಾಗಗಳನ್ನು ತೂಕದ ಸರಾಸರಿ ಬೆಲೆಯಂತೆ ಮೌಲ್ಯೀಕರಿಸಲಾಗಿದೆ.

ii) ಪ್ರಗತಿಯಲ್ಲಿರುವ ಕೆಲಸಗಳ ವೆಚ್ಚವು ಸಾಮಗ್ರಿಗಳು, ಕೂಲಿ ಮತ್ತು ಇನ್ವೆಂಟರಿಗಳನ್ನು (ದಾಸ್ತಾನುಗಳನ್ನು), ವರ್ತಮಾನದ ಜಾಗ ಮತ್ತು ಸ್ಥಿತಿಯಲ್ಲಿ ಇಡಲಿಕ್ಕೆ ಬೇಕಾಗುವ ಮೇಲು ವೆಚ್ಚವನ್ನು ಒಳಗೊಂಡಿರುತ್ತದೆ.

iii) ಕಾರ್ಖಾನೆಯಲ್ಲಿರುವ ಸಿದ್ಧ ವಸ್ತುಗಳನ್ನು ಅದರ ವೆಚ್ಚದಲ್ಲಿ ಅಥವಾ ಮಾರುಕಟ್ಟೆ ಬೆಲೆ ಎರಡರಲ್ಲಿ ಯಾವುದು ಕಡಿಮೆಯೋ ಅದರಂತೆ ಮೌಲ್ಯೀಕರಿಸಿದೆ. ಸಾಗಾಣಿಕೆಯಲ್ಲಿರುವ ಸಿದ್ಧ ವಸ್ತುಗಳ ಬಗ್ಗೆ ಮತ್ತು ಹೊರ ವಲಯದ ಮಾರಾಟ ಮಳಿಗೆಯಲ್ಲಿರುವ ಸಿದ್ಧ ವಸ್ತುಗಳಿಗೆ ಸಾಗಾಣಿಕೆ ವೆಚ್ಚವನ್ನು ಸೇರಿಸಲಾಗಿದೆ ಮತ್ತು ಇವುಗಳ ಮೌಲ್ಯವನ್ನು ಉತ್ಪಾದನಾ ಬೆಲೆ ಅಥವಾ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಇಡಲಾಗಿದೆ. ಹಾನಿಗೊಂಡ ಸಿದ್ಧವಸ್ತುಗಳನ್ನು ಅವುಗಳಿಂದ ಪಡೆಯಬಹುದಾದ ಅಂದಾಜು ಮಾಡಿದ ಮೌಲ್ಯದಲ್ಲಿ ಮೌಲ್ಯ ಮಾಡಲಾಗಿದೆ.

**ಹೆಚ್)ವಿವಿಧ ಸಾಲಗಾರರು, ಸಾಲಗಳು ಹಾಗೂ ಮುಂಗಡಗಳು**

ಸಮರ್ಪಕವಾದ ಭವಿಷ್ಯದ ಅವಶ್ಯಕತೆಗಳಿಗಾಗಿ ಹಣಕಾಸು ವ್ಯವಸ್ಥೆ ಮಾಡಿದ ಬಳಿಕ ಸಂಶಯಾಸ್ಪದ ಶಿಲ್ಕುಗಳಿಗೆ ವಿವಿಧ ಸಾಲಗಾರರು, ಸಾಲಗಳು ಹಾಗೂ ಮುಂಗಡಗಳನ್ನು ಹೇಳಲಾಗಿದೆ.

**ಐ) ವಿದೇಶಿ ಕರೆನ್ಸಿ ವಹಿವಾಟುಗಳು:**

ವಿದೇಶೀ ಕರೆನ್ಸಿಯ ವಹಿವಾಟುಗಳನ್ನು , ಮುಂದುವರಿದ ಒಪ್ಪಂದದ ವ್ಯಾಪ್ತಿಯನ್ನು ಒಳಗೊಳ್ಳದವುಗಳನ್ನು ಪ್ರಸ್ತುತ ದರಗಳಲ್ಲಿ ಲೆಕ್ಕಾಚಾರ ಮಾಡಲಾಗುವುದು ಮತ್ತು ವಿನಿಮಯ ದರಗಳ ಏರಿಳಿತಗಳಿಂದ ಆಗುವ ಲಾಭ ಅಥವಾ ನಷ್ಟಗಳನ್ನು ಲಾಭ ಮತ್ತು ನಷ್ಟ ತಖ್ತೆಯಲ್ಲಿ ಗುರುತಿಸಲಾಗುವುದು. ವರ್ಷದ ಕೊನೆಯಲ್ಲಿ ವಿದೇಶಿ ಕರೆನ್ಸಿಯ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳನ್ನು ವರ್ಷದ ಕೊನೆಯಲ್ಲಿನ ವಿನಿಮಯ ದರಕ್ಕೆ ಪರಿವರ್ತಿಸಲಾಗುವುದು ಮತ್ತು ವಿನಿಮಯ ದರದ ಏರಿಳಿತಗಳಿಂದಾಗುವ ಲಾಭ ಮತ್ತು ನಷ್ಟಗಳನ್ನು ಲಾಭ ಮತ್ತು ನಷ್ಟ ತಖ್ತೆಯಲ್ಲಿ ಗುರುತಿಸಲಾಗುವುದು.

**ಜೆ) ಆದಾಯದ ಮೇಲೆ ತೆರಿಗೆಗಳು :**

ತೆರಿಗೆ ಪರಿಣಾಮ ಲೆಕ್ಕಾಚಾರ ವಿಧಾನದಿಂದ ತೆರಿಗೆಗಳನ್ನು ನಿರ್ಧರಿಸಲಾಗುವುದು ಮತ್ತು ಭವಿಷ್ಯದ ಅವಶ್ಯಕತೆಗಳಿಗಾಗಿ ಹಣಕಾಸು ವ್ಯವಸ್ಥೆಯನ್ನು ಗುರುತಿಸಲಾಗುವುದು. ಮುಂದೂಡಿದ ತೆರಿಗೆ ಸ್ವತ್ತು ಅಥವಾ ಮುಂದೂಡಿದ ತೆರಿಗೆ ಹೊಣೆಗಾರಿಕೆಯನ್ನು ಹಣಕಾಸಿನ ವಿವಿರ ಪಟ್ಟಿಗಳ ಪ್ರಕಾರ ಲಾಭ/ನಷ್ಟ ಮತ್ತು ತೆರಿಗೆ ಪ್ರಕಾರೆ ಲಾಭ ಮತ್ತು ನಷ್ಟದ ಹೊಂದಾಣಿಕೆ ಮೇಲೆ ಸಮಯದ ವ್ಯತ್ಯಾಸಗಳಿಂದಾದ ತೆರಿಗೆ ಪರಿಣಾಮವನ್ನು ಗುರುತಿಸಲು ದಾಖಲಿಸಲಾಗುವುದು.

**ಕೆ) ನಗದು ಮತ್ತು ನಗದು ಸಮಾನಗಳು**

"ಕಂಪನಿಯು ಕೈಯ್ಯಲ್ಲಿರುವ ನಗದು ಮತ್ತು ಬ್ಯಾಂಕ್‌ನ ಚಾಲ್ತಿ ಖಾತೆ ಹಾಗೂ ಫ್ಲೆಕ್ಸಿ ಠೇವಣಿಗಳನ್ನು ನಗದು ಮತ್ತು ನಗದು ಸಮಾನಗಳೆಂದು ವರ್ಗೀಕರಿಸುವುದು. ಚೆಕ್ಸ್ ಮತ್ತು ಡ್ರಾಫ್ಟ್ ಮತ್ತು ಬಾಕಿ ಉಳಿದಿರುವ ಬ್ಯಾಂಕ್ ಠೇವಣಿಗಳನ್ನು ಕಂಪನಿಯು ತಕ್ಷಣ ಬ್ಯಾಂಕ್‌ಗೆ ಪಾವತಿ ಮಾಡುವುದರಿಂದ ಬ್ಯಾಂಕ್ ಚಾಲ್ತಿ ಖಾತೆ ಶಿಲ್ಕು ಎಂದೇ ಪರಿಗಣಿಸಲಾಗುವುದು."

ಯಾವುದೇ ಅವಧಿಯ ನಿರಖು ಠೇವಣಿಗಳು ಮತ್ತು ಮೊದಲ ಸಂದಾಯವನ್ನು ಇತರೇ ಬ್ಯಾಂಕ್ ಶಿಲ್ಕುಗಳೆಂದು ಪರಿಗಣಿಸಲಾಗುವುದು.

## 2 ಸ್ವತ್ತು, ಸ್ಥಾವರ ಮತ್ತು ಉಪಕರಣ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು

### ಎ ಸ್ವತ್ತು, ಸ್ಥಾವರ ಮತ್ತು ಉಪಕರಣ

(ಎಲ್ಲ ಮೊತ್ತಗಳು ಭಾರತೀಯ ಕರೆನ್ಸಿ ಕೋಟಿ ರೂಗಳಲ್ಲಿದೆ)

| ವಿವರಗಳು | ಸ್ವಾಯತ್ತ ಹಿಡುವಳಿ ಭೂಮಿ | ಗುತ್ತಿಗೆ ಹಿಡುವಳಿ ಭೂಮಿ | ಕಟ್ಟಡಗಳು | ಸ್ಥಾವರ ಮತ್ತು ಉಪಕರಣ | ಕಂಪ್ಯೂಟರ್‌ಗಳು | ಸಲಕರಣೆಗಳು | ಪೀಠೋಪಕರಣಗಳು ಮತ್ತು ಜೋಡಿಸಿದ ವಸ್ತುಗಳು | ಕಚೇರಿ ಉಪಕರಣಗಳು | ಅಂತರ ಸಂಪರ್ಕ ಉಪಕರಣಗಳು | ಮೋಟರ್ ವಾಹನಗಳು | ಅಮೂರ್ತ ಆಸ್ತಿಗಳು | ಒಟ್ಟು |
|---|---|---|---|---|---|---|---|---|---|---|---|---|
| I ಸ್ವತ್ತಿನ ಬೆಲೆ | | | | | | | | | | | | |
| **ಏಪ್ರಿಲ್ 1, 2022ರಂತೆ** | 1,219.09 | 32.05 | 7.35 | 48.00 | 2.72 | 2.57 | 2.08 | 1.76 | 0.06 | 2.58 | - | 1,318.26 |
| ಸೇರ್ಪಡೆಗಳು | - | - | 0.05 | 0.12 | 0.05 | 0.04 | 0.06 | 0.04 | - | 0.30 | | 0.64 |
| ವಿಲೇವಾರಿ/ಕಡಿತಗಳು | - | - | - | 11.99 | - | - | - | 0.01 | - | 0.10 | | 12.10 |
| **ಮಾರ್ಚ್ 31, 2023ರಂತೆ ಶಿಲ್ಕು** | 1,219.09 | 32.05 | 7.40 | 36.13 | 2.77 | 2.60 | 2.14 | 1.78 | 0.06 | 2.77 | - | 1,306.80 |
| **II ಸಂಚಿತ ಸವಕಳಿ** | | | | | | | | | | | | |
| ಏಪ್ರಿಲ್ 1, 2022ರಂತೆ | - | - | 2.68 | 26.46 | 2.24 | 1.81 | 1.53 | 1.43 | 0.06 | 1.60 | - | 37.81 |
| ಸವಕಳಿ ವೆಚ್ಚ | - | - | 0.28 | 1.76 | 0.16 | 0.14 | 0.09 | 0.09 | 0.00 | 0.21 | | 2.74 |
| ವಿಲೇವಾರಿಗಳು/ಕಡಿತಗಳು | - | - | - | 11.37 | - | - | - | 0.01 | - | 0.09 | | 11.48 |
| **ಮಾರ್ಚ್ 31, 2023ರಂತೆ ಶಿಲ್ಕು** | - | - | 2.96 | 16.85 | 2.41 | 1.95 | 1.62 | 1.51 | 0.06 | 1.72 | - | 29.07 |
| **III ಸ್ವತ್ತಿನ ನಿವ್ವಳ ಬೆಲೆ** | 1,219.09 | 32.05 | 4.43 | 19.28 | 0.37 | 0.65 | 0.52 | 0.28 | 0.00 | 1.06 | - | 1,277.73 |

| ವಿವರಗಳು | ಸ್ವಾಯತ್ತ ಹಿಡುವಳಿ ಭೂಮಿ | ಗುತ್ತಿಗೆ ಹಿಡುವಳಿ ಭೂಮಿ | ಕಟ್ಟಡಗಳು | ಸ್ಥಾವರ ಮತ್ತು ಉಪಕರಣ | ಕಂಪ್ಯೂಟರ್‌ಗಳು | ಸಲಕರಣೆಗಳು | ಪೀಠೋಪಕರಣಗಳು ಮತ್ತು ಜೋಡಿಸಿದ ವಸ್ತುಗಳು | ಕಚೇರಿ ಉಪಕರಣಗಳು | ಅಂತರ ಸಂಪರ್ಕ ಉಪಕರಣಗಳು | ಮೋಟರ್ ವಾಹನಗಳು | ಅಮೂರ್ತ ಆಸ್ತಿಗಳು | ಒಟ್ಟು |
|---|---|---|---|---|---|---|---|---|---|---|---|---|
| I ಸ್ವತ್ತಿನ ಬೆಲೆ | | | | | | | | | | | | |
| **ಏಪ್ರಿಲ್ 1, 2021ರಂತೆ** | 1,219.09 | 32.05 | 4.88 | 47.63 | 2.40 | 2.53 | 2.00 | 1.67 | 0.06 | 2.34 | - | 1,314.66 |
| ಸೇರ್ಪಡೆಗಳು | - | | 2.47 | 1.38 | 0.32 | 0.04 | 0.07 | 0.10 | - | 0.23 | | 4.62 |
| ವಿಲೇವಾರಿಗಳು/ಕಡಿತಗಳು | | | - | 1.01 | - | - | - | 0.01 | - | - | | 1.02 |
| **ಮಾರ್ಚ್ 31, 2022ರಂತೆ ಶಿಲ್ಕು** | 1,219.09 | 32.05 | 7.35 | 48.00 | 2.72 | 2.57 | 2.08 | 1.76 | 0.06 | 2.58 | - | 1,318.25 |
| **II ಸಂಚಿತ ಸವಕಳಿ** | | | | | | | | | | | | |
| **ಏಪ್ರಿಲ್ 1, 2021ರಂತೆ** | - | - | 2.56 | 25.67 | 2.11 | 1.68 | 1.44 | 1.36 | 0.06 | 1.39 | - | 36.25 |
| ಸವಕಳಿ ವೆಚ್ಚ | - | - | 0.13 | 1.71 | 0.13 | 0.14 | 0.09 | 0.08 | 0.00 | 0.21 | | 2.49 |
| ವಿಲೇವಾರಿಗಳು/ಕಡಿತಗಳು | - | - | - | 0.92 | - | - | - | 0.01 | - | - | | 0.93 |
| **ಮಾರ್ಚ್ 31, 2022ರಂತೆ ಶಿಲ್ಕು** | - | - | 2.68 | 26.46 | 2.24 | 1.81 | 1.53 | 1.43 | 0.06 | 1.60 | - | 37.82 |
| **III ಸ್ವತ್ತಿನ ನಿವ್ವಳ ಬೆಲೆ (I-II)** | 1,219.09 | 32.05 | 4.67 | 21.55 | 0.48 | 0.75 | 0.55 | 0.33 | 0.00 | 0.98 | - | 1,280.44 |

### ಬಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ

| ವಿವರಗಳು | ಮಾರ್ಚ್ 31, 2023 | | | | | ಮಾರ್ಚ್ 31, 2022 | | | | |
|---|---|---|---|---|---|---|---|---|---|---|
| | ಅವಧಿಗೆ ಸಿಡಬ್ಲ್ಯುಐಪಿ ಮೊತ್ತ ಒಟ್ಟು | | | | ಒಟ್ಟು | ಅವಧಿಗೆ ಸಿಡಬ್ಲ್ಯುಐಪಿ ಮೊತ್ತ ಒಟ್ಟು | | | | ಒಟ್ಟು |
| | 1 ವರ್ಷಕ್ಕಿಂತ ಕಡಿಮೆ | 1–2 ವರ್ಷ | 2–3 ವರ್ಷ | 3ವರ್ಷ ಕ್ಕೂ ಹೆಚ್ಚು | | 1 ವರ್ಷಕ್ಕಿಂತ ಕಡಿಮೆ | 1–2 ವರ್ಷ | 2–3 ವರ್ಷ | 3ವರ್ಷ ಕ್ಕೂ ಹೆಚ್ಚು | |
| ಪ್ರಗತಿಯಲ್ಲಿರುವ ಯೋಜನೆ | 0.27 | | | | 0.27 | - | - | - | - | - |
| | | | | | | | | | | |
| ಒಟ್ಟು | 0.27 | - | - | - | 0.27 | - | - | - | - | - |

**ಟಿಪ್ಪಣಿ :**

i. ಸ್ಥಿರಾಸ್ತಿಗಳ ಎಲ್ಲ ಹಕ್ಕುಪತ್ರಗಳು ಕಂಪನಿಯ ಹೆಸರಲ್ಲಿ ಹೊಂದಲಾಗಿದೆ.

ii. ಕಂಪನಿಯ ಹೆಸರಲ್ಲಿ ಹೊಂದಲಾಗಿರುವ ಎಲ್ಲ ಸ್ಥಿರಾಸ್ತಿಗಳನ್ನು ಮಾರ್ಚ್ 31 2018ರಂತೆ ನೋಂದಾಯಿತ ಮೌಲ್ಯಮಾಪಕರಿಂದ ಕಂಪನಿ ನಿಯಮಗಳು,2017 ರ ನಿಯಮ 2ರಡಿಯಲ್ಲಿ ವಿವರಿಸಲಾದಂತೆ (ನೋಂದಾಯಿತ ಮೌಲ್ಯಮಾಪಕರು ಮತ್ತು ಮೌಲ್ಯಮಾಪನ) ಮರು ಮೌಲ್ಯ ಮಾಡಲಾಗಿದೆ.

iii. ಕಂಪನಿಯು ದಾಬಸ್‌ಪೇಟೆಯಲ್ಲಿ ಆಸ್ತಿ ಹೊಂದಿದ್ದು ವಿವಾದಿತವಾಗಿರುವ ಕಾರಣ ಕಂಪನಿಯು ಬಳಕೆ ಮಾಡುತ್ತಿಲ್ಲ, ಬಂಡವಾಳದ ಹೆಚ್ಚಳ ಅಥವಾ ಬಾಡಿಗೆ ಆದಾಯ ಪಡೆಯುವ ಉದ್ದೇಶ ಹೊಂದಿರದ ಕಾರಣ ಈ ಆಸ್ತಿಯನ್ನು ಹೂಡಿಕೆ ಆಸ್ತಿಯಾಗಿ ವರ್ಗೀಕರಿಸಿಲ್ಲ. ಕಂಪನಿಯು ತನ್ನ ಸ್ವಂತ ಉಪಯೋಗಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಉದ್ದೇಶಿಸಿದೆ.

**ಟಿಪ್ಪಣಿಗಳು:**

i. ನಿರ್ವಹಿಸಲಾಗಿರುವ ಭೂ ದಾಖಲೆಗಳ ಪ್ರಕಾರ, ಕಂಪನಿಯು 119.52 ಎಕರೆ ವಿಸ್ತೀರ್ಣದ ಭೂಮಿಯನ್ನು ಬಂಡವಾಳೀಕರಣಗೊಳಿಸಿದೆ (ನೆಲಮಂಗಲದ ದಾಬಸ್ಪೇಟೆಯಲ್ಲಿ 20 ಎಕರೆ ಗುತ್ತಿಗೆ ಹಿಡುವಳಿ ಭೂಮಿ ಸೇರಿದಂತೆ)

ii. ಆಸ್ತಿಗಳಿಗೆ ಹಕ್ಕು ಪತ್ರ ಸೇರಿದಂತೆ ಭೂ ದಾಖಲೆಗಳನ್ನು ಪರಿಷ್ಕರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

iii. ಬೆಂಗಳೂರಿನಲ್ಲಿ ಕಂಪನಿಯ 37.40 ಎಕರೆ ಭೂಮಿಯಲ್ಲಿ 16.70 ಎಕರೆ ಭೂಮಿಗೆ ಸಂಪೂರ್ಣ ದಾಖಲೆಗಳು ಲಭ್ಯವಿದೆ. ಉಳಿದ 20.70 ಎಕರೆ ಭೂಮಿಯ ದಾಖಲೀಕರಣವನ್ನು ಪೂರ್ಣಗೊಳಿಸಿ ಉಳಿದ ಆವರಣವನ್ನು ಕಂಪನಿ ಪರ ಮಾಡಿಕೊಳ್ಳಲು ಸಂಬಂಧಿಸಿದ ಪ್ರಾಧಿಕಾರಗಳೊಂದಿಗೆ ಕಂಪನಿಯು ಪ್ರಯತ್ನಿಸುತ್ತಿದೆ.

iv. ಮೈಸೂರಿನಲ್ಲಿರುವ ಕಂಪನಿಯ 34.87 ಎಕರೆ ಭೂಮಿ ಮತ್ತು ಶಿವಮೊಗ್ಗದಲ್ಲಿರುವ 27.25 ಎಕರೆ ಭೂಮಿಯ ದಾಖಲೀಕರಣವನ್ನು ಪೂರ್ಣಗೊಳಿಸಲು ಸಂಬಂಧಿಸಿದ ಪ್ರಾಧಿಕಾರದೊಂದಿಗೆ ಕಂಪನಿಯು ಪ್ರಯತ್ನಿಸುತ್ತಿದೆ.

v. ಶಿವಮೊಗ್ಗದಲ್ಲಿರುವ ಕಂಪನಿಯ ಭೂಮಿ 15.25 ಎಕರೆ ಕಾಲೊನಿ ಆವರಣಕ್ಕೆ ಸಂಬಂಧಪಟ್ಟಂತೆ ನೀರಾವರಿ ಇಲಾಖೆಯು ಕಾಲುವೆಯನ್ನು ನಿರ್ಮಾಣ ಮಾಡಿದ್ದು ಶಿವಮೊಗ್ಗ ನಗರಸಭೆಯು ಜಮೀನಿನ ಅಡ್ಡಲಾಗಿ ಸಮರ್ಪಕ ಡಾಮರೀಕೃತ ರಸ್ತೆ ನಿರ್ಮಾಣ ಮಾಡಿದೆ. ವಿವಿಧ ಪಕ್ಷಗಳಿಂದ ಜಮೀನಿನ ಕಲೆ ಭಾಗ ಅತಿಕ್ರಮಣವಾಗಿದೆ. ಜಮೀನನ್ನು ಸ್ವಾಧೀನಕ್ಕೆ ಪಡೆದುಕೊಳ್ಳಲು ಪ್ರಯತ್ನಿಸಲಾಗುತ್ತಿದ್ದು ಬಳಕೆ ಮಾಡಲಾದ ಅಂತಹ ಜಮೀನಿಗೆ ತಕ್ಕ ಪರಿಹಾರ ಪಡೆದುಕೊಳ್ಳಲು ಕಂದಾಯ ಪ್ರಾಧಿಕಾರಗಳೊಂದಿಗೆ ಚರ್ಚಿಸಲಾಗುತ್ತಿದೆ.

vi. 1.82 ಎಕರೆ ಭೂಮಿಯಲ್ಲಿ ವಸತಿ ನಿಲಯ ಕಟ್ಟಡ, ವಸತಿ ನಿಲಯ ಮೇಲ್ವಿಚಾರಕರ ವಸತಿ ಗೃಹ ನಿರ್ಮಾಣಕ್ಕೆ 01.06.1961ರಿಂದ ಜಾರಿಗೆ ಬರುವಂತೆ ಕಂಪನಿಯು ರಾಷ್ಟ್ರೀಯ ಎಂಜಿನಿಯರಿಂಗ್ ಸಂಸ್ಥೆಯೊಂದಿಗೆ 99 ವರ್ಷಗಳ ಗುತ್ತಿಗೆಯನ್ನು ಮಾಡಿಕೊಂಡಿದೆ. ವಾರ್ಷಿಕ ರೂ.1 ಬಾಡಿಗೆಯನ್ನು ನಿಗದಿ ಮಾಡಲಾಗಿತ್ತು.

vii. ಎಲ್ಲ ಸ್ಥಿರಾಸ್ತಿಗಳ ಹಕ್ಕುಪತ್ರಗಳನ್ನು ಕಂಪನಿಯ ಹೆಸರಲ್ಲಿ ಮಾಡಲಾಗಿದೆ.

viii. ಕಂಪನಿಯ ಹೆಸರಿನಲ್ಲಿ ಹೊಂದಿರುವ ಎಲ್ಲ ಸ್ಥಿರಾಸ್ತಿಗಳನ್ನು 31 ಮಾರ್ಚ್ 2018ರಲ್ಲಿ ಕಂಪನಿಗಳ (ನೋಂದಾಯಿತ ಮೌಲ್ಯಮಾಪಕರು ಮತ್ತು ಮೌಲ್ಯಮಾಪನ ) ನಿಯಮಗಳು, 2017ರ ನಿಯಮ 2ರಡಿಯಲ್ಲಿ ಮರು ಮೌಲ್ಯಮಾಪನ ಮಾಡಲಾಗಿದೆ.

x. ಕೆಐಎಡಿಬಿಯು 20 ಜುಲೈ 2015ರಂದು 15.66 ಕೋಟಿ ರೂ ಮೊತ್ತದ (ಮರು ಮೌಲ್ಯಮಾಪನ ಮೊತ್ತ ರೂ.32.05 ಕೋಟಿ) ಗುತ್ತಿಗೆ ಹಿಡುವಳಿ ಭೂಮಿ ವಿಸ್ತೀರ್ಣ 80940 ಚದರ ಮೀಟರ್, ಸೋಮಪುರ 2ನೇ ಹಂತ ಕೈಗಾರಿಕಾ ಪ್ರದೇಶ, ಸರ್ವೆ ನಂ. 98/1, 98/2, 103/2 ಮತ್ತು 104 ಭಾಗಗಳು, ಬೀರಗೊಂಡನಹಳ್ಳಿ ಗ್ರಾಮ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಿವೇಶನ ಸಂಖ್ಯೆ 457ನ್ನು 10 ವರ್ಷಗಳ ಕಾಲದ ಗುತ್ತಿಗೆಗೆ ಮಂಜೂರು ಮಾಡಿದ್ದು ವಿವಾದದ ಕಾರಣದಿಂದ ಕಂಪನಿಯು ಇದನ್ನು ಪ್ರಸ್ತುತ ಬಳಕೆ ಮಾಡುತ್ತಿಲ್ಲ. ಬಂಡವಾಳ ಬೆಲೆ ಏರಿಕೆ (ಹೂಡಿಕೆಯ ಮಾರುಕಟ್ಟೆ ಬೆಲೆ ಹೆಚ್ಚಳ)ಯಾಗಿ ಇದನ್ನು ವರ್ಗೀಕರಿಸದೇ ಇರುವುದರಿಂದ ಅಥವಾ ಬಾಡಿಗೆ ಆದಾಯ ಪಡೆಯುವ ಉದ್ದೇಶ ಹೊಂದಿಲ್ಲದೇ ಇರುವುದರಿಂದಾಗಿ ಇದನ್ನು ಹೂಡಿಕೆ ಆಸ್ತಿ ಎಂದು ಪರಿಗಣಿಸಲಾಗಿಲ್ಲ. ಕಂಪನಿಯು ತನ್ನ ಸ್ವಂತ ಉಪಯೋಗಕ್ಕಾಗಿ ಕಟ್ಟಡ ನಿರ್ಮಾಣ ಮಾಡುವ ಉದ್ದೇಶ ಹೊಂದಿದೆ.

### 3. ಹೂಡಿಕೆಗಳು

(ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31 2023ರಲ್ಲಿ ಇದ್ದಂತೆ | ಮಾರ್ಚ್ 31 2022ರಲ್ಲಿ ಇದ್ದಂತೆ |
|---|---|---|
| ಚಾಲ್ತಿ ರಹಿತದಲ್ಲಿ ಹೂಡಿಕೆ | 0.02 | 0.02 |
| **ಒಟ್ಟು** | **0.02** | **0.02** |

### 4. ದಾಸ್ತಾನು

(ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31 2023ರಲ್ಲಿ ಇದ್ದಂತೆ | ಮಾರ್ಚ್ 31 2022ರಲ್ಲಿ ಇದ್ದಂತೆ |
|---|---|---|
| (ಬೆಲೆಗಿಂತ ಕಡಿಮೆಗೆ ಮೌಲ್ಯ ಮಾಡಿರುವುದು ಮತ್ತು ನಿವ್ವಳ ನೈಜ ಮೌಲ್ಯ/ವಾಸ್ತವ ಬೆಲೆ) | | |
| ಕಚ್ಚಾ ವಸ್ತು ಮತ್ತು ಪ್ಯಾಕಿಂಗ್ ಸಾಮಗ್ರಿಗಳು | 62.07 | 53.51 |
| ಉಗ್ರಾಣ ಮತ್ತು ಬಿಡಿಭಾಗಗಳು (ಸಂಗ್ರಹಣೆ ನಿವ್ವಳ ಬೆಲೆ) | 2.72 | 2.50 |
| ಪ್ರಗತಿಯಲ್ಲಿರುವ ಕಾಮಗಾರಿ | 8.83 | 10.83 |
| ಪೂರ್ಣಗೊಂಡ ಉತ್ಪನ್ನ/ ಸಿದ್ಧ ಸರಕು | 67.07 | 58.88 |
| **ಒಟ್ಟು** | **140.69** | **125.72** |

### 5. ವ್ಯಾಪಾರ ಸ್ವೀಕೃತಿಗಳು

(ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31 2023ರಲ್ಲಿ ಇದ್ದಂತೆ | ಮಾರ್ಚ್ 31 2022ರಲ್ಲಿ ಇದ್ದಂತೆ |
|---|---|---|
| **ಸುರಕ್ಷಿತ, ಉತ್ತಮ ಎಂದು ಪರಿಗಣಿತ** | ಇಲ್ಲ | ಇಲ್ಲ |
| **ಅಸುರಕ್ಷಿತ, ಉತ್ತಮ ಎಂದು ಪರಿಗಣಿತ:** | | |
| ಎ) ಅಂತಿಮ ದಿನಾಂಕದಿಂದ 6 ತಿಂಗಳಿಗೂ ಕಡಿಮೆ ಅವಧಿಯ ವ್ಯಾಪಾರ ಸ್ವೀಕೃತಿಗಳು | 25.95 | 20.10 |
| ಬಿ) ಇತರ – | | |
| ಅಂತಿಮ ದಿನಾಂಕದಿಂದ 6 ತಿಂಗಳಿಗೂ ಹೆಚ್ಚಿನ ಅವಧಿಯ ವ್ಯಾಪಾರ ಸ್ವೀಕೃತಿಗಳು | 19.83 | 6.27 |
| ಕಳೆಯಿರಿ; ಕೆಟ್ಟ ಸಾಲಗಳಿಗೆ ಪೂರ್ವ ಯೋಜನೆ | -19.83 | -6.22 |
| **ಒಟ್ಟು** | **25.95** | **20.15** |

### 6. ನಗದು ಮತ್ತು ನಗದು ಸಮಾನ

(ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31 2023ರಲ್ಲಿ ಇದ್ದಂತೆ | ಮಾರ್ಚ್ 31 2022ರಲ್ಲಿ ಇದ್ದಂತೆ |
|---|---|---|
| ಕೈಯ್ಯಲ್ಲಿರುವ ನಗದು | 0.01 | 0.01 |
| **ಬ್ಯಾಂಕ್‌ನಲ್ಲಿರುವ ಶಿಲ್ಕು** | | |
| ಚಾಲ್ತಿ ಖಾತೆಗಳಲ್ಲಿ ಶಿಲ್ಕು | 12.09 | 11.36 |
| ಫ್ಲೆಕ್ಸಿ ಠೇವಣಿಗಳಲ್ಲಿರುವ ಶಿಲ್ಕು | 78.53 | 87.89 |
| **ಒಟ್ಟು** | **90.63** | **99.26** |

### 7. ನಗದು ಹೊರತಾಗಿ ಬ್ಯಾಂಕ್ ಶಿಲ್ಕುಗಳು ಮತ್ತು ನಗದು ಸಮಾನಗಳು

(ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31 2023ರಲ್ಲಿ ಇದ್ದಂತೆ | ಮಾರ್ಚ್ 31 2022ರಲ್ಲಿ ಇದ್ದಂತೆ |
|---|---|---|
| ಮೂರು ತಿಂಗಳಿಗೂ ಹೆಚ್ಚು ಆದರೆ 12 ತಿಂಗಳಿಗೂ ಕಡಿಮೆ ಅವಧಿ ಮುಕ್ತಾಯಗೊಂಡ ಠೇವಣಿಗಳು | 850.09 | 650.19 |
| **ಒಟ್ಟು** | **850.09** | **650.19** |

ಟಿಪ್ಪಣಿ: ನಿಶ್ಚಿತ ಠೇವಣಿಗಳು ಬ್ಯಾಂಕ್ ಖಾತರಿಗಳಿಗೆದುರಾಗಿ ಹಕ್ಕುಗಳಡಿಯಲ್ಲಿನ ಠೇವಣಿಗಳನ್ನು ಒಳಗೊಂಡಿದೆ. ರೂ.0.09 ಕೋಟಿ

### 8. ಇತರೇ ಹಣಕಾಸು ಆಸ್ತಿಗಳು

(ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31 2023ರಲ್ಲಿ ಇದ್ದಂತೆ | ಮಾರ್ಚ್ 31 2022ರಲ್ಲಿ ಇದ್ದಂತೆ |
|---|---|---|
| **ಅಸುರಕ್ಷಿತ : ಉತ್ತಮ ಎಂದು ಪರಿಗಣಿತ** | | |
| ಕಂದಾಯ ಪ್ರಾಧಿಕಾರದೊಂದಿಗೆ ಬಾಕಿ* | 11.23 | 10.77 |
| ಸ್ಥಿರ ಠೇವಣಿಯಿಂದ ಕೂಡಿ ಬರುವ ಬಡ್ಡಿ | 25.99 | 11.86 |
| ಸಿಬ್ಬಂದಿಗಳಿಗೆ ಮುಂಗಡ | 0.20 | 0.64 |
| ಇತರರಿಗೆ ಮುಂಗಡ | 16.27 | 2.27 |
| ಪೂರ್ವಪಾವತಿಸಿದ ಖರ್ಚುಗಳು | 0.07 | - |
| ಇತರೇ ಠೇವಣಿಗಳು | 0.32 | 0.18 |
| **ಒಟ್ಟು** | **54.08** | **25.72** |

"**ಟಿಪ್ಪಣಿ:** ಜಿ.ಎಸ್.ಟಿ. ಪಾವತಿಗಳನ್ನು ಶಾಸನಬದ್ಧ ಬಾಧ್ಯತೆಗಳಿಗೆ ವರ್ಗಾಯಿಸಲಾಗಿದೆ. ಆದಾಯ ತೆರಿಗೆ ನಿಬಂಧನೆಗಳು (ಬಾಧ್ಯತೆಗಳು) ಮತ್ತು ಮುಂಗಡ ತೆರಿಗೆ ಮತ್ತು ಟಿಡಿಎಸ್ (ಸ್ವತ್ತುಗಳು) ಎಲ್ಲವೂ ಬಾಕಿ ಇರುವ ಬಾಧ್ಯತೆ ಮತ್ತು ಅವುಗಳ ಪಾವತಿಗಳಂತೆ ಒಂದೇ ರೀತಿಯದ್ದಾಗಿರುವುದರಿಂದ, ಎಲ್ಲವನ್ನೂ ಕಳೆದ ಬಳಿಕದ ಮೊತ್ತವನ್ನು ವರದಿ ಮಾಡಲಾಗಿದೆ. ಆದಾಯ ತೆರಿಗೆ ಕಾನೂನಿನ ಪ್ರಕಾರ ಆದಾಯದ ರಿಟರ್ನ್‌ಗಳನ್ನು ಸಲ್ಲಿಸುವ ಮೊದಲು ಆದಾಯ ತೆರಿಗೆಯನ್ನು ಪಾವತಿಸಬೇಕು ಮತ್ತು ಕಂಪನಿಯು ಸ್ವಯಂ ಮೌಲ್ಯಮಾಪನ ಮಾಡಬೇಕು ಮತ್ತು ಯಾವುದೇ ಮರುಪಾವತಿಯನ್ನು ರಿಟರ್ನ್ ಸಲ್ಲಿಸುವಾಗ ಕ್ಲೇಮ್ ಮಾಡಬೇಕು. ಮರುಪಾವತಿ ಕಾನೂನಿನ ಸೌಲಭ್ಯವನ್ನು ಆಧರಿಸಿ ಮರುಪಾವತಿಯು ಆದಷ್ಟು ಶೀಘ್ರದಲ್ಲೇ ನಿರೀಕ್ಷಿಸಬಹುದು ಆದರೆ ಮೌಲ್ಯಮಾಪನಕ್ಕೆ ನಿಗದಿಮಾಡಿದ ಅವಧಿಯ ನಂತರದಲ್ಲಿ ಅಲ್ಲ. ಹೀಗಾಗಿ ಮರುಪಾವತಿಯ ನಿರೀಕ್ಷಿತ ದಿನಾಂಕವು ಬೇಡಿಕೆ ಆಧರಿತವಾಗಿದೆ ಮತ್ತು ಆದಾಯ ತೆರಿಗೆಯ ಮರುಪಾವತಿ ಬಾಕಿಯು ಚಾಲ್ತಿ ಸ್ವತ್ತು ಆಗಿದೆ."

"ಇತರರಿಗೆ ಮುಂಗಡ–14.4 ಕೋಟಿ ರೂ– ಕಂಪನಿಯು 03.02.2023ರಂದು ಕರ್ನಾಟಕ ಲೋಕೋಪಯೋಗಿ ಇಲಾಖೆಗೆ 14.4 ಕೋಟಿ ರೂಗಳನ್ನು ಕಟ್ಟಡ ಮತ್ತು ಸಂಬಂಧಿಸಿದ ಸ್ಥಾವರ ಮತ್ತು ಯಂತ್ರೋಪಕರಣಗಳೂ ಸೇರಿದಂತೆ 2 ಟನ್ ಸೋಪ್ ಉತ್ಪಾದನಾ ಸೌಕರ್ಯಕ್ಕಾಗಿ ಒಟ್ಟು ವೆಚ್ಚದ 50% ಬಿಡುಗಡೆ ಮಾಡಿದೆ. ಯೋಜನೆಯ ವೆಚ್ಚ ರೂ.28.80 ಕೋಟಿ ಆಗಿದೆ ಮತ್ತು ಇದಕ್ಕೆ ದಿನಾಂಕ 07.10.2022ರ ಆಡಳಿತ ಮಂಡಳಿ ನಿರ್ದೇಶಕರ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಈ ಮೊತ್ತವನ್ನು ಇತರೇ ಮುಂಗಡ ಅಡಿಯಲ್ಲಿ ವರ್ಗೀಕರಿಸಲಾಗಿದೆ."

## 9. ಈಕ್ವಿಟಿ ಷೇರು ಬಂಡವಾಳ

(ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31 2023ರಂತೆ | ಮಾರ್ಚ್ 31 2022 ರಂತೆ | ಮಾರ್ಚ್ 31 2021 ರಂತೆ |
|---|---|---|---|
| ಅಧಿಕೃತವಾದುದು: | | | |
| ತಲಾ ರೂ.1000/–ರ 3,50,000 ಈಕ್ವಿಟಿ ಷೇರುಗಳು | 35.00 | 35.00 | 35.00 |
| ನೀಡಿರುವ, ಚಂದಾದಾರಿಕೆಯಾದ ಮತ್ತು ಪಾವತಿಯಾದುದು: | - | - | - |
| ತಲಾ ರೂ.1000/–ರ 3,18,221 ಈಕ್ವಿಟಿ ಷೇರುಗಳು | 31.82 | 31.82 | 31.82 |

**(i) ವರ್ಷದ ಆರಂಭದಲ್ಲಿ ಮತ್ತು ವರ್ಷದ ಕೊನೆಯಲ್ಲಿ ಬಾಕಿಯಿರುವ ಈಕ್ವಿಟಿ ಷೇರುಗಳ ಸಂಖ್ಯೆಯ ಸಮನ್ವಯತೆ:**

| ವಿವರಗಳು | 2022-23 | | 2021-22 | |
|---|---|---|---|---|
| | (ಸಂಖ್ಯೆಗಳಲ್ಲಿ) | ರೂ. ಕೋಟಿಗಳಲ್ಲಿ | (ಸಂಖ್ಯೆಗಳಲ್ಲಿ) | ರೂ. ಕೋಟಿಗಳಲ್ಲಿ |
| ವರ್ಷದ ಆರಂಭದಲ್ಲಿ ಬಾಕಿಯಿರುವ ಷೇರುಗಳು | 3,18,221 | 31.82 | 3,18,221 | 31.82 |
| | | | | - |
| ವರ್ಷದ ಕೊನೆಯಲ್ಲಿ ಬಾಕಿಯಿರುವ ಷೇರುಗಳು | 3,18,221 | 31.82 | 3,18,221 | 31.82 |

**(ii) 5% ಷೇರುಗಳಿಗಿಂತ ಹೆಚ್ಚು ಷೇರುಗಳನ್ನು ಹೊಂದಿರುವ ಪ್ರತಿ ಷೇರುದಾರರ ಕಂಪನಿಯಲ್ಲಿರುವ ಷೇರುಗಳ ವಿವರಗಳು:**

| ಷೇರುದಾರರ ಹೆಸರು | ಮಾರ್ಚ್ 31 2023ರಂತೆ | | ಮಾರ್ಚ್ 31 2022ರಂತೆ | |
|---|---|---|---|---|
| | ಹೊಂದಿರುವ ಷೇರುಗಳ ಸಂಖ್ಯೆ | % ಹೊಂದಿರುವ | ಹೊಂದಿರುವ ಷೇರುಗಳ ಸಂಖ್ಯೆ | % ಹೊಂದಿರುವ |
| ಕನಿಷ್ಠ ಸಂಖ್ಯೆಯ ಷೇರುದಾರರನ್ನು ಹೊಂದುವ ಅಗತ್ಯತೆಯ ಅನುಪಾಲನೆ ಮಾಡಲು ಕರ್ನಾಟಕ ಸರ್ಕಾರ ಮತ್ತು ಅದರ ನಾಮನಿರ್ದೇಶಿತರು 100% ಪಾಲನ್ನು ಹೊಂದಿದ್ದಾರೆ. | 318,221.00 | 100% | 318,221.00 | 100% |

| ವರ್ಷದ ಕೊನೆಗೆ ಪ್ರವರ್ತಕರು ಹೊಂದಿರುವ ಷೇರುಗಳು | | | | ವರ್ಷದ ಅವಧಿಯಲ್ಲಿ ಬದಲಾವಣೆ % |
|---|---|---|---|---|
| ಕ್ರ.ಸಂ | ಪ್ರವರ್ತಕರ ಹೆಸರು | ಷೇರುಗಳ ಸಂಖ್ಯೆ | ಒಟ್ಟು ಷೇರುಗಳ % | |
| 1 | **ಕರ್ನಾಟಕ ಸರ್ಕಾರ** | 3,18,221.00 | 100% | Nil |
| | **ಒಟ್ಟು** | **3,18,221.00** | **100%** | **Nil** |

## 10. ಇತರೇ ಈಕ್ವಿಟಿ

(ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31 2023ರಂತೆ | ಮಾರ್ಚ್ 31 2022ರಂತೆ | ಮಾರ್ಚ್ 31 2021ರಂತೆ |
|---|---|---|---|
| ಎ) ಉಳಿಕೆಯಾಗಿರುವ ಗಳಿಕೆ | | | |
| **ಆರಂಭಿಕ ಶಿಲ್ಕುಗಳು** | **995.55** | **880.47** | **785.70** |
| ಕೂಡಿಸು (ಕಳೆ) ತೆರಿಗೆಗಳ ನಂತರ ಲಾಭ | 180.77 | 138.20 | 112.94 |
| ಕೂಡಿಸು(ಕಳೆ) ಇತರೇ ಸಮಗ್ರ ಆದಾಯ | 1.72 | -0.33 | 1.01 |
| ಕಳೆ: ಹಂಚಿಕೆಗಳು | | | |
| i) ವರ್ಷದಲ್ಲಿ ಪಾವತಿಸಲಾದ ಲಾಭಾಂಶ | 41.36 | 22.80 | 15.91 |
| ii) ಲಾಭಾಂಶ ವಿತರಣಾ ತೆರಿಗೆ | | | 3.27 |
| **ಉಳಿಕೆಯಾದ ಗಳಿಕೆಗಳ ಒಟ್ಟು** | **1,136.68** | **995.55** | **880.47** |
| **ಬಿ) ಸಾಮಾನ್ಯ ಮೀಸಲು** | | | |
| ಸಾಮಾನ್ಯ ಮೀಸಲು | 775.86 | 775.86 | 775.86 |
| **ಸಾಮಾನ್ಯ ಮೀಸಲಿನ ಒಟ್ಟು** | 775.86 | 775.86 | 775.86 |
| ಒಟ್ಟು (ಎ+ಬಿ) | **1,912.54** | **1,771.41** | **1,656.33** |

**11 ಮುಂದೂಡಿದ ತೆರಿಗೆ ಆಸ್ತಿ/(ಹೊಣೆಗಾರಿಕೆ) (ನಿವ್ವಳ)** (ರೂ. ಕೋಟಿಗಳಲ್ಲಿ)

| ವಿವರಗಳು | ಮಾರ್ಚ್ 31 2023ರಂತೆ | ಮಾರ್ಚ್ 31 2022 ರಂತೆ |
|---|---|---|
| ಪ್ರಾರಂಭಿಕ ಮುಂದೂಡಿದ ತೆರಿಗೆ ಆಸ್ತಿ/(ಹೊಣೆಗಾರಿಕೆ) | -158.77 | -160.33 |
| ಕಳೆದು: ಆಖೈರು ಮುಂದೂಡಿದ ತೆರಿಗೆ ಆಸ್ತಿ/(ಹೊಣೆಗಾರಿಕೆ) | -129.73 | -158.77 |
| **ಲಾಭ ಮತ್ತು ನಷ್ಟದ ಲೆಕ್ಕಕ್ಕೆ ವರ್ಗಾಯಿಸಿರುವುದು** | **-29.04** | **-1.56** |
| ಈ ಕಾರಣದಿಂದ ಮುಂದೂಡಿದ ತೆರಿಗೆ ಆಸ್ತಿಗಳು: | | |
| ಮುಂದೂಡಿದ ತೆರಿಗೆ ಆಸ್ತಿ/(ಹೊಣೆಗಾರಿಕೆ) ಲೆಕ್ಕಾಚಾರ | | |
| ರಜೆ ಸಂಬಳ | 3.47 | 4.32 |
| ಗ್ರಾಚ್ಯುಯಿಟಿ | 0.64 | 0.44 |
| ವಸೂಲಾಗದ ಮತ್ತು ಸಂದೇಹಾಸ್ಪದ ಸಾಲಗಳಿಗೆ ಏರ್ಪಾಡು | 6.94 | 0.00 |
| ಇತರೇ ಅವಕಾಶಗಳು | 14.69 | 0.00 |
| ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಮೇಲೆ ಸವಕಳಿ | 3.29 | -3.02 |
| ಇತರೆ ಸಮಗ್ರ ಆದಾಯದ ಮೇಲೆ ಆದಾಯ ತೆರಿಗೆ ಪರಿಣಾಮ | 0.93 | -0.18 |
| **ಒಟ್ಟು** | **29.96** | **1.56** |

